ಕರ್ನಾಟಕ ವಿಧಾನಸಭೆ
ಸೋಮವಾರ ಇಪ್ಪತ್ತೆರಡನೇ ಫೆಬ್ರವರಿ ೧೯೯೩
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ
ಸಭಾಂಗಣದಲ್ಲಿ ಸಂಜೆ ನಾಲ್ಕುಗಂಟೆಗೆ
ಸಮಾವೇಶಗೊಂಡಿತು.
ಅಧ್ಯಕ್ಷರು: (ಶ್ರೀ ವಿ.ಎಸ್. ಕೌಜಲಗಿ)
ಪೀಠವನ್ನು ಅಲಂಕರಿಸಿದ್ದರು.

೧೯೯೩-೯೪ನೇ ಸಾಲಿನ ಆಯವ್ಯಯ ಪತ್ರದ ಮಂಡನೆ

ಅಧ್ಯಕ್ಷರು:- ಈಗ ಮಾನ್ಯ ಮುಖ್ಯ ಮಂತ್ರಿಗಳು ೧೯೯೩-೯೪ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಬೇಕು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಮುಖ್ಯ ಮಂತ್ರಿಗಳು ಕನ್ನಡದಲ್ಲಿ ಮಂಡಿಸಬೇಕೆಂದು ತಮ್ಮ ಮುಖಾಂತರ ಪ್ರಾರ್ಥಿಸುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯ ಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ನಾನು ಈಗ ೧೯೯೩-೯೪ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸುತ್ತಿದ್ದೇನೆ...

ಶ್ರೀ ವಾಟಾಳ್ ನಾಗರಾಜ್:- ನಮಗೆ ಭಾಷಣದ ಪ್ರತಿಗಳು ಬೇಕು. ಆಯವ್ಯಯ ಎಂದರೇನು ಎಂಬುದು ನಮಗೆ ಬೇಕು. ಪ್ರತಿಗಳು ಬೇಕು...

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- I am on a point of order. ನಮಗೆ ಪ್ರತಿಗಳು ಬಂದೇ ಇಲ್ಲ. ನಮಗೆ ಪ್ರತಿಗಳು ಬೇಕು.

ಅಧ್ಯಕ್ಷರು:- ಕಳುಹಿಸಿಕೊಡುತ್ತಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ:- ಮುಖ್ಯ ಮಂತ್ರಿಗಳೇ ಸ್ವಲ್ಪ ಹೊತ್ತು ಇರಿ. ನಮಗೆ ಪ್ರತಿಗಳನ್ನು ಕೊಡಲಿ.

ಅಧ್ಯಕ್ಷರು:- ಕೊಡಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಹೋದವರ್ಷ ಮುಂಚಿತವಾಗಿ ಕೊಟ್ಟಿದ್ದೀರಿ. ಇವತ್ತು ಕೊಟ್ಟಿಲ್ಲ ಇದರಲ್ಲಿ ಮಡಿವಂತಿಕೆ ಏನಿದೆ?

(ಗೊಂದಲ)

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಐದು ನಿಮಿಷ ಸುಧಾರಿಸಿ. ನಮಗೆ ಪ್ರತಿಗಳು ಬರುವವರೆಗೂ ಇರಿ.

ಶ್ರೀ ವಾಟಾಳ್ ನಾಗರಾಜ್:- ನಮಗೆ ಪ್ರತಿಗಳನ್ನು ಕೊಡದಿದ್ದರೆ ಧರಣಿ ಮಾಡುತ್ತೇವೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ:- ಹೋದಸಾರಿ ನಮಗೆಲ್ಲಾ ಪ್ರತಿಗಳು ಸಿಕ್ಕುವಂತೆ ಮಾಡಿ ಆನಂತರ ಓದಿದ್ದಿರಿ.

(ಈ ಹಂತದಲ್ಲಿ ಎಲ್ಲ ಮಾನ್ಯ ಸದಸ್ಯರಿಗೂ ಆಯವ್ಯಯ ಪ್ರತಿಗಳನ್ನು ಹಂಚಲಾಯಿತು. ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯ ಭಾಷಣವನ್ನು ಓದಲು ಪ್ರಾರಂಭಿಸಿದರು.)

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು)
ಸನ್ಮಾನ್ಯ ಸಭಾಧ್ಯಕ್ಷರೇ,

ನಾನು, ಈಗ, ೧೯೯೩-೯೪ ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸುತ್ತಿದ್ದೇನೆ.

೨. ಕಳೆದ ವರ್ಷ, ನಮ್ಮ ರಾಷ್ಟ್ರವು ಆರ್ಥಿಕ, ರಾಜಕೀಯ ಹಾಗೂ ಸಾಮಾಜಿಕ ರಂಗಗಳಲ್ಲಿ ಸಂಕಷ್ಟದ ದಿನಗಳನ್ನು ಎದುರಿಸಿದೆ. ಆದರೆ, ಕೇಂದ್ರ ಸರ್ಕಾರವು ಹೊಸದಾಗಿ ಜಾರಿಗೆ ತಂದಿರುವ ಆರ್ಥಿಕ ಸುಧಾರಣೆಗಳಿಂದ ಅರ್ಥವ್ಯವಸ್ಥೆಯಲ್ಲಿ, ಕ್ರಮಕ್ರಮವಾದ ಏಳಿಗೆ ಉಂಟಾಗಿದೆ. ೧೯೯೧-೯೨ರಲ್ಲಿ ಶೇ. ೧೪ ರಷ್ಟಿದ್ದ ಅಧಿಕ ಹಣದುಬ್ಬರ ಮಟ್ಟ ಈಗ, ಶೇ. ೭ಕ್ಕೆ ಇಳಿದಿದೆ. ಬೆಳವಣಿಗೆಯ ಗತಿ ಈಗ ಸುಧಾರಿಸಿದ್ದು, ೧೯೯೨-೯೩ರ ಅಂತ್ಯದ ವೇಳೆಗೆ ಅದು, ಸುಮಾರು ೪.೨ ರಷ್ಟಾಗುವ ನಿರೀಕ್ಷೆಯಿದೆ. ಅಭಿವೃದ್ಧಿ, ಕ್ರೋಢೀಕರಣ ಹಾಗೂ ಸ್ಥಿರತೆಯ ಪ್ರಕ್ರಿಯೆ ಮುಂದುವರೆಯುತ್ತಿದೆ.

೩. ಕೈಗಾರಿಕೆಗಳಿಗೆ ಲೈಸೆನ್ಸ್ ನೀಡಿಕೆ, ಆಮದು-ರಫ್ತು ವಿದೇಶಿ ವಿನಿಮಯ ನಿಯಂತ್ರಣ ಮುಂತಾದವುಗಳಿಗೆ ಸಂಬಂಧಿಸಿದ ಕೇಂದ್ರ ಸರ್ಕಾರದ ನೀತಿಗಳಲ್ಲಿ ಮಾಡಿದ ಕೆಲವೊಂದು ಬದಲಾವಣೆಗಳು ಸಂಪೂರ್ಣವಾಗಿ ಸರ್ಕಾರದಿಂದಲೇ ಪುರಸ್ಕೃತವಾದ ಅಭಿವೃದ್ಧಿ ಕಾರ್ಯತಂತ್ರವು ಖಾಸಗಿ ಉತ್ಪಾದಕ ಸಾಮರ್ಥ್ಯದಲ್ಲಿನ ಬೆಳವಣಿಗೆಯತ್ತ ವಾಲುತ್ತಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಆದಾಗ್ಯೂ, ಸುವ್ಯವಸ್ಥಿತ ಹಾಗೂ ಸಮತಾ ಸಮಾಜವನ್ನು ರೂಪಿಸಿ ನಡೆಸಿಕೊಂಡು ಬರುವಲ್ಲಿ, ಮಾನವ ಸಂಪನ್ಮೂಲಗಳನ್ನು ಹಾಗೂ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ ಮತ್ತು ಸ್ಪರ್ಧಾತ್ಮಕ ಅರ್ಥವ್ಯವಸ್ಥೆಯ ನಿಯಮಗಳ ವ್ಯಾಪ್ತಿಯೊಳಗೆ ಖಾಸಗಿ ಉದ್ಯಮಗಳು ಕಾರ್ಯನಿರ್ವಹಿಸಬಲ್ಲ ''ಸಮಾನ ಕಾರ್ಯನಿರ್ವಹಣಾ ಕ್ಷೇತ್ರ''ಗಳನ್ನು ಒದಗಿಸುವಲ್ಲಿ ಸರ್ಕಾರ ಪ್ರಮುಖ ಪಾತ್ರ ವಹಿಸುವುದನ್ನು ಮುಂದುವರಿಸಬೇಕಾಗುತ್ತದೆ. ಈ ಕಾರ್ಯತಂತ್ರಕ್ಕನುಸಾರವಾಗಿ ಎಲ್ಲಾ ಆರ್ಥಿಕ ಚಟುವಟಿಕೆಗಳಲ್ಲಿ ಖಾಸಗಿ ಉದ್ಯಮಗಳು ಪಾಲ್ಗೊಳ್ಳುವುದಕ್ಕೆ ಉತ್ತೇಜನ ನೀಡುವುದು ರಾಜ್ಯ ಸರ್ಕಾರದ ನೀತಿಯಾಗಿರುತ್ತದೆ. ಸಮಾಜ ಕಲ್ಯಾಣದ ಸುಧಾರಣೆಗೆ ನೇರವಾಗಿ ನೆರವಾಗದಂಥ ಯಾವುದೇ ಪದ್ಧತಿಗಳು/ಕಾರ್ಯವಿಧಾನಗಳು ಹಾಗೂ ನಿಯಮಗಳು ಅಂಥ ಉತ್ಪಾದಕ ಉದ್ಯಮಗಳಿಗೆ ಅಡ್ಡಿಯಾಗುವಂತಿದ್ದರೆ ಅವುಗಳನ್ನು ಈ ಕಾರ್ಯತಂತ್ರಕ್ಕೆ ಪೂರಕವಾಗಿರುವಂತೆ ಬದಲಾಯಿಸಲಾಗುವುದು.

೪. ಸಾಮಾಜಿಕ-ರಾಜಕೀಯ ರಂಗದಲ್ಲಿ, ಕೋಮುಭಾವನೆಯ ಮೇಲೆ ಆಧಾರಿತವಾದ ರಾಜಕೀಯ ಪ್ರೇರಿತ ಹಿಂಸಾಕೃತ್ಯಗಳು ಭುಗಿಲೆದ್ದುದಕ್ಕೆ ರಾಷ್ಟ್ರವು ಸಾಕ್ಷಿಯಾಗಿತ್ತು. ಈ ಅಪಾಯಕಾರೀ ಬೆಳವಣಿಗೆಯಿಂದಾಗಿ ಹಿಂದೆಂದೂ ಕಾಣದಂತಹ ಕೋಮು ಗಲಭೆಗಳು ಸಂಭವಿಸಿದವು. ಇದರಿಂದ, ಜೀವ ಹಾಗೂ ಆಸ್ತಿಪಾಸ್ತಿಗೆ ಹಾನಿಯಾಗಿರುವುದಷ್ಟೇ ಅಲ್ಲ, ರಾಷ್ಟ್ರದ ಸಮಷ್ಟಿ ಪ್ರಜ್ಞೆಗೆ ಅಳಿಸಿ ಹಾಕಲಾಗದ ಕಳಂಕ ಉಂಟಾಗಿದೆ. ಇದರಿಂದ, ಕರ್ನಾಟಕದಲ್ಲೂ ೭೪ ಜನರು ಸತ್ತದ್ದಲ್ಲದೆ ಹಲವಾರು ಮಂದಿ ಗಾಯಗೊಂಡರು ಹಾಗೂ ಆಸ್ತಿಪಾಸ್ತಿಗೆ ಕೋಟ್ಯಾಂತರ ರೂಪಾಯಿಗಳಷ್ಟು ಹಾನಿಯುಂಟಾಯಿತು. ಈ ಗಲಭೆಗಳ ಪ್ರಮಾಣ ಎಷ್ಟು ವ್ಯಾಪಕವಾಗಿತ್ತೆಂದರೆ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಕೇಂದ್ರ ಸಶಸ್ತ್ರ ಪಡೆಗಳ ನೆರವನ್ನೂ ಪಡೆಯಬೇಕಾಯಿತು. ಈ ಗಲಭೆಗಳಿಂದಾಗಿ ವ್ಯಾಪಾರ ಮತ್ತು ವಾಣಿಜ್ಯದ ಕ್ಷೇತ್ರದ ಮೇಲೆ ಗಣನೀಯ ಪ್ರಮಾಣದ ಪ್ರತಿಕೂಲ ಪರಿಣಾಮ ಉಂಟಾಯಿತು.

೫. ಈ ಗಲಭೆಗಳಿಂದ ಸಂತ್ರಸ್ತರಾದವರಿಗೆ ನೀಡುವಂಥ ಪರಿಹಾರಧನದ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಿದ್ದಲ್ಲದೆ, ಹಾನಿಗೀಡಾದ ಆರಾಧನಾ ಸ್ಥಳಗಳ ದುರಸ್ತಿ, ಉದ್ಯೋಗಾವಕಾಶ, ಮಾಸಾಶನ ಯೋಜನೆ ಇವುಗಳನ್ನೊಳಗೊಂಡ ಹಲವಾರು ಪರಿಹಾರ ಕ್ರಮಗಳನ್ನು ಸರ್ಕಾರ ಆರಂಭಿಸಿದೆ. ಅಲ್ಲದೆ, ತೊಂದರೆಗೊಳಗಾದ ವ್ಯಕ್ತಿಗಳಿಗೆ ಬ್ಯಾಂಕುಗಳು ನೀಡುವ ಸಾಲದ ಮೇಲೆ ಇದ್ದ ೫೦,೦೦೦ ರೂ.ಗಳು ಅಥವಾ ಆದ ನಷ್ಟದ ಶೇಕಡಾ ೩೦ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಅಷ್ಟರ ಗರಿಷ್ಠ ಮಿತಿಯನ್ನು ೧.೦೦ ಲಕ್ಷ ರೂ.ಗಳು ಅಥವಾ ನಷ್ಟದ ಶೇಕಡಾ ೫೦ ರಷ್ಟು ಇವುಗಳಲ್ಲಿ ಯಾವುದು ಕಡಿಮೆಯೋ ಆ ಮಿತಿಗೆ ಏರಿಸಲಾಗಿದೆ. ಆಸ್ತಿಪಾಸ್ತಿಗಳು ಹಾನಿಗೀಡಾಗಿ ತೊಂದರೆಗೊಳಗಾದ ಸಂಸ್ಥೆಗಳಿಗೂ ಇದೇ ರೀತಿಯ ಸಾಲ ಸೌಲಭ್ಯ ಒದಗಿಸಲಾಗುವುದು. ಅಂಥ ಸಾಲಗಳ ಮೇಲಿನ ಸಂಪೂರ್ಣ ಬಡ್ಡಿಗೆ ಸರ್ಕಾರ ಸಹಾಯಧನ ನೀಡುತ್ತದೆ. ಕರ್ನಾಟಕದ ಜನತೆ ಎಲ್ಲಾ ಕೋಮುಶಕ್ತಿಗಳ ವಿರುದ್ಧ ಸಂಘಟಿತರಾಗಿ ನಿಲ್ಲಬೇಕೆಂದು ನಾನು ಘನತೆವೆತ್ತ ಈ ಸದನದ ಮೂಲಕ ಕರ್ನಾಟಕ ಜನತೆಗೆ ಮನವಿ ಮಾಡಿಕೊಳ್ಳುತ್ತೇನೆ.

ಪ್ರಕೃತಿ ವಿಕೋಪಗಳು-ಪರಿಹಾರ

೬. ಕರ್ನಾಟಕವು ಬರಗಾಲ ಹಾಗೂ ಪ್ರವಾಹಗಳಂತಹ ಪರಸ್ಪರ ವ್ಯತಿರಿಕ್ತ ಸ್ವರೂಪದ ಪ್ರಕೃತಿ ವಿಕೋಪಗಳಿಗೆ ತುತ್ತಾಗುತ್ತಲೇ ಬಂದಿದೆ. ಮುಂಗಾರು ಮಳೆ ಎಷ್ಟೊದು ಅನಿಯತವಾಗಿತ್ತೆಂದರೆ ಗುಲ್ಬರ್ಗ, ಬೀದರ್, ರಾಯಚೂರು, ಬಳ್ಳಾರಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ೧೯೯೧ ಮತ್ತು ೧೯೯೨ರಲ್ಲಿ ಕ್ಷಾಮವುಂಟಾಗಿ ಮುಂಗಾರು ಬೆಳೆಗಳು ಹಾಳಾದವು. ೧೯೯೨ರ ಅಕ್ಟೋಬರ್‌ನಲ್ಲಿ ಹಿಂಗಾರು ಮಳೆ ಯದ್ವಾ-ತದ್ವಾ ವರ್ಷಿಸಿದ್ದರಿಂದಾಗಿ ಕರ್ನಾಟಕದ ಉತ್ತರ ಒಳನಾಡುಗಳಲ್ಲಿ ಹಿಂಗಾರು ಬೆಳೆ ಕಾರ್ಯಾಚರಣೆಗಳು ಹಿಮ್ಮೆಟ್ಟಿದವು. ನವೆಂಬರ್ ತಿಂಗಳಲ್ಲಿ ಉಂಟಾದ ವಿನಾಶಕಾರಿ ಚಂಡಮಾರುತದ ಹಾವಳಿಯಿಂದಾಗಿ ಹಲವಾರು ಜನ ಸತ್ತರಲ್ಲದೆ, ಜಾನುವಾರು ಹಾಗೂ ಆಸ್ತಿಪಾಸ್ತಿಗೆ ಬಹಳಷ್ಟು ಹಾನಿಯುಂಟಾಯಿತು. ಧಾರಾಕಾರವಾಗಿ ಸುರಿದ ಮಳೆ ಜಾನುವಾರುಗಳು ಹಾಗೂ ಮೂಲಭೂತ ಸೌಕರ್ಯಗಳಿಗೆ ಹಾನಿಯುಂಟು ಮಾಡಿದ್ದೇ ಅಲ್ಲದೆ ೯೯ ಗ್ರಾಮಗಳನ್ನು ನೀರಿನಲ್ಲಿ ಮುಳುಗಿಸಿತು. ಇದರಿಂದ ೫೧.೯೨ ಲಕ್ಷ ಜನ ತೊಂದರೆಗೊಳಗಾದರು ಮತ್ತು ೩.೧೩ ಲಕ್ಷ ಹೆಕ್ಟೇರುಗಳಲ್ಲಿ ಬೆಳೆ ಹಾನಿಗೀಡಾಯಿತು.

೭. ರಾಜ್ಯಸರ್ಕಾರವು, ತೊಂದರೆಗೊಳಗಾದ ಜನರಿಗೆ ಆಹಾರ, ವಸತಿ ಮತ್ತು ವೈದ್ಯಕೀಯ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಪರಿಹಾರ ಕ್ರಮಗಳನ್ನು ಸಕಾಲದಲ್ಲಿ ಕೈಗೊಂಡಿತು. ಮೃತರ ಹತ್ತಿರದ ಸಂಬಂಧಿಗೆ ಅನುಕಂಪ ಪರಿಹಾರ ನೀಡಿಕೆ, ಜಾನುವಾರು ನಷ್ಟಕ್ಕೆ ಪರಿಹಾರ ಮತ್ತು ಭಾಗಶಃ ಬಿದ್ದುಹೋದ ಮನೆಗಳ ದುರಸ್ತಿ ಹಾಗೂ ಸಂಪೂರ್ಣವಾಗಿ ಬಿದ್ದುಹೋದ ಮನೆಗಳ ಪುನರ್ನಿರ್ಮಾಣ ಹಾಗೂ ಕೃಷಿ ಪರಿಕರಗಳಿಗಾಗಿ ಸಹಾಯಧನ ಮುಂತಾದವುಗಳ ಬಗ್ಗೆ ಸಕಾಲದಲ್ಲಿ ಕ್ರಮ ತೆಗೆದುಕೊಳ್ಳಲಾಯ್ತು. ಪ್ರಕೃತಿ ವಿಕೋಪಗಳ ಈ ಹಾವಳಿಯಿಂದುಂಟಾಗಿರುವ ಅಗಾಧ ಪ್ರಮಾಣದ ಹಾನಿಯನ್ನು ಗಮನದಲ್ಲಿರಿಸಿಕೊಂಡು ರಾಜ್ಯ ಸರ್ಕಾರವು, ಪರಿಹಾರವನ್ನು ಈಗಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ನೀಡುವ ಸಲುವಾಗಿ ಪ್ರಕೃತಿ ವಿಕೋಪ ಪರಿಹಾರ ನಿಯಮಗಳನ್ನು ಸಡಿಲಗೊಳಿಸಿತು. ಈ ಸಂಬಂಧವಾಗಿ, ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರಕ್ಕೆ ಎರಡು ಮನವಿಗಳನ್ನು ಸಲ್ಲಿಸಿ, ಪ್ರಕೃತಿ ವಿಕೋಪಕ್ಕೆ ತುತ್ತಾದವರ ಒಳಿತಿಗಾಗಿ ಕೇಂದ್ರ ಸರ್ಕಾರವು, ತಕ್ಷಣವೇ, ೨೦೦ ಕೋಟಿ ರೂಪಾಯಿಗಳ ಕೇಂದ್ರ ಅನುದಾನವನ್ನು ನೀಡಬೇಕೆಂದು ಕೋರಿದೆ. ಕೇಂದ್ರ ಸರ್ಕಾರವು, ಈಗಾಗಲೇ ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ೨೦.೨೫ ಕೋಟಿ ರೂಪಾಯಿಗಳ ಕೇಂದ್ರದ ಪಾಲನ್ನು ಮುಂಚಿತವಾಗಿ ಬಿಡುಗಡೆ ಮಾಡಿದ್ದು, ಕೇಂದ್ರ ತೆರಿಗೆಯಲ್ಲಿನ ರಾಜ್ಯದ ಪಾಲು ೩೦.೦೦ ಕೋಟಿ ರೂಪಾಯಿಗಳನ್ನು ಸಹ ಮುಂಚಿತವಾಗಿ ಬಿಡುಗಡೆ ಮಾಡಿದೆ. ತೊಂದರೆಗೊಳಗಾದವರಿಗೆ ಪರಿಹಾರ ಒದಗಿಸುವುದಕ್ಕಾಗಿ

ಹೆಚ್ಚಿನ ನಿಧಿಗಳನ್ನು ಪಡೆಯಲು ರಾಜ್ಯ ಸರ್ಕಾರ ತನ್ನ ಪ್ರಯತ್ನಗಳನ್ನು ಮುಂದುವರಿಸಿದೆ. ಈ ಮಧ್ಯೆ ರಾಜ್ಯಸರ್ಕಾರವು ಪ್ರವಾಹ ಪರಿಹಾರ ಕ್ರಮಗಳಿಗಾಗಿ ೫೮.೮೫ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದು, ಬರಗಾಲ ಪ್ರವಾಹ ಪರಿಹಾರ ಕ್ರಮಗಳಿಗಾಗಿ ಒಟ್ಟು ೭೮.೫೪ ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಈ ಬಗೆಯ ವೆಚ್ಚ ಅನಿರೀಕ್ಷಿತವಾದುದಾದರೂ ನೈಸರ್ಗಿಕ ವಿಪತ್ತುಗಳಿಂದ ತೊಂದರೆಗೊಳಗಾಗುವ ಜನರಿಗೆ ಪರಿಹಾರ ಒದಗಿಸುವುದು ರಾಜ್ಯ ಸರ್ಕಾರದ ಮೊದಲ ಆದ್ಯತೆಯಾಗಿರುವುದರಿಂದ ಇದು ಅನಿವಾರ್ಯ.

೮. ಮಾನ್ಯ ಪ್ರಧಾನಮಂತ್ರಿಯವರು ಸೂಚಿಸಿರುವಂತೆ, ಚಂಡಮಾರುತ ದಿಂದುಂಟಾದ ಪ್ರವಾಹಗಳಿಂದ ಹಾನಿಗೊಳಗಾದ ಮೂಲಭೂತ ಸೌಕರ್ಯಗಳನ್ನು ಪೂರ್ವಸ್ಥಿತಿಗೆ ತರುವುದಕ್ಕಾಗಿ ಮತ್ತು ಸಮುದ್ರ ಕೊರೆತವನ್ನು ತಡೆಗಟ್ಟುವುದಕ್ಕಾಗಿ ಹಾಗೂ ಪ್ರವಾಹ ನಿಯಂತ್ರಣ ಕ್ರಮಗಳಿಗಾಗಿ ರಾಜ್ಯ ಸರ್ಕಾರವು ದೀರ್ಘಾವಧಿ ಯೋಜನೆಯೊಂದನ್ನು ಈಗಾಗಲೇ ಸಿದ್ಧಗೊಳಿಸಿದ್ದು, ಈ ಯೋಜನೆಯನ್ನು ಕೇಂದ್ರಸರ್ಕಾರದ ಮತ್ತು ನೆರವು ನೀಡುವಂಥ ವಿದೇಶೀ ಏಜೆನ್ಸಿಗಳ ಮುಂದಿಡಲು ನಾವು ಯೋಜಿಸಿದ್ದೇವೆ. ಈ ಯೋಜನೆಯಲ್ಲಿ ಒಳಗೊಂಡಿರುವ ಪ್ರಮುಖ ಬಾಬುಗಳು ಈ ರೀತಿ ಇವೆ :-

ಕ್ರಮ ಸಂಖ್ಯೆ	ವಿವರ	ಯೋಜನೆಯ ಅವಧಿ (ವರ್ಷಗಳು)	ವೆಚ್ಚ (ಕೋಟಿ ರೂ.ಗಳಲ್ಲಿ)
೧.	ಬೃಹತ್ ನೀರಾವರಿ	೧	೨೨.೮೨
೨.	ಸಣ್ಣ ನೀರಾವರಿ	೨	೪೦.೮೧
೩.	ಪ್ರವಾಹ ನಿಯಂತ್ರಣ ಕ್ರಮಗಳು	೧	೧೧.೦೦
೪.	ಸಮುದ್ರ ಕೊರೆತವನ್ನು ತಡೆಗಟ್ಟುವ ಕಾಮಗಾರಿಗಳು	೪	೧೬೫.೦೦
೫.	ರಸ್ತೆಗಳ ಪುನರ್ನಿರ್ಮಾಣ		೪೫೦.೦೦
೬.	ಪ್ರವಾಹ ತಡೆಗಟ್ಟಲು ಅರಣ್ಯ ನಿರ್ಮಾಣ	೫	೪೦.೨೪
೭.	ವಿದ್ಯುಚ್ಛಕ್ತಿ ರವಾನೆ ಮತ್ತು ವಿತರಣಾ ವ್ಯವಸ್ಥೆ	೫	೧೦೯.೨೧
೮.	ವಸತಿ	೨	೮೮.೦೦
	ಒಟ್ಟು		೯೨೭.೦೮

ಮನೆಗಳು ಸಂಪೂರ್ಣವಾಗಿ ಕುಸಿದು ಬಿದ್ದ ಕಾರಣದಿಂದ ನಿರ್ವಸಿತರಾದ ವ್ಯಕ್ತಿಗಳಿಗೆ ಬಹುಕಾಲ ಬಾಳಿಕೆ ಬರುವ ಮನೆಗಳನ್ನು ಒದಗಿಸಲು ಒಂದು ಪ್ರತ್ಯೇಕ ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದ್ದು ಅದನ್ನು, ನೆರವು ಕೋರಿ ಕೇಂದ್ರ ಸರ್ಕಾರಕ್ಕೆ ಮತ್ತು ಹುಡ್ಕೋಗೆ ಕಳಿಸಲಾಗುವುದು.

ರಾಜ್ಯದ ಹಣಕಾಸು ಸ್ಥಿತಿ

೯. ಬರಗಾಲ, ಪ್ರವಾಹಗಳು ಮತ್ತು ಗಲಭೆಗಳು ರಾಜ್ಯದ ಅರ್ಥವ್ಯವಸ್ಥೆ ಮತ್ತು ಹಣಕಾಸು ಸ್ಥಿತಿಯ ಮೇಲೆ ದುಷ್ಪರಿಣಾಮವನ್ನುಂಟು ಮಾಡಿವೆ. ನಾವು ಒಂದೆಡೆ, ಪರಿಹಾರ ಕ್ರಮಗಳಿಗಾಗಿ ಭಾರಿ ಪ್ರಮಾಣದ ಹಾಗೂ ಅನಿರೀಕ್ಷಿತವಾದ ವೆಚ್ಚ ಮಾಡಬೇಕಾಯಿತು. ಇನ್ನೊಂದೆಡೆ, ಗಲಭೆಗಳ ಕಾರಣದಿಂದಾಗಿ ತೆರಿಗೆ ಸಂಗ್ರಹಣೆ ಕಾರ್ಯಕ್ಕೂ ಅಡಚಣೆ ಉಂಟಾಯಿತು. ಇದಲ್ಲದೆ, ರಾಜ್ಯದ ಹಣಕಾಸು ಸ್ಥಿತಿಯ ಮೇಲೆ ತೀವ್ರತರವಾದ ಹೊರೆಯನ್ನು ಹೇರುವ ಅಂಶಗಳಿಂದಾಗಿ ರಾಜ್ಯದ ರಾಜಸ್ವ ಲೆಕ್ಕದ ಮೇಲಿನ ವೆಚ್ಚವು, ಹೆಚ್ಚುತ್ತಲೇ ಇದೆ. ಅವುಗಳ ಪೈಕಿ ಕೆಲವು ಬಾಬುಗಳಿಗೆ ಸಂಬಂಧಿಸಿದ ವಿವರಗಳನ್ನು ಮಾನ್ಯ ಸದಸ್ಯರಿಗೆ ತಿಳಿಸಬಯಸುತ್ತೇನೆ.

ಸಾರ್ವಜನಿಕ ಸಾಲ

೧೦. ಕಳೆದ ಕೆಲವು ವರ್ಷಗಳಲ್ಲಿ, ರಾಜ್ಯವು ಗಣನೀಯ ಪ್ರಮಾಣದ ಸಾಲ ತೆಗೆದುಕೊಂಡಿದೆ. ಈ ಸಾಲಗಳಲ್ಲಿ ಹೆಚ್ಚಿನವು, ಸಾಲದ ರೂಪದಲ್ಲಿ ಪಡೆದ ಕೇಂದ್ರದ ನೆರವು, ಮಾರುಕಟ್ಟೆ ಸಾಲಗಳು, ಸಣ್ಣ ಉಳಿತಾಯದ ಮೇಲೆ ಪಡೆದ ಮತ್ತು ವಿದೇಶಿ ನೆರವಿನ ಯೋಜನೆಗಳಿಗಾಗಿ ಪಡೆದ ಸಾಲಗಳಾಗಿವೆ. ಪ್ರಸ್ತುತ, ಈ ಸಾಲಗಳ ಮೇಲಿನ ಸರಾಸರಿ ಬಡ್ಡಿ ದರ ಶೇಕಡಾ ೧೨.೫ ಕಳೆದ ಕೆಲವು ವರ್ಷಗಳಲ್ಲಿ ಪಡೆದ ಸಾಲದ ಮೊತ್ತ ಮತ್ತು ಮರುಪಾವತಿ ಮಾಡಬೇಕಾದ ಅಸಲು ಮತ್ತು ಬಡ್ಡಿಯ ಹೊರೆಗೆ ಸಂಬಂಧಿಸಿದ ಅಂಕಿಅಂಶಗಳು ಹೀಗಿವೆ :-

ಕೋಟಿ. ರೂ.ಗಳಲ್ಲಿ

ವರ್ಷ	ವರ್ಷದಲ್ಲಿ ಪಡೆದ ಒಟ್ಟುಸಾಲ	ಅಸಲಿನ ಮರು ಸಂದಾಯ ಮತ್ತು ಬಡ್ಡಿ	ಸರ್ಕಾರದ ಒಟ್ಟು ವೆಚ್ಚದಲ್ಲಿ ಅಸಲಿನ ಮರುಸಂದಾಯ ಮತ್ತು ಬಡ್ಡಿಯ ಶೇಕಡಾ ಪ್ರಮಾಣ
೧೯೮೦-೮೧	೧೫೧.೩೩	೧೧೯.೫೬	೯.೩೯
೧೯೮೫-೮೬	೬೬೩.೨೬	೪೭೭.೪೬	೧೬.೦೩
೧೯೯೦-೯೧	೬೦೪.೯೧	೫೯೦.೭೦	೧೧.೮೬
೧೯೯೧-೯೨	೭೧೩.೯೧	೬೮೨.೧೭	೧೦.೯೨
೧೯೯೨-೯೩	೧೦೧೯.೧೯	೮೨೧.೩೬	೧೧.೩೫

೧೧. ಈ ಅಂಕಿಅಂಶಗಳಿಂದ, ಸಾಲವು ಗಣನೀಯ ಪ್ರಮಾಣದ್ದು ಮತ್ತು ದುಬಾರಿಯಾಗಿದ್ದು ಸಾಲದ ಮರುಪಾವತಿ ಮತ್ತು ಬಡ್ಡಿಸಂದಾಯದ ಹೊರೆ ಅಧಿಕವಾಗಿರುವುದು ಹಾಗೂ ಈ ನಿಧಿಗಳ ವಿನಿಯೋಗದಿಂದ ರಾಜ್ಯ ಬೊಕ್ಕಸಕ್ಕೆ ದೊರೆತಿರುವ ಪ್ರತಿಫಲ ತೀರಾ ಗೌಣ ಎಂಬುದು ಕಂಡುಬರುತ್ತದೆ. ಆದ್ದರಿಂದ ಸಾಲವಾಗಿ ಪಡೆದ ನಿಧಿಗಳನ್ನು ನ್ಯಾಯಯುತವಾಗಿ ಬಳಸಿಕೊಂಡು, ಯುಕ್ತ ಹಣಕಾಸು ಪ್ರತಿಫಲವಾದರೂ ರಾಜ್ಯಕ್ಕೆ ದೊರೆಯುವಂತೆ ಮಾಡುವ ಅಗತ್ಯವಿದೆ. ಆದರೆ, ಈ ಸಾಲದ ಮರುಪಾವತಿಯ ಭಾರಿ ಹೊರೆಯನ್ನು ಗಮನದಲ್ಲಿಟ್ಟುಕೊಂಡು ಸಾಲವನ್ನು ಭಾಗಶಃ ಮನ್ನಾ ಮಾಡುವ ಅಥವಾ ರಾಜ್ಯವು ಕೇಂದ್ರಕ್ಕೆ ಮಾಡಬೇಕಾದ ಸಾಲದ ಮರುಪಾವತಿಯ ಅವಧಿಯನ್ನು ಪುನಃ ನಿಗದಿಪಡಿಸುವ ವಿಷಯವನ್ನು ಪರಿಶೀಲಿಸುವಂತೆ ರಾಜ್ಯ ಸರ್ಕಾರವು ೧೦ನೇ ಹಣಕಾಸು ಆಯೋಗವನ್ನು ಕೋರಲಿದೆ.

ಸಂಬಳ

೧೨. ಸರ್ಕಾರಿ ವೆಚ್ಚದ ಮತ್ತೊಂದು ಪ್ರಮುಖ ಬಾಬು ಎಂದರೆ ಸಂಬಳ. ವರ್ಷದಿಂದ ವರ್ಷಕ್ಕೆ ಈ ವೆಚ್ಚ ಗಣನೀಯವಾಗಿ ಏರುತ್ತಲೇ ಇದೆ. ವಿವರ ಹೀಗಿದೆ :

ಕೋಟಿ ರೂ.ಗಳಲ್ಲಿ

ವರ್ಷ	ತುಟ್ಟಿಭತ್ಯ ಸೇರಿ ಸಂಬಳದ ಮೇಲಿನ ವೆಚ್ಚ	ಸಂಚಿತ ನಿಧಿಯಿಂದ ಒಟ್ಟು ವೆಚ್ಚ (ಅರ್ಥೋಪಾಯ ಮುಂಗಡ ಹೊರತುಪಡಿಸಿ)	ಒಟ್ಟು ವೆಚ್ಚದಲ್ಲಿ ಸಂಬಳದ ಶೇಕಡಾ ಪ್ರಮಾಣ
೧	೨	೩	೪
೧೯೮೦-೮೧	೨೬೩.೦೦	೧೨೭೨.೯೬	೨೦.೬೬
೧೯೮೫-೮೬	೫೬೪.೯೧	೨೯೭೯.೧೬	೧೮.೯೬
೧೯೯೦-೯೧	೧೨೮೩.೦೫	೪೯೭೮.೭೭	೨೫.೭೭
೧೯೯೧-೯೨	೧೪೬೧.೮೭	೬೨೪೮.೨೪	೨೩.೪೦
೧೯೯೨-೯೩ಬ.ಅಂ.	೧೯೦೪.೫೯	೭೨೩೭.೩೭	೨೬.೩೨

೧೩. ೧೯೮೭-೮೮ರಿಂದೀಚೆಗೆ, ತುಟ್ಟಿಭತ್ಯ ನೀಡಿಕೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ತುಟ್ಟಿಭತ್ಯೆಯ ಸೂತ್ರವನ್ನೇ ನಾವು ಅನುಸರಿಸುತ್ತಿರುವ ಪರಿಣಾಮವಾಗಿ ಕೇಂದ್ರ ಸರ್ಕಾರವು ಹೆಚ್ಚುವರಿ ಕಂತನ್ನು ನೀಡಿದ ಪ್ರತಿಬಾರಿಯೂ ನಾವು ತುಟ್ಟಿಭತ್ಯವನ್ನು ಏರಿಸಬೇಕಾದ ಕಾರಣ ಇತ್ತೀಚಿನ ವರ್ಷಗಳಲ್ಲಿ ಸಂಬಳದ ಬಾಬಿನಲ್ಲಿ ತೀವ್ರ ಏರಿಕೆ ಉಂಟಾಗಿದೆ. ತುಟ್ಟಿಭತ್ಯೆಯ ಏರಿಕೆಯನ್ನು ಕೇಂದ್ರವು ಪ್ರಕಟಿಸುವುದಕ್ಕೆ ಮೊದಲು ರಾಜ್ಯಗಳೊಂದಿಗೆ ಸಹ ಸಮಾಲೋಚಿಸಬೇಕೆನ್ನುವ ಅಂಶ ಒಳಗೊಂಡಿರುವ ರಾಷ್ಟ್ರೀಯ ಕಾರ್ಯನೀತಿಯೊಂದನ್ನು ರೂಪಿಸಬೇಕೆಂಬ ರಾಜ್ಯ ಸರ್ಕಾರದ ಕೋರಿಕೆಯನ್ನು ಕೇಂದ್ರ ಸರ್ಕಾರವು ಇನ್ನೂ ಒಪ್ಪಿಕೊಂಡಿಲ್ಲ. ಜಿಲ್ಲಾ ಪರಿಷತ್‌ಗಳು, ಸ್ಥಳೀಯ ಮಂಡಳಿಗಳು ಇತ್ಯಾದಿಗಳಲ್ಲಿರುವ ಹುದ್ದೆಗಳೂ ಸೇರಿದಂತೆ ರಾಜ್ಯದಲ್ಲಿ ಒಟ್ಟು ೫.೭೬ ಲಕ್ಷ ಹುದ್ದೆಗಳು ಇವೆ. ಈ ಪೈಕಿ, ಶಿಕ್ಷಣ, ಆರೋಗ್ಯ ಮತ್ತು ಸಮಾಜಕಲ್ಯಾಣ ವಲಯಗಳಲ್ಲಿ ಸುಮಾರು ೩.೦೭ ಲಕ್ಷ ಹುದ್ದೆಗಳು ಇದ್ದು ಇವು, ಒಟ್ಟು ಹುದ್ದೆಗಳ ಶೇ. ೫೩.೩೦ ರಷ್ಟಾಗುತ್ತವೆ. ಇನ್ನುಳಿದ ಹುದ್ದೆಗಳು ರೆವಿನ್ಯೂ, ಪೋಲೀಸ್, ಸಾಮಾನ್ಯ ಆಡಳಿತ, ಕೈಗಾರಿಕೆಗಳು ಮತ್ತು ಆರ್ಥಿಕ ಸೇವೆಗಳ ವಲಯಗಳಲ್ಲಿವೆ. ಹೆಚ್ಚುವರಿ ಸಿಬ್ಬಂದಿಯನ್ನು ಗುರುತಿಸುವ ಮತ್ತು ಹೆಚ್ಚುವರಿ ಮಾನವ ಶಕ್ತಿಯ ಅಗತ್ಯತೆ ನಿಜವಾಗಿಯೂ ಇರುವಂತಹ ಇಲಾಖೆಗಳಿಗೆ ಅಂಥ ಸಿಬ್ಬಂದಿಯನ್ನು ನಿಯೋಜಿಸುವ ಸಲುವಾಗಿ ಪ್ರತಿಯೊಂದು ಇಲಾಖೆಯ ಅಗತ್ಯತೆಯನ್ನು ಪರಿಶೀಲಿಸಲಾಗುವುದು. ಈ ಕಾರ್ಯ ೧೯೯೩-೯೪ರಲ್ಲಿ ಪ್ರಾರಂಭವಾಗಲಿದೆ ಮತ್ತು ಸಂಬಳ ಹಾಗೂ ತುಟ್ಟಿಭತ್ಯದ ವೆಚ್ಚವು, ಒಟ್ಟುವೆಚ್ಚದ ಶೇ ೨೫ ರಷ್ಟನ್ನು ಮೀರದಂತೆ ನೋಡಿಕೊಳ್ಳುವುದು ನಮ್ಮ ದೀರ್ಘಾವಧಿ ಗುರಿಯಾಗಿದೆ.

ಸಹಾಯಧನ

೧೪. ಹಲವಾರು ವರ್ಷಗಳಿಂದ ಅಳವಡಿಸಿಕೊಂಡು ಬಂದಿರುವ ಸರ್ಕಾರದ ಕಾರ್ಯನೀತಿಯ ಭಾಗವಾಗಿ, ರಾಜ್ಯಸರ್ಕಾರವು ವಿವಿಧ ವಲಯಗಳಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯಧನವನ್ನು ನೀಡುತ್ತಿದೆ. ಸರ್ಕಾರ ನೀಡುತ್ತಿರುವ ಕೆಲವು ಪ್ರಮುಖ ಸಹಾಯಧನಗಳ ವಿವರ ಹೀಗಿದೆ:

ಕೋಟಿ ರೂ.ಗಳಲ್ಲಿ

	ಸಹಾಯಧನದ ಸ್ವರೂಪ	೧೯೯೨-೯೩
೧.	ಉನ್ನತ ಶಿಕ್ಷಣ ಸಹಾಯಧನ	೨೦೯.೦೨
೨.	ನೀರಾವರಿ ಸಹಾಯಧನ	೧೪೯.೪೩
೩.	ಗ್ರಾಮೀಣ ವಿದ್ಯುದೀಕರಣ ಸಹಾಯಧನ	೧೧೧.೩೩
೪.	ಆಹಾರ ಸಹಾಯಧನ	೬೫.೦೦
೫.	ಗೃಹನಿರ್ಮಾಣ ಸಹಾಯಧನ	೬೨.೯೮
೬.	ರೈತರಿಗೆ ಋಣಪರಿಹಾರ ಮತ್ತು ಬಡ್ಡಿ ಸಹಾಯಧನ	೫೦.೦೨
೭.	ಸಾರಿಗೆ ಸಹಾಯಧನ	೨೫.೦೦
೮.	ನಗರ ನೀರು ಸರಬರಾಜು ಸಹಾಯಧನ	೧೬.೯೦
೯.	ಕೈಗಾರಿಕಾ ಸಹಾಯಧನ	೧೫.೦೦
	ಒಟ್ಟು	೭೦೪.೬೮

೧೫. ಈ ಪ್ರಮುಖ ಸಹಾಯಧನಗಳ ಒಟ್ಟು ಮೊತ್ತವು, ಸರ್ಕಾರದ ವೆಚ್ಚದ ಶೇಕಡ ೯.೭೩ ರಷ್ಟಾಗುತ್ತದೆ. ಇದಲ್ಲದೆ, ಇತರೆ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯಧನಗಳನ್ನು ಸಹಾ ನೀಡಲಾಗುತ್ತಿದೆ. ನಿಧಿಗಳನ್ನು ಪಡೆದುಕೊಳ್ಳಲು ಆಗುತ್ತಿರುವ ದುಬಾರಿ ವೆಚ್ಚವನ್ನು ಗಮನದಲ್ಲಿಟ್ಟುಕೊಂಡು ಸಹಾಯಧನ ಉಪಯುಕ್ತವಾದುದಾಗಿರಬೇಕು ಮತ್ತು ಅದು ಪರಿಣಾಮಕಾರಿಯಾಗಿ ಬಳಕೆಯಾಗಬೇಕು ಎಂಬ ಮಾನದಂಡದ ಅನುಸಾರ ಸಹಾಯಧನದ ಪ್ರತಿಯೊಂದು ಬಾಬನ್ನು ವಿಶ್ಲೇಷಿಸಬೇಕಾದುದು ಹಾಗೂ ಪುನರ್ ಪರಿಶೀಲಿಸುವುದು ಅತ್ಯಗತ್ಯ.

೧೬. ವೇತನ, ನಿವೃತ್ತಿ ವೇತನ, ಸಾಲ ಮರುಪಾವತಿ ಮತ್ತು ಬಡ್ಡಿ ಸಂದಾಯದ ಹೊರೆ ಹಾಗೂ ಸಹಾಯಧನಗಳ ಮೇಲಿನ ವೆಚ್ಚದ ಸಂಕ್ಷಿಪ್ತ ವಿವರ ಹೀಗಿದೆ :

ಕೋಟಿ ರೂ.ಗಳಲ್ಲಿ

ಕ್ರಮ ಸಂಖ್ಯೆ	ಬಾಬು	ಮೊಬಲಗು	ಒಟ್ಟು ವೆಚ್ಚದಲ್ಲಿ ಶೇಕಡಾ ಪ್ರಮಾಣ
೧.	ವೇತನ	೧೯೦೪.೫೯	೨೬.೩೨
೨.	ಸಾಲ ಮರುಪಾವತಿ ಮತ್ತು ಬಡ್ಡಿ ಸಂಧಾಯದ ಹೊರೆ	೮೨೧.೩೬	೧೧.೩೫
೩.	ಪ್ರಮುಖ ಸಹಾಯಧನಗಳು	೭೦೪.೬೮	೯.೭೩
೪.	ಕಲ್ಯಾಣ ಮಾಸಾಶನ ಸೇರಿದಂತೆ ನಿವೃತ್ತಿ ವೇತನ	೪೨೬.೮೮	೫.೯೦
	ಒಟ್ಟು	೩೮೫೭.೫೧	೫೩.೩೦

ಒಟ್ಟು ವೆಚ್ಚದಲ್ಲಿ ಶೇ. ೫೩.೩೦ ರಷ್ಟನ್ನು ಈ ಬಾಬುಗಳಿಗೇ ವೆಚ್ಚ ಮಾಡುತ್ತಿರುವುದನ್ನು ಕಾಣಬಹುದು. ಉಳಿದ ಶೇ. ೪೬.೭೦ ರಷ್ಟರಲ್ಲಿ ಸಾಮಾನ್ಯ ನಿರ್ವಹಣೆ ಮತ್ತು ಅಭಿವೃದ್ಧಿಯೇತರ ವೆಚ್ಚಗಳಿಗೆ ಹಣ ಒದಗಿಸಿದ ನಂತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಮತ್ತು ತೀರಾ ಅಗತ್ಯವಾದ ಬಂಡವಾಳ ಹೂಡಿಕೆಗೆ ಉಳಿಯವ ಹಣ ತುಂಬಾ ಕಡಿಮೆ.

ಸೇವಾ ವೆಚ್ಚ

೧೭. ಸರ್ಕಾರವು, ಆಡಳಿತ, ಸಾಮಾಜಿಕ ಅಥವಾ ಆರ್ಥಿಕ ಸ್ವರೂಪದ ಹಲವು ಬಗೆಯ ಸೇವೆಗಳನ್ನು ಒದಗಿಸುತ್ತಿದೆ. ಈ ಸೇವೆಗಳನ್ನು ಒದಗಿಸುತ್ತಿರುವ ಸಂಸ್ಥೆಗಳ ಕಾರ್ಯಸಾಧನೆಯ ಮಾನದಂಡವನ್ನು ಗಮನದಲ್ಲಿಟ್ಟುಕೊಂಡು, ಅವು ಒದಗಿಸುತ್ತಿರುವ ಪ್ರತಿಯೊಂದು ಸೇವೆಯ ವೆಚ್ಚವನ್ನು ಕಾಲಬದ್ಧ ಅವಧಿಯೊಳಗೆ ವಿಶ್ಲೇಷಿಸುವುದು ಸರ್ಕಾರದ ಪ್ರಯತ್ನವಾಗಿರುತ್ತದೆ. ಸೇವಾ ಗುಣಮಟ್ಟವನ್ನು ಕಾಯ್ದುಕೊಳ್ಳುವುದಷ್ಟೇ ಅಲ್ಲದೆ ಅಂತಹ ಸೇವೆಗಳ ವೆಚ್ಚವನ್ನು ಕಡಿಮೆ ಮಾಡುವ ಸಲುವಾಗಿ ಈ ಸಂಸ್ಥೆಗಳಲ್ಲಿ ಅನುತ್ಪಾದಕ ಚಟುವಟಿಕೆಗಳನ್ನು ನಿವಾರಿಸಲಾಗುವುದು. ಸೇವೆಗಳನ್ನು ಒದಗಿಸುವುದಕ್ಕೆ ತಗಲುವ ವೆಚ್ಚವನ್ನು ಕಡಿಮೆ ಮಾಡುವ ಸಲುವಾಗಿ, ಅಧಿಕ ಪ್ರಮಾಣದ ಸರಕು ದಾಸ್ತಾನು ಅಥವಾ ಹೆಚ್ಚುವರಿ ಸಿಬ್ಬಂದಿಯನ್ನು ಹೊಂದಿರುವ ಸೇವಾ ಸಂಸ್ಥೆಗಳನ್ನು ವ್ಯಾಪಕ ಪರಿಶೀಲನೆಗೆ ಒಳಪಡಿಸಲಾಗುವುದು. ಆದರೆ, ವಿದ್ಯುತ್, ಸಾರಿಗೆ, ಉನ್ನತ ಶಿಕ್ಷಣ, ನಗರ ನೀರು ಸರಬರಾಜು ಮುಂತಾದ ಕೆಲವೊಂದು ವಲಯಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸಂಸ್ಥೆಗಳಿಗೆ ಯಾವ ಉದ್ದೇಶಗಳಿಗಾಗಿ ಅವುಗಳನ್ನು ಸ್ಥಾಪಿಸಲಾಯಿತೋ ಆ ಉದ್ದೇಶಗಳನ್ನು ಅವು ಈಡೇರಿಸುವುದಕ್ಕೋಸ್ಕರ ಅವುಗಳಿಗೆ ಸಾಕಷ್ಟು ಆದಾಯ ಬರುವಂತೆ ಮಾಡುವ ದೃಷ್ಟಿಯಿಂದ ಸೇವಾ ವೆಚ್ಚಗಳಲ್ಲಿ ಸುಧಾರಣೆ ತರುವ ಅಗತ್ಯವಿದೆಯೆಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು.

೧೮. ಭಾರಿ ವೆಚ್ಚದ ಕೆಲವು ಬಾಬುಗಳನ್ನು ನಾನು ಇಲ್ಲಿ ಸಂಕ್ಷಿಪ್ತವಾಗಿ ಹೇಳುವ ಪ್ರಯತ್ನ ಮಾಡಿದ್ದೇನೆ ಮತ್ತು ಈ ಬಾಬುಗಳಿಗೆ ತುರ್ತು ಗಮನ ಹರಿಸುವ ಅಗತ್ಯವಿದೆಯೆಂದು ನಾನು ಭಾವಿಸುತ್ತೇನೆ. ಈ ಬಾಬುಗಳ ಮೇಲಿನ ವೆಚ್ಚವನ್ನು ನಿಯಂತ್ರಿಸದಿದ್ದರೆ ಅಭಿವೃದ್ಧಿ ಚಟುವಟಿಕೆಗಳಿಗೆ ಹಣ ಒದಗಿಸಲು ಸರ್ಕಾರಕ್ಕೆ ತುಂಬಾ ಕಷ್ಟವಾಗುತ್ತದೆ.

ಸಂಪನ್ಮೂಲ ಸಂಗ್ರಹಣೆ

೧೯. ಕರ್ನಾಟಕವು ಇತ್ತೀಚಿನ ದಿನಗಳಲ್ಲಿ ತನ್ನ ಆದಾಯವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲು ಸಮರ್ಥವಾಗಿದ್ದು, ಪರಿಣಾಮವಾಗಿ, ರಾಜ್ಯದ ಅಭಿವೃದ್ಧಿ ಪ್ರಕ್ರಿಯೆಗೆ ಉತ್ತೇಜನ ನೀಡುವುದು ಸಾಧ್ಯವಾಗಿದೆ. ಈ ಸಂಪನ್ಮೂಲದಲ್ಲಿ ಹೆಚ್ಚಿನ ಭಾಗವು ತೆರಿಗೆ ರೂಪದಲ್ಲೇ ಬರುತ್ತದೆ. ಆದರೆ, ಒಂದು ನಿರ್ದಿಷ್ಟ ಮಿತಿಯನ್ನು ಮೀರಿ ತೆರಿಗೆ ವಿಧಿಸುವುದು ಉತ್ಪಾದಕತೆಗೆ ಧಕ್ಕೆ ಉಂಟುಮಾಡುವ ಸಾಧ್ಯತೆ ಇರುವುದರಿಂದ ಒಂದು ನಿರ್ದಿಷ್ಟ ಮಿತಿಗಿಂತ ಹೆಚ್ಚಿಗೆ ತೆರಿಗೆ ವಿಧಿಸಲಾಗುವುದಿಲ್ಲ. ಹಿಂದಿನ ಕೆಲವು ವರ್ಷಗಳಲ್ಲಿ ರಾಜ್ಯದ ಸ್ಥಳೀಯ ಉತ್ಪನ್ನ (ಎಸ್‌ಡಿಪಿ) ಮತ್ತು ತೆರಿಗೆಯ ನಡುವಣ ಅನುಪಾತವನ್ನು ಈ ಮುಂದಿನ ತಃಖ್ತೆಯು ತೋರಿಸುತ್ತದೆ.

ಕೋಟಿ ರೂಪಾಯಿಗಳಲ್ಲಿ

ವರ್ಷ	ತೆರಿಗೆ ಸಂಪನ್ಮೂಲ	ರಾಜ್ಯ ಸ್ಥಳೀಯ ಉತ್ಪನ್ನ	ರಾಜ್ಯ ಸ್ಥಳೀಯ ಉತ್ಪನ್ನದಲ್ಲಿ ತೆರಿಗೆ ಸಂಪನ್ಮೂಲದ ಶೇಕಡಾ ಪ್ರಮಾಣ
೧	೨	೩	೪
೧೯೮೦-೮೧	೪೭೪.೭೦	೫೯೬೪.೦೩	೭.೯೬
೧೯೯೦-೯೧	೨೩೩೨.೧೨	೨೧೩೨೮.೨೯	೧೦.೯೩
೧೯೯೧-೯೨	೨೯೦೦.೨೦	೨೫೪೩೫.೦೦	೧೧.೪೦
೧೯೯೨-೯೩	೩೪೭೮.೧೧	೨೮೨೬೫.೦೦	೧೨.೩೧

ವರ್ಷದಿಂದ ವರ್ಷಕ್ಕೆ, ರಾಜ್ಯ ಸ್ಥಳೀಯ ಉತ್ಪನ್ನ ಹಾಗೂ ತೆರಿಗೆ ನಡುವಿನ ಅನುಪಾತವು ಕ್ರಮೇಣ ಹೆಚ್ಚುತ್ತಿರುವುದನ್ನು ಕಾಣಬಹುದಾಗಿದೆ. ಆದ್ದರಿಂದ, ತೆರಿಗೆ ಸೋರಿಕೆಯನ್ನು ತಡೆಗಟ್ಟಲು ಸಮರ್ಥವಾಗುವಂತೆ ತೆರಿಗೆ ಆಡಳಿತ ಕ್ಷೇತ್ರ ಇನ್ನಷ್ಟು ದಕ್ಷತೆಯಿಂದ ಕಾರ್ಯನಿರ್ವಹಿಸುವಂತೆ ಮಾಡುವ ಅಗತ್ಯವಿದೆ. ಈ ಮೊದಲೇ ಹೇಳಿದಂತೆ, ಒಂದು ನಿರ್ದಿಷ್ಟ ಹಂತ ಮೀರಿ ತೆರಿಗೆ ಆದಾಯವನ್ನು ಸಂಗ್ರಹಿಸಲಾಗುವುದಿಲ್ಲ. ಹೀಗಾಗಿ, ತೆರಿಗೆಯೇತರ ಮೂಲಗಳಿಂದ ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸಬೇಕಾಗುತ್ತದೆ. ತೆರಿಗೆಯೇತರ ಮೂಲಗಳಿಂದ ಹೆಚ್ಚಿನ ಸಂಪನ್ಮೂಲಗಳನ್ನು ಸಂಗ್ರಹಿಸುವ ಅಗತ್ಯವಿದೆಯೆಂಬುದನ್ನು ಪ್ರತಿಯೊಂದು ಹಣಕಾಸು ಆಯೋಗವೂ ಸಹ ಒತ್ತಿ ಹೇಳುತ್ತಾ ಬಂದಿದೆ. ಈ ನನ್ನ ಭಾಷಣದಲ್ಲಿ ಮುಂದೆ ರಾಜಸ್ವಗಳ ಬಗ್ಗೆ ಹೆಚ್ಚಿನ ವಿವರ ನೀಡುತ್ತೇನೆ.

ಹತ್ತನೇ ಹಣಕಾಸು ಆಯೋಗ

೨೦. ರಾಜ್ಯ ಸರ್ಕಾರಗಳ ಹಣಕಾಸು ಅಗತ್ಯತೆಗಳನ್ನು ನಿರ್ಧರಿಸಲು ಮತ್ತು ಕೇಂದ್ರದಿಂದ ರಾಜ್ಯಗಳಿಗೆ ನಿಧಿಗಳ ಹಂಚಿಕೆಯ ಬಗ್ಗೆ ಶಿಫಾರಸುಗಳನ್ನು ಮಾಡಲು ಕೇಂದ್ರ ಸರ್ಕಾರವು ಹತ್ತನೇ ಹಣಕಾಸು ಆಯೋಗವನ್ನು ನೇಮಕ ಮಾಡಿದೆ ಎಂಬ ಸಂಗತಿಯನ್ನು ಈ ಸದನಕ್ಕೆ ತಿಳಿಸಲು ನನಗೆ ಸಂತೋಷವಾಗುತ್ತಿದೆ. ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ, ಸಂಪನ್ಮೂಲಗಳ ಒಟ್ಟು ಹಂಚಿಕೆಯಲ್ಲಿ ಕರ್ನಾಟಕಕ್ಕೆ ಹಲವಾರು ವರ್ಷಗಳಿಂದ ಅದರ ಪೂರ್ಣ ಪಾಲು

ದೊರೆಯುತ್ತಿಲ್ಲ ಎಂಬ ಸಂಗತಿ ತಮಗೆಲ್ಲಾ ತಿಳಿದೇ ಇದೆ. ಕೇಂದ್ರ ತೆರಿಗೆಗಳಲ್ಲಿ ರಾಜ್ಯದ ಪಾಲಿನ ಹಂಚಿಕೆಗೆ ತಲಾವಾರು ಆದಾಯವನ್ನು ಒಂದು ಮುಖ್ಯ ಮಾನದಂಡವಾಗಿ ಅಳವಡಿಸಿಕೊಳ್ಳುತ್ತಿರುವುದೇ ಇದಕ್ಕೆ ಕಾರಣ. ಕರ್ನಾಟಕವು ಐದನೇ ಹಣಕಾಸು ಆಯೋಗದ ಸಮಯದಿಂದಲೂ, ಸಂವಿಧಾನದ ೨೭೫ನೆಯ ಅನುಚ್ಛೇದದ ಮೇರೆಗೆ ಸಹಾಯಾನುದಾನವನ್ನು ಸಹ ಪಡೆದಿಲ್ಲ. ತೆರಿಗೆ ಸಂಪನ್ಮೂಲಗಳಲ್ಲಿ ರಾಜ್ಯದ ಪಾಲಿನ ಹಂಚಿಕೆಯನ್ನು ಗಣನೆಗೆ ತೆಗೆದುಕೊಂಡ ನಂತರ, ರಾಜ್ಯದ ಯೋಜನೇತರ ಬಾಬಿನಲ್ಲಿ ಹೆಚ್ಚಳ ಉಂಟಾಗುತ್ತದೆಂದು ರಾಜ್ಯದ ಆಯವ್ಯಯದ ಸ್ಥಿತಿಯನ್ನು ಸಮೀಕ್ಷಿಸುತ್ತಿರುವುದೇ ಇದಕ್ಕೆ ಕಾರಣ. ರಾಜ್ಯದ ಹಣಕಾಸು ಕೊರತೆಯನ್ನು ಕಡಿಮೆ ಮಾಡುವಂತೆ ತನ್ನ ಶಿಫಾರಸುಗಳನ್ನು ರೂಪಿಸಬೇಕೆಂದು ನಾವು ಸ್ಪಷ್ಟವಾಗಿ ಆಯೋಗವನ್ನು ಕೋರಿದ್ದೇವೆ. ತೆರಿಗೆ ಸಂಪನ್ಮೂಲದ ಮೊತ್ತದ ಪರಸ್ಪರ ಹಂಚಿಕೆಗೆ ಅಳವಡಿಸಿಕೊಂಡಿರುವ ಮಾನದಂಡವನ್ನು ಬದಲಾಯಿಸಲು ಹಣಕಾಸು ಆಯೋಗದ ಮುಂದೆ ವಾದಿಸುವ ಪ್ರಯತ್ನವನ್ನು ನಾವು ಮುಂದುವರಿಸುತ್ತೇವೆ. ನಮ್ಮ ವಿವರವಾದ ಅಭಿಪ್ರಾಯಗಳು ಜ್ಞಾಪನಪತ್ರದಲ್ಲಿವೆ. ಈ ಜ್ಞಾಪನ ಪತ್ರವನ್ನು ಆದಷ್ಟು ಬೇಗನೆ ಹತ್ತನೇ ಹಣಕಾಸು ಆಯೋಗದ ಮುಂದೆ ನಾವು ಮಂಡಿಸಲಿದ್ದೇವೆ. ಜ್ಞಾಪನ ಪತ್ರದ ಒಂದು ಪ್ರತಿಯನ್ನು ಮಾಹಿತಿಗಾಗಿ ಸದನದಲ್ಲಿ ಸಹ ಮಂಡಿಸಲಾಗುವುದು.

ರಾಜ್ಯ ಸಾಲ ಯೋಜನೆ

೨೧. ನಬಾರ್ಡ್ ಸಂಸ್ಥೆಯು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ನಿಕಟ ಸಹಯೋಗದೊಂದಿಗೆ ೧೯೯೩-೯೪ರಲ್ಲಿ ಒಟ್ಟು ೧೩೬೦ ಕೋಟಿ ರೂ.ಗಳಷ್ಟು ಸಾಲದ ಅಗತ್ಯಗಳನ್ನೊಳಗೊಂಡ ರಾಜ್ಯ ಸಾಲ ಯೋಜನೆಯೊಂದನ್ನು ಕರ್ನಾಟಕ ರಾಜ್ಯಕ್ಕಾಗಿ ಸಿದ್ಧಪಡಿಸಿದೆ. ಈ ಪೈಕಿ ೮೮೩.೦೦ ಕೋಟಿ ರೂ. ಗಳನ್ನು ಅವಧಿ ಸಾಲಗಳಿಗಾಗಿ ಹಾಗೂ ಬಂಡವಾಳ ಹೂಡಿಕೆ ಸಾಲಗಳಿಗಾಗಿ, ಉಳಿದ ಹಣವನ್ನು ಉತ್ಪಾದನಾ ಸಾಲಕ್ಕಾಗಿ ಹಂಚಿಕೆ ಮಾಡಲಾಗುತ್ತದೆ. ವಾಣಿಜ್ಯ ಬ್ಯಾಂಕುಗಳು ಸಾಲದ ಶೇಕಡಾ ೪೯ ಭಾಗವನ್ನು ವಿತರಣೆ ಮಾಡುತ್ತವೆ. ಉಳಿದದ್ದನ್ನು ಕಾಸ್ಕಾರ್ಡ್ ಬ್ಯಾಂಕ್ (ಶೇ.೨೧), ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕ್ (ಶೇ. ೧೮) ಮತ್ತು ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು (ಶೇ. ೧೨) ವಿತರಣೆ ಮಾಡುತ್ತವೆ. ಒಂದೇ ವರ್ಷದಲ್ಲಿ ಇಷ್ಟೊಂದು ಭಾರಿ ಪ್ರಮಾಣದ ಸಾಲ ವಿತರಣೆಗೆ ವ್ಯವಸ್ಥೆ ಮಾಡುವುದರಿಂದ ರಾಜ್ಯದ ವಿವಿಧ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಗುತ್ತದೆ.

ವಾರ್ಷಿಕ ಯೋಜನೆ ೧೯೯೩-೯೪

೨೨. ಭಾರಿ ಪ್ರಮಾಣದಲ್ಲಿ ಹಣ ವಿನಿಯೋಗಿಸಬೇಕಾದ ಅಗತ್ಯತೆಯನ್ನು ಗಮನಿಸಿ, ೧೯೯೩-೯೪ರ ವಾರ್ಷಿಕ ಯೋಜನಾ ಗಾತ್ರವನ್ನು ೩೦೨೫.೦೦ ಕೋಟಿ ರೂಪಾಯಿಗಳಿಗೇರಿಸುವ ಮಹತ್ವಾಕಾಂಕ್ಷೆಯನ್ನಿಟ್ಟುಕೊಂಡು ಆ ದಿಸೆಯಲ್ಲಿ ನಾನು ಕಾರ್ಯಪ್ರವೃತ್ತನಾಗಿದ್ದೇನೆ. ಇದು, ೧೯೯೨-೯೩ನೇ ವರ್ಷಕ್ಕೆ ಅನುಮೋದಿತವಾಗಿದ್ದ ೧೯೧೫ ಕೋಟಿ ರೂಪಾಯಿಗಳ ಯೋಜನಾ ಗಾತ್ರಕ್ಕಿಂತಲೂ ಶೇಕಡಾ ೫೭ರಷ್ಟು ಹೆಚ್ಚು. ನಮ್ಮ ರಾಜ್ಯದಲ್ಲಿ ಒಂದು ವರ್ಷದಲ್ಲಿ ಇಷ್ಟೊಂದು ಭಾರಿ ಪ್ರಮಾಣದಲ್ಲಿ ಯೋಜನಾ ಗಾತ್ರ ಹೆಚ್ಚಾಗಿರುವುದು ಇದೇ ಮೊದಲು ಹಾಗೂ ಕಳೆದ ಇತ್ತೀಚಿನ ವರ್ಷಗಳಲ್ಲಿ ಯಾವುದೇ ರಾಜ್ಯದಲ್ಲಿ ಒಂದು ವರ್ಷದಲ್ಲಿ ಇಷ್ಟೊಂದು ಭಾರಿ ಪ್ರಮಾಣದಲ್ಲಿ ಯೋಜನಾ ಗಾತ್ರ ಹೆಚ್ಚಾಗಿಲ್ಲ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ೧೯೯೩-೯೪ರ ವಾರ್ಷಿಕ ಯೋಜನೆಯ ವಲಯವಾರು ವಿವರಗಳನ್ನು ಅನುಬಂಧ - Iರಲ್ಲಿ ಕೊಡಲಾಗಿದೆ.

ಗ್ರಾಮೀಣಾಭಿವೃದ್ಧಿ

೨೩. ಗ್ರಾಮೀಣಾಭಿವೃದ್ಧಿಗೆ ಸರ್ಕಾರ ಅತ್ಯಂತ ಹೆಚ್ಚಿನ ಆದ್ಯತೆಯನ್ನು ನೀಡುತ್ತದೆ. ೧೯೯೩-೯೪ರ ಒಟ್ಟು ಯೋಜನಾ ವೆಚ್ಚದ ಶೇ ೬೫ರಷ್ಟನ್ನು ಅಂದರೆ ೧೯೬೬.೩೪ ಕೋಟಿ ರೂ.ಗಳನ್ನು ಗ್ರಾಮೀಣಾಭಿವೃದ್ಧಿಗೆ ಮೀಸಲಿರಿಸಲಾಗಿದೆ. ಪ್ರಸಕ್ತ ವರ್ಷ ೧೪೯೩.೨೩ ಕೋಟಿ ರೂ.ಗಳನ್ನು ಒದಗಿಸಲಾಗಿತ್ತು.

ವಿಕೇಂದ್ರೀಕೃತ ಯೋಜನೆ

೨೪. ವಿಕೇಂದ್ರೀಕೃತ ಯೋಜನೆಯು ಒಂದು ಮಹತ್ವದ ಕ್ಷೇತ್ರವಾಗಿ ಮುಂದುವರಿಯುತ್ತದೆ. ಈ ಯೋಜನೆಗೆ ೧೯೯೨-೯೩ರಲ್ಲಿ ೧೬೫೮ ಕೋಟಿ ರೂಪಾಯಿ ಒದಗಿಸಲಾಗಿತ್ತು. ೧೯೯೩-೯೪ರ ಬಜೆಟ್‌ನಲ್ಲಿ ೧೪೯೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಗ್ರಾಮೀಣ ಮಟ್ಟದಲ್ಲಿ ಪ್ರಜಾಸತ್ತಾತ್ಮಕ ಕಾರ್ಯವಿಧಾನವನ್ನು ಬಲಪಡಿಸುವ ಉದ್ದೇಶದಿಂದ ಇತ್ತೀಚೆಗೆ ಸಂವಿಧಾನಕ್ಕೆ ತಂದಿರುವ ತಿದ್ದುಪಡಿಯ ಮಾದರಿಯಲ್ಲಿಯೇ ಪಂಚಾಯತ್‌ರಾಜ್ ವ್ಯವಸ್ಥೆಗೆ ಸಮಗ್ರ ಶಾಸನವೊಂದನ್ನು ಜಾರಿಗೆ ತರಲು ಸಹಾ ಉದ್ದೇಶಿಸಲಾಗಿದೆ.

ನಿರ್ದೇಶಾರ್ಥಕ ಯೋಜನೆ

೨೫. ಅರ್ಥ ವ್ಯವಸ್ಥೆಯಲ್ಲಿ ಅಭಿವೃದ್ಧಿ ಮತ್ತು ಬೆಳವಣಿಗೆಗೆ ಸರ್ಕಾರ ಹಾಗೂ ಖಾಸಗಿ ವಲಯಗಳೆರಡೂ ಹಣ ವಿನಿಯೋಗಿಸುತ್ತವೆ. ಯೋಜನಾ ನಿರ್ದೇಶನದ ಪರಿಕಲ್ಪನೆ ಸರ್ವಮಾನ್ಯವಾಗಿದ್ದು, ಇದರಲ್ಲಿ ಖಾಸಗಿ ವಲಯಗಳು ಸಹ ಹಣ ವಿನಿಯೋಗಿಸುವುದಕ್ಕೆ ಉತ್ತೇಜನ ನೀಡುವಂಥ ರೀತಿಯಲ್ಲಿ ಸರ್ಕಾರ ಆದ್ಯತೆಗನುಸಾರವಾಗಿ ನಾನಾ ವಲಯಗಳಲ್ಲಿ ಹಣ ವಿನಿಯೋಗಿಸುವುದು ಒಳಗೊಂಡಿದೆ. ಉದಾಹರಣೆಗೆ, ೧೯೯೩-೯೪ ರಿಂದ ೧೯೯೬-೯೭ರ ಅವಧಿಯಲ್ಲಿ ಕೈಗಾರಿಕಾ ವಲಯಗಳಲ್ಲಿ ವಿನಿಯೋಗಿಸಬಹುದಾದಂಥ ಬಂಡವಾಳದ ವಿವರಗಳನ್ನು ಅನುಬಂಧ-II ರಲ್ಲಿನ ಕೋಷ್ಟಕದಲ್ಲಿ ಕೊಡಲಾಗಿದೆ. ಸರ್ಕಾರವು ಸ್ವಲ್ಪ ಪ್ರಮಾಣದಲ್ಲಿ ಹಣವನ್ನು ವಿನಿಯೋಗಿಸಿದರೆ, ಅದು ಖಾಸಗಿ ವಲಯಗಳು ಹೆಚ್ಚಿನ ಪ್ರಮಾಣದಲ್ಲಿ ಹಣ ವಿನಿಯೋಗಿಸುವುದಕ್ಕೆ ಅನುವು ಮಾಡಿಕೊಡುತ್ತದೆ ಎಂಬುದನ್ನು ಆ ಕೋಷ್ಟಕದಿಂದ ತಿಳಿಯಬಹುದಾಗಿದೆ.

ಕೈಗಾರಿಕೆಗಳು

೨೬. ಒಂದು ಕಾಲದಲ್ಲಿ ದೇಶದ ಪ್ರಮುಖ ಉದ್ಯಮಶೀಲ ರಾಜ್ಯವೆಂದು ಹೆಸರಾಗಿದ್ದ ಕರ್ನಾಟಕವು ಈಗ ಕೈಗಾರಿಕಾ ಕ್ಷೇತ್ರದಲ್ಲಿ ಆನೆಯ ಸ್ಥಾನಕ್ಕಿಳಿದಿರುವುದು ದುರ್ದೈವದ ಸಂಗತಿ. ನಮ್ಮ ರಾಜ್ಯವು ೧೯೯೫ರ ವೇಳೆಗೆ ನಾಲ್ಕನೆಯ ಸ್ಥಾನಕ್ಕೇರಿ ಕ್ರಿ.ಶ. ೨೦೦೦ದ ವೇಳೆಗೆ ಕೈಗಾರಿಕಾ ಕ್ಷೇತ್ರದ ಮುಂಚೂಣಿಯಲ್ಲಿರುವಂತಾಗ ಬೇಕೆಂಬುದು ನನ್ನ ಮಹತ್ವಾಕಾಂಕ್ಷೆ. ಆದ್ದರಿಂದ, ಖಾಸಗಿ ವಲಯಕ್ಕೆ ಸಂಪೂರ್ಣ ಬೆಂಬಲ ನೀಡುವಂಥ ಪುರೋಗಾಮಿ ಕೈಗಾರಿಕಾ ನೀತಿಯೊಂದನ್ನು ಅಳವಡಿಸಲಾಗುವುದು. ೧೯೯೦ ರಲ್ಲಿ ಎಲೆಕ್ಟ್ರಾನಿಕ್ಸ್, ಟೆಲಿಕಮ್ಯೂನಿಕೇಷನ್ಸ್, ಇನ್‌ಫಾರ್ಮ್ಯಾಟಿಕ್ಸ್, ಕೃಷಿ ಆಧಾರಿತ ಉದ್ಯಮಗಳೇ ಮುಂತಾದ ಪ್ರಮುಖ ಕ್ಷೇತ್ರಗಳನ್ನು ಗುರುತಿಸಿದ್ದು, ನಾನು ಈ ಮುಂದಿನ ವರ್ಗಗಳನ್ನೂ ಸೇರಿಸಲು ಉದ್ದೇಶಿಸಿದ್ದೇನೆ:

೧) ನೇಯ್ಗೆ ಗಿರಣಿಗಳು, ವಿದ್ಯುತ್‌ಚಾಲಿತ ಘಟಕಗಳು, ಹೆಣಿಗೆ ಮತ್ತು ಜವಳಿ ಸಂಸ್ಕರಣಾ ಘಟಕಗಳು;

೨) ಅಮೂಲ್ಯ ಹರಳುಗಳು, ಅರೆ-ಅಮೂಲ್ಯ ಹರಳುಗಳನ್ನು ಕತ್ತರಿಸುವುದು, ಹೊಳುಪು ನೀಡುವುದು ಮತ್ತು ಸಂಸ್ಕರಿಸುವುದು;

೩) ಭಾರಿ ಪ್ರಮಾಣದ ಔಷಧ ಘಟಕಾಂಶಗಳೂ ಸೇರಿದಂತೆ ಔಷಧ ತಯಾರಿಕಾ ಉದ್ಯಮಗಳು;

೪) ಸಕ್ಕರೆ ಉದ್ಯಮ.

೨೭. ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕ್ಷೇತ್ರದಲ್ಲಿ ಖಾಸಗಿ ಬಂಡವಾಳ ಹೂಡಿಕೆಗೆ ಅವಕಾಶ ನೀಡಲು ಮತ್ತು ಕಾರ್ಯನಿರ್ವಹಿಸುವಂಥ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಒಂದು ಆಟೋ ನಗರವಾಗಿ ಅಭಿವೃದ್ಧಿಪಡಿಸಲು, ಬೆಳಗಾವಿ ಜಿಲ್ಲೆಯಲ್ಲಿ ಸಂಯೋಜಿತ ಆಟೋ ಲೈಟ್ ಇಂಜಿನಿಯರಿಂಗ್ ಸಂಕೀರ್ಣವೊಂದನ್ನು, ಗುಲ್ಬರ್ಗಾದಲ್ಲಿ ಒಂದು ಕಲ್ಲು ಕತ್ತರಿಸುವ ಮತ್ತು ನಯ ಮಾಡುವ ಎಸ್ಟೇಟನ್ನು ಮತ್ತು ಔಷಧ ವಸ್ತುಗಳ ಕೈಗಾರಿಕೆ, ವಿದ್ಯುತ್ ಮಗ್ಗಗಳು, ಹೆಣಿಗೆ ಉಡುಪು ಮತ್ತು ಉಡುಪು ರಫ್ತುಗಳೇ ಮುಂತಾದ ಕಾರ್ಯನಿರ್ವಹಿಸಬಲ್ಲ ಇತರ ಎಸ್ಟೇಟುಗಳನ್ನು ಕೂಡ ಸ್ಥಾಪಿಸಲಾಗುವುದು. ವಜ್ರ ಮತ್ತು ರತ್ನ ಕೈಗಾರಿಕಾ ಘಟಕಗಳನ್ನು ಆಕರ್ಷಿಸಲು ಬೆಂಗಳೂರು ಮತ್ತು ಮಂಗಳೂರಿನಲ್ಲಿ ವಜ್ರ ಉದ್ಯಾನಗಳನ್ನು ಸ್ಥಾಪಿಸಲಾಗುವುದು. ಈಗಿರುವ ಕೈಗಾರಿಕಾ ಎಸ್ಟೇಟುಗಳ ನಿರ್ವಹಣೆಗೆ ಒಂದು ನೋಡಲ್ ಏಜೆನ್ಸಿಯನ್ನು ಹೆಸರಿಸಲಾಗುವುದು. ಈ ಉದ್ದೇಶಕ್ಕಾಗಿ, ಪೀಣ್ಯ, ಬೊಮ್ಮಸಂದ್ರ, ಇಲೆಕ್ಟ್ರಾನಿಕ್ ಸಿಟಿ, ಬೈಕಂಪಾಡಿ, ತಾಡಿವಾಳ, ಉದ್ಯಮಬಾಗ್, ಮೋಟಗಳ್ಳಿ ಮತ್ತು ಹೂಟಗಳ್ಳಿಗಳ ಕೈಗಾರಿಕಾ ಎಸ್ಟೇಟುಗಳನ್ನು ಅಧಿಸೂಚಿತ ಪ್ರದೇಶಗಳೆಂದು ಘೋಷಿಸಲಾಗುವುದು.

೨೮. ದಕ್ಷಿಣ ಭಾರತದಲ್ಲಿ ಕರ್ನಾಟಕ ಮಾತ್ರ ರಫ್ತು ಸಂಸ್ಕರಣಾ ವಲಯ ಇಲ್ಲದ ರಾಜ್ಯವಾಗಿದೆ. ಮಂಗಳೂರಿನಲ್ಲಿ ಒಂದು ರಫ್ತು ಸಂಸ್ಕರಣ ವಲಯವನ್ನು ಸ್ಥಾಪಿಸಲು ಭಾರತ ಸರ್ಕಾರದ ಮನವೊಲಿಸಲಾಗುವುದು. ಇದಕ್ಕೆ ರಾಜ್ಯವು ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತದೆ ಮತ್ತು ತಾರ್ಕಿಕ ಬೆಂಬಲ ನೀಡುತ್ತದೆ. ಮುಂಬರುವ ವರ್ಷಗಳಲ್ಲಿ ವಿಜಯನಗರ ಉಕ್ಕು ಸ್ಥಾವರದ ಕಾಮಗಾರಿಯನ್ನು ಪ್ರಾರಂಭಿಸಲು ಎಲ್ಲಾ ಪ್ರಯತ್ನಗಳನ್ನು ಮಾಡಲಾಗುವುದೆಂದೂ ಸದನಕ್ಕೆ ನಾನು ಆಶ್ವಾಸನೆ ನೀಡಬಯಸುತ್ತೇನೆ.

೨೯. ಅನಿವಾಸಿ ಭಾರತೀಯರು, ಬಂಡವಾಳ ಹೂಡುವುದಕ್ಕೆ ಅನುಕೂಲ ಮಾಡಿಕೊಡುವ ಸಲುವಾಗಿ ಬೆಂಗಾವಲು ಸೇವೆಯನ್ನು ಒದಗಿಸುವಂಥ ಹಾಗೂ ಎಡರು ತೊಡರುಗಳನ್ನು ತ್ವರಿತವಾಗಿ ನಿವಾರಿಸುವಂಥ ಅನಿವಾಸಿ ಭಾರತೀಯರ ಬಂಡವಾಳ ಹೂಡಿಕೆ ಕೇಂದ್ರವೊಂದನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗುವುದು. ಇಲೆಕ್ಟ್ರಾನಿಕ್ ಉತ್ಪನ್ನಗಳ ರಫ್ತನ್ನು ಹೆಚ್ಚಿಸುವ ಹಾಗೂ ಭದ್ರವಾಗಿ ನೆಲೆಗೊಂಡಿರುವ ಹೊಸ ಉದ್ದಿಮೆದಾರರಿಬ್ಬರಿಗೂ ಪ್ರವೇಶಾವಕಾಶ ಇರುವಂಥ ಹಾಗೂ ಇತ್ತೀಚಿಗಿನ ಸ್ಟೇಟ್-ಆಫ್- ಆರ್ಟ್ ಸಾಧನ ಸಲಕರಣೆಗಳನ್ನು ಸಂಗ್ರಹಿಸಿಟ್ಟಿರುವಂಥ ಇಲೆಕ್ಟ್ರಾನಿಕ್ ವ್ಯಾಪಾರ, ತಂತ್ರಜ್ಞಾನ ಅಭಿವೃದ್ಧಿ ಮತ್ತು ಪ್ರದರ್ಶನ ಕೇಂದ್ರವೊಂದನ್ನು ಕೂಡ ಸ್ಥಾಪಿಸಲಾಗುವುದು. ಅದು, ದೇಶದಲ್ಲಿ ಈ ಬಗೆಯ ಕೇಂದ್ರಗಳಲ್ಲಿ ಮೊಟ್ಟಮೊದಲನೆಯದಾಗಿದ್ದು ವಿಶ್ವದ ಇಲೆಕ್ಟ್ರಾನಿಕ್ ನಕಾಶೆಯಲ್ಲಿ ಬೆಂಗಳೂರು ಸೇರುವಂತಾಗಲು ಅಗತ್ಯ ಒತ್ತಾಸೆಯನ್ನು ನೀಡುವುದೆಂಬ ದೃಢ ವಿಶ್ವಾಸ ನನಗಿದೆ.

೩೦. ಕೈಗಾರಿಕಾ ವಲಯದಲ್ಲಿ ಹಲವಾರು ಕ್ರಮಗಳನ್ನು ಕೈಗೊಳ್ಳಲು ಸಹ ಉದ್ದೇಶಿಸಿದ್ದೇನೆ.

ಎ) ರಫ್ತು ಉತ್ತೇಜನಾ ವಿಭಾಗವನ್ನು ಸೃಜಿಸುವುದು;

ಬಿ) ಕೆಎಸ್ಐಐಡಿಸಿ ಮತ್ತು ಕೆಎಸ್ಎಫ್‌ಸಿಗಳಂಥ ರಾಜ್ಯದ ಕೈಗಾರಿಕಾ ಅಭಿವೃದ್ಧಿ ಸಂಸ್ಥೆಗಳಿಗೆ ನೀಡಲಾಗುವ ಮೊತ್ತವನ್ನು ೧೯೯೨-೯೩ ರಲ್ಲಿದ್ದ ೧೦.೧೨ ಕೋಟಿ ರೂ.ಗಳಿಂದ ೧೯೯೩-೯೪ ರಲ್ಲಿ ೧೫.೮೫ ಕೋಟಿ ರೂ.ಗಳಿಗೆ ಗಣನೀಯವಾಗಿ ಹೆಚ್ಚಿಸುವುದು;

ಸಿ) ಪ್ರೋತ್ಸಾಹಕ ಸಹಾಯಧನ ನೀಡುವುದಕ್ಕಾಗಿ ಹಣದ ಮೊತ್ತವನ್ನು ೧೯೯೩-೯೪ ರಲ್ಲಿ ೧೫ ಕೋಟಿ ರೂ.ಗಳಿಂದ ೩೦ ಕೋಟಿ ರೂ.ಗಳಿಗೆ ಹೆಚ್ಚಿಸುವುದು;

ಡಿ) ಸಿಂಗಲ್‌ವಿಂಡೋ ಏಜೆನ್ಸಿಯು ಹೆಚ್ಚು ಪರಿಣಾಮಕಾರಿಯಾಗಿರುವಂತೆ ಮಾಡುವುದು;

ಇ) ಸಿಂಗಲ್‌ವಿಂಡೋ ಏಜೆನ್ಸಿಯು ಕೈಗೊಂಡ ತೀರ್ಮಾನವು ನಿಗದಿತ ಅವಧಿಯೊಳಗಾಗಿ ಕಾರ್ಯಗತವಾಗುವಂತೆ ನೋಡಿಕೊಳ್ಳಲು ಕೈಗಾರಿಕಾ ರಫ್ತು ಸೇವೆಯನ್ನು (ಉದ್ಯೋಗಮಿತ್ರ) ಚುರುಕುಗೊಳಿಸುವುದು;

ಎಫ್) ಕೈಗಾರಿಕಾ ಎಸ್ಟೇಟುಗಳಿಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಂಬಂಧಪಟ್ಟಂತೆ ನಗರ ಭೂಮಿಗಳ ಗರಿಷ್ಠ ಮಿತಿಗೆ ಅನುಮೋದನೆ ಪಡೆಯುವ ವಿಧಾನವನ್ನು ಸರಳಗೊಳಿಸುವುದು;

ಜಿ) ಪರಿವೀಕ್ಷಣಾ ಪ್ರಾಧಿಕಾರಗಳ ಸಂಖ್ಯೆಯನ್ನು ಕಡಿಮೆ ಮಾಡುವುದು;

ಎಚ್) ಮೌಲ್ಯ ಹೆಚ್ಚಾಗುವಂತೆ ಮಾಡಲು, ರಫ್ತು ಮಾಡುವುದಕ್ಕೆ ಮುಂಚೆ ರಾಜ್ಯದೊಳಗೆ ಗ್ರಾನೈಟ್ ಸಂಸ್ಕರಣೆಗೆ ಮಹತ್ವ ನೀಡುವುದು;

ಐ) ಕೆಎಸ್‌ಎಸ್‌ಐಡಿಸಿ ನಿರ್ಮಿಸಿದ ಷೆಡ್‌ಗಳ ಪೈಕಿ ಕೆಲವು ಷೆಡ್‌ಗಳನ್ನು ಶೇಕಡಾವಾರು ಪ್ರಮಾಣದಲ್ಲಿ ಮಹಿಳಾ ಉದ್ಯಮಿಗಳಿಗೆ ಕಾಯ್ದಿರಿಸುವುದು;

ಜೆ) ವಿಶೇಷವಾಗಿ ರೇಷ್ಮೆ ಉದ್ಯಮ ಕ್ಷೇತ್ರದಲ್ಲಿ ಮಹಿಳಾ ಉದ್ಯಮಿಗಳಿಗೆ ಪ್ರೋತ್ಸಾಹ ನೀಡುವುದು;

ಕೆ) ಕೆಎಸ್‌ಐಐಡಿಸಿ ಬೆಂಗಳೂರಿನಲ್ಲಿ ಒಂದು ಅಂತರರಾಷ್ಟ್ರೀಯ ಸಮಾವೇಶ ಕೇಂದ್ರವನ್ನ ನಿರ್ಮಿಸಲಿದೆ. ಇದಕ್ಕಾಗಿ ರಾಜ್ಯ ಸರ್ಕಾರವು ಭೂಮಿಯನ್ನು ಒದಗಿಸಲಿದ್ದು ಭಾರತ ಸರ್ಕಾರ, ಖಾಸಗಿ ಮತ್ತು ಸಾರ್ವಜನಿಕ ವಲಯದ ಕಂಪನಿಗಳು ಮತ್ತು ಕೆಎಸ್‌ಐಐಡಿಸಿ ಹಣ ಒದಗಿಸಲಿವೆ.

೩೧. ಗ್ರಾಮೀಣ ಕೈಗಾರಿಕೀಕರಣ ಮತ್ತು ಸ್ವಯಂ ಉದ್ಯೋಗ ಕ್ಷೇತ್ರದಲ್ಲಿ, ಉತ್ಪನ್ನಗಳ ಗುಣಮಟ್ಟದಲ್ಲಿ ಸುಧಾರಣೆಗೆ ಒತ್ತು ನೀಡಿ, ಅಭಿವೃದ್ಧಿಯನ್ನೇ ಪ್ರಮುಖ ಗುರಿಯಾಗಿಟ್ಟುಕೊಂಡು 'ವಿಶ್ವ' ಯೋಜನೆಯನ್ನು ಮುಂದುವರಿಸಿಕೊಂಡು ಹೋಗಲಾಗುತ್ತದೆ. ಸರ್ಕಾರೇತರ ಸಂಘ ಸಂಸ್ಥೆಗಳನ್ನು ಈ ಉತ್ಪನ್ನಗಳ ಮಾರಾಟದಲ್ಲಿ ತೊಡಗಿಸಲು ಸಹಾ ಉದ್ದೇಶಿಸಲಾಗಿದೆ. ಈ ಉತ್ಪನ್ನಗಳ ಗುಣಮಟ್ಟವನ್ನು ಸುಧಾರಿಸಿದ್ದೇ ಆದಲ್ಲಿ ಈ ಉತ್ಪನ್ನಗಳ ಮಾರಾಟದಲ್ಲಿ ಸರ್ಕಾರೇತರ ಸಂಘ ಸಂಸ್ಥೆಗಳೂ ಸಹಾ ಪಾಲ್ಗೊಳ್ಳುವುದು ಸಾಧ್ಯವಾಗುತ್ತದೆ.

ಉದ್ಯೋಗಜ್ಯೋತಿ

೩೨. ಸ್ವಯಂ ಉದ್ಯೋಗದಲ್ಲಿ ನಿರತರಾಗಿರುವ ವ್ಯಕ್ತಿಗಳಿಗೆ ಮತ್ತು ಮೂರನೇ ವಲಯದಲ್ಲಿ ಘಟಕಗಳನ್ನು ಸ್ಥಾಪಿಸಲು ಇಚ್ಛಿಸುವ ನಿರುದ್ಯೋಗಿ ಯುವಕರಿಗೆ ಪ್ರೋತ್ಸಾಹ ಮತ್ತು ಬೆಂಬಲ ನೀಡಲು ಸಮಗ್ರ ಯೋಜನೆಯೊಂದನ್ನು ಆರಂಭಿಸಲಾಗುವುದು. ಉದ್ಯೋಗಜ್ಯೋತಿಯು, ಈ ಎರಡೂ ಸಮೂಹಗಳನ್ನು ಸರ್ಕಾರ ಮತ್ತು ಹಣಕಾಸು ಸಂಸ್ಥೆಗಳು ಕಾರ್ಯರೂಪಕ್ಕೆ ತರುತ್ತಿರುವ ಪ್ರಸಕ್ತ ಯೋಜನೆಗಳ ವ್ಯಾಪ್ತಿಗೆ ತರುತ್ತದೆ ಮತ್ತು ಬಡ್ಡಿ ಸಹಾಯಧನ, ಮೂಲಭೂತ ಸೌಲಭ್ಯಗಳು, ತಾಂತ್ರಿಕ ಮತ್ತು ಮೂಲ ಬಂಡವಾಳ ಠೇವಣಿ ಹಣದ ನೆರವು ಇವುಗಳನ್ನು ಒದಗಿಸುವ ಮೂಲಕ ತುರ್ತುಬೆಂಬಲ ನೀಡುತ್ತದೆ. ಅಲ್ಲದೆ ಸರ್ಕಾರವು, ಆಯ್ದ ಜಿಲ್ಲೆಗಳಲ್ಲಿ ಪೂರ್ಣ ಪ್ರಮಾಣದ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಗಳು ಮತ್ತು ಕರಕುಶಲ ಕಾರ್ಮಿಕರ ಸಂಕೀರ್ಣಗಳನ್ನು ಸಹ ಸ್ಥಾಪಿಸುತ್ತದೆ. ೧೯೯೩-೯೪ ರಲ್ಲಿ ಈ ಕಾರ್ಯಕ್ರಮಕ್ಕೆ ೫.೦೦ ಕೋಟಿ ರೂಪಾಯಿಗಳ ಮೂಲನಿಧಿಯನ್ನು ತೆಗೆದಿಡಲಾಗುತ್ತಿದೆ ಎಂದು ತಿಳಿಸಲು ನನಗೆ ಸಂತೋಷವಾಗುತ್ತದೆ.

ಸಾರ್ವಜನಿಕ ಉದ್ಯಮಗಳು

೩೩. ಸಾರ್ವಜನಿಕ ವಲಯದ ಕೆಲವು ಉದ್ಯಮಗಳ ಆರ್ಥಿಕ ಸಾಮರ್ಥ್ಯದ ಬಗ್ಗೆ ಹಾಗೂ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ರಾಜ್ಯ ಸರ್ಕಾರವು ಹೂಡಿರುವ ಹಣಕ್ಕೆ ಅತ್ಯಂತ ಕಡಿಮೆ ಪ್ರತಿಫಲ ದೊರೆಯುತ್ತಿರುವುದರ ಬಗ್ಗೆ ಸರ್ಕಾರ ತೀವ್ರ ಆತಂಕಗೊಂಡಿದೆ. ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಸರ್ಕಾರವು ಹೂಡಿರುವ ಮೊತ್ತವು ಉತ್ತೇಜನ ನೀಡುವ ಸಲುವಾಗಿಯೇ ಹೂಡಿರುವ ಹಣವನ್ನು ಹೊರತುಪಡಿಸಿ ೨೧೩೬.೮೯ ಕೋಟಿ ರೂ. ಆಗಿದ್ದರೆ, ದೊರೆತ ಪ್ರತಿಫಲವು ೭೪.೯೨ ಕೋಟಿ ರೂ. ಆಗಿದ್ದು, ಇದು ಒಟ್ಟು ಹೂಡಿಕೆಯ ಶೇಕಡಾ ೩.೫೧ ರಷ್ಟಾಗುತ್ತದೆ. ನಿರಂತರವಾಗಿ ನಷ್ಟ ಅನುಭವಿಸುತ್ತಿರುವ ಘಟಕಗಳ ಸಂಬಂಧದಲ್ಲಿ ಖಾಸಗೀಕರಣ, ಭಾಗಶಃ ಹೂಡಿಕೆಗಳನ್ನು ಹಿಂತೆಗೆದುಕೊಳ್ಳುವುದೇ ಮುಂತಾದ ಅನೇಕ ಪರ್ಯಾಯ ಕ್ರಮಗಳ ಬಗ್ಗೆ ಪರಿಶೀಲಿಸುವುದು ಅಗತ್ಯವಾಗಿದ್ದು, ಇತರ ಘಟಕಗಳ ವಾಣಿಜ್ಯ ಹಾಗೂ ಸಮಗ್ರ ಸಾಧನೆಯಲ್ಲಿ ಸುಧಾರಣೆ ತರುವ ಸಲುವಾಗಿ ಕ್ರಮಗಳನ್ನು ಪ್ರಾರಂಭಿಸಬೇಕಾಗಿದೆ. ಸಾರ್ವಜನಿಕ ಉದ್ಯಮ ಆಯ್ಕೆ ಮಂಡಳಿಯೊಂದನ್ನು ರಚಿಸಲು ನಾನು ಉದ್ದೇಶಿಸಿದ್ದು, ಅದು ಸಾರ್ವಜನಿಕ ವಲಯ ಉದ್ಯಮಗಳಲ್ಲಿ ಹಿರಿಯ ವ್ಯವಸ್ಥಾಪಕರ ಹಂತಗಳಲ್ಲಿ ಕೆಲಸ ಮಾಡಲು ಸೂಕ್ತ ಸಿಬ್ಬಂದಿಯನ್ನು ಆಯ್ಕೆ ಮಾಡುತ್ತದೆ. ಸಾರ್ವಜನಿಕ ಉದ್ಯಮಗಳ ಬ್ಯೂರೋದ ಪಾತ್ರವನ್ನು ಪುನಃ ಪರಿಶೀಲಿಸಲಾಗುವುದು ಮತ್ತು ಆ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ವಿದ್ಯುಚ್ಛಕ್ತಿ

೩೪. ಅಭಿವೃದ್ಧಿಗೆ ವಿದ್ಯುಚ್ಛಕ್ತಿ ಅತ್ಯಗತ್ಯ. ೩೦೧೩ ಮೆಗಾವ್ಯಾಟ್‌ಗಳ ಪ್ರಸಕ್ತ ಉತ್ಪಾದನಾ ಸಾಮರ್ಥ್ಯ ಈ ವರ್ಷದ ಕೊನೆಯ ವೇಳೆಗೆ ೩೧೪೫ ಮೆಗಾವ್ಯಾಟ್‌ಗಳಿಗೇರುತ್ತದೆ. ಆನೇ ಯೋಜನಾ ಅವಧಿಯಲ್ಲಿ ೩೦೨೪.೦೦ ಕೋಟಿ ರೂ. ವೆಚ್ಚ ಮಾಡಲು ಉದ್ದೇಶಿಸಲಾಗಿದ್ದು ೧೯೯೩-೯೪ನೇ ಸಾಲಿಗೆ ೬೯.೮೦ ಕೋಟಿ ರೂ.ಗಳನ್ನು ಮೀಸಲಿಡಲಾಗಿದೆ. ಮುಂದಿನ ವರ್ಷ, ಈ ಉತ್ಪಾದನಾ ಘಟಕಗಳ ಕಾರ್ಯಾರಂಭ ಮಾಡಲು ಉದ್ದೇಶಿಸಲಾಗಿದೆ.

೧.	ಮಲ್ಲಾಪುರ ಮಿನಿ ಜಲವಿದ್ಯುತ್ ಯೋಜನೆ	೨.೪೫ ಮೆ.ವ್ಯಾ.
೨.	ಗಣೇಕಲ್ ಮಿನಿ ಜಲವಿದ್ಯುತ್ ಯೋಜನೆ	೦.೩೫ ಮೆ.ವ್ಯಾ.
೩.	ವಾಯುಚಾಲಿತ ಶಕ್ತಿಯೋಜನೆಗಳು, ಗದಗ್	೪.೦ ಮೆ.ವ್ಯಾ
೪.	ಯಲಹಂಕದಲ್ಲಿ ಡಿ.ಜಿ. ಸೆಟ್ಟುಗಳು (ಕ.ವಿ.ಮಂ)	೧೨೦.೦೦ ಮೆ.ವ್ಯಾ
	ಒಟ್ಟು	೧೩೩.೩೫ ಮೆ.ವ್ಯಾ.

ಈ ಯೋಜನೆಗಳು ಪೂರ್ಣಗೊಂಡ ಮೇಲೆ, ೧೯೯೩-೯೪ ರಲ್ಲಿ ಇವು ೧೪೧೬೦ ಮೆ.ಯೂನಿಟ್‌ಗಳಷ್ಟು ವಿದ್ಯುಚ್ಛಕ್ತಿನ್ನು ಉತ್ಪಾದಿಸುತ್ತವೆ.

೩೫. ವಿದ್ಯುಚ್ಛಕ್ತಿಯ ಬೇಡಿಕೆ ಮತ್ತು ಪೂರೈಕೆ ನಡುವಣ ಅಂತರವನ್ನು ನಿವಾರಿಸುವ ಸಲುವಾಗಿ ಮೂರು ಶಾಖೋತ್ಪನ್ನ ಯೋಜನೆಗಳಿಗೆ ಎಂದರೆ, ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ, ಘಟಕ-೫ (೫೦೦ ಮೆಗಾವ್ಯಾಟ್), ಹೊಸಪೇಟೆ ಶಾಖೋತ್ಪನ್ನ ವಿದ್ಯುತ್ ಕೇಂದ್ರ (೨x೨೫೦ ಮೆಗಾವ್ಯಾಟ್) ಮತ್ತು ನಾಲ್ಕು ಜಲವಿದ್ಯುತ್ ಯೋಜನೆಗಳಿಗೆ ಎಂದರೆ ಆಲಮಟ್ಟಿ ಅಣೆಕಟ್ಟು ವಿದ್ಯುತ್ ಉತ್ಪಾದನಾ ಕೇಂದ್ರ (೨೬೮ ಮೆಗಾವ್ಯಾಟ್), ಸರ್ಪಾಡಿ ಬ್ಯಾರೇಜ್ ಯೋಜನೆ (೩x೩೦ ಮೆಗಾವ್ಯಾಟ್) ಶಿವಸಮುದ್ರಂ ಸೀಸನಲ್ ಪವರ್‌ಹೌಸ್ (೨೬೦ ಮೆಗಾವ್ಯಾಟ್) ಮತ್ತು ಮಹಾದಾಯಿ ಜಲವಿದ್ಯುತ್ ಯೋಜನೆ (೩೪೫ ಮೆಗಾವ್ಯಾಟ್)

ಇವುಗಳಿಗೆ ಸಂಬಂಧಪಟ್ಟಂತೆ ವರದಿಗಳನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕರ್ನಾಟಕ ವಿದ್ಯುತ್ ನಿಗಮವು ಕೈಗೊಳ್ಳುವಂಥ ಇತರ ಜಲವಿದ್ಯುತ್ ಮತ್ತು ಶಾಖೋತ್ಪನ್ನ ವಿದ್ಯುತ್ ಯೋಜನೆಗಳಿಗಾಗಿ ಅನ್ವೇಷಣೆ ನಡೆಸುತ್ತಿದೆ.

೩೬. ೧೯೯೨-೯೩ರಲ್ಲಿ ವಿವಿಧ ಖಾಸಗಿ ಕಂಪನಿಗಳೊಂದಿಗೆ ಮಾಡಿಕೊಂಡ ಒಪ್ಪಂದವನ್ನು ಪುನಃ ಪರಿಶೀಲಿಸಿದ ತರುವಾಯ ಖಾಸಗಿ ವಲಯಗಳು ಪಾಲ್ಗೊಳ್ಳುವುದರಿಂದ ೧೯೯೬-೯೭ರ ವೇಳೆಗೆ ವಿದ್ಯುತ್ ಉತ್ಪಾದನಾ ಸಾಮರ್ಥ್ಯವು ಸುಮಾರು ೧೧೪೪ ಮೆಗಾವ್ಯಾಟ್‌ಗಳಷ್ಟು ಹೆಚ್ಚುತ್ತದೆಂದು ನಿರೀಕ್ಷಿಸಲಾಗಿದೆ. ಇದೂ ಸೇರಿ, ಎಂಟನೇ ಪಂಚವಾರ್ಷಿಕ ಯೋಜನೆಯ ಅವಧಿಯು ಮುಕ್ತಾಯಗೊಳ್ಳುವ ವೇಳೆಗೆ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ೫೨೯೫ ಮೆಗಾವ್ಯಾಟ್‌ಗಳಿಗೆ ಏರುತ್ತದೆ.

೩೭. ವಿತರಣೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ೧೯೯೩-೯೪ಲ್ಲಿ, ವಿದ್ಯುತ್ ಪೂರೈಕೆಯ ಪ್ರಮಾಣ ಸುಮಾರು ೧೫ರಷ್ಟು ಹೆಚ್ಚುವ ನಿರೀಕ್ಷೆ ಇದೆ. ೧೯೯೩-೯೪ರಲ್ಲಿ ವಿದ್ಯುತ್ ಪೂರೈಕೆಯು ೧೫೧೫೦ ಮೆಗಾ ಯೂನಿಟ್‌ಗಳಿಂದ ೧೭೪೦೦ ಮೆಗಾಯೂನಿಟ್‌ಗಳಿಗೆ ಹೆಚ್ಚಲಿದೆ. ಇದರಲ್ಲಿ ಕೇಂದ್ರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ದೊರೆಯುವ ಪಾಲು ಮತ್ತು ಮಹಾರಾಷ್ಟ್ರದಿಂದ ಪ್ರತಿದಿನವೂ ನಿರೀಕ್ಷಿಸಿರುವ ೩ ಮೆಗಾಯೂನಿಟ್ ವಿದ್ಯುತ್ ಸೇರಿದೆ. ಖಾಸಗಿ ವಲಯದಲ್ಲಿರುವ ಕ್ಯಾಪ್ಟಿವ್ ಜನರೇಟಿಂಗ್ ಸೆಟ್‌ಗಳ ಈಗಿನ ಸಾಮರ್ಥ್ಯವನ್ನು ಬಳಸಿಕೊಳ್ಳಲು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು, ಒಂದು ವಿದ್ಯುತ್ ಉತ್ಪಾದನಾ ಕೇಂದ್ರದಿಂದ ವಿದ್ಯುತ್ ಬಳಸುವ ಕೈಗಾರಿಕೆಗೆ, ರವಾನೆ ವೆಚ್ಚವನ್ನು ವಸೂಲು ಮಾಡುವುದಕ್ಕೆ ಒಳಪಟ್ಟು ವಿದ್ಯುತ್ತನ್ನು ರವಾನಿಸುವ ಹೊಸ ಯೋಜನೆಯೊಂದನ್ನು ಸದ್ಯದಲ್ಲೇ ಪ್ರಾರಂಭಿಸಲಿದೆ. ಈ ಕ್ಯಾಪ್ಟಿವ್ ಜನರೇಷನ್ ಸೆಟ್‌ಗಳಿಂದ ಸುಮಾರು ೧೫೦ ಮೆಗಾ ಯೂನಿಟ್‌ಗಳಷ್ಟು ವಿದ್ಯುಚ್ಛಕ್ತಿ ದೊರೆಯುವುದು.

ಗ್ರಾಮೀಣ ವಿದ್ಯುದೀಕರಣ ಕಾರ್ಯಕ್ರಮ

೩೮. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಗ್ರಾಮೀಣ ವಿದ್ಯುದೀಕರಣ ಯೋಜನೆಯ ಮೇರೆಗೆ ಭಾಗ್ಯ ಜ್ಯೋತಿ ವಿದ್ಯುತ್ ಸಂಪರ್ಕಗಳ ಸಂಖ್ಯೆಯನ್ನು ಈಗಿನ ೪೯೦೦೦ ದಿಂದ ೧೯೯೩-೯೪ರಲ್ಲಿ ೧೭೧೦೦೦ಕ್ಕೇರಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಈ ಕಾರ್ಯಕ್ರಮದ ಅಡಿಯಲ್ಲಿ ೬೦೦೦೦ ನೀರಾವರಿ ಪಂಪ್‌ಸೆಟ್‌ಗಳಿಗೆ ವಿದುಚ್ಛಕ್ತಿ ಒದಗಿಸುವುದು ಮತ್ತು ೧೯೫ ಅತಿ ಸಣ್ಣ ಗ್ರಾಮಗಳಿಗೆ, ೬೨೫ ಹರಿಜನ ಬಸ್ತಿಗಳಿಗೆ ಮತ್ತು ೧೦೦ ಪರಿಶಿಷ್ಟ ಪಂಗಡದ ಕಾಲೋನಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಮುಂದಿನ ವರ್ಷಕ್ಕೆ ಇಟ್ಟುಕೊಳ್ಳಲಾದ ಇತರ ಗುರಿಗಳಾಗಿವೆ. ಗ್ರಾಮೀಣ ವಿದ್ಯುದೀಕರಣಕ್ಕಾಗಿ ೬೩ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದ್ದು, ೧೯೯೩-೯೪ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಗೆ ಆಗುವ ನಷ್ಟವನ್ನು ತಪ್ಪಿಸಲು ಸಹಾಯಧನವನ್ನು ನೀಡಲಾಗುವುದು.

ನೀರಾವರಿ

೩೯. ಕರ್ನಾಟಕವು ಯಾವಾಗಲೂ ನೀರಾವರಿಗೆ ಅತಿ ಹೆಚ್ಚಿನ ಆದ್ಯತೆ ನೀಡುತ್ತಿದೆ. ೧೯೯೨ರ ಮಾರ್ಚಿ ಕೊನೆಯವರೆಗೆ ೩೦೬೭.೦೦ ಕೋಟಿ ರೂಪಾಯಿಗಳಷ್ಟು ಹಣ ವಿನಿಯೋಗಿಸಿ ಅಂತರ್ಜಲವೂ ಸೇರಿದಂತೆ ೩೦.೪೮ ಲಕ್ಷ ಹೆಕ್ಟೇರಿಗೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಅಂತಿಮವಾಗಿ ೫೫ ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಗುರಿಯಿದೆ. ೧೯೯೩-೯೪ರಲ್ಲಿ ಯೋಜನೇತರ ಬಾಬಿನ ಅಡಿಯಲ್ಲಿ, ಕಾವೇರಿ ಕಣಿವೆ ಕಾಮಗಾರಿಗಳಿಗಾಗಿ ೨೫೦.೦೦ ಕೋಟಿ ರೂಪಾಯಿಗಳೂ ಸೇರಿದಂತೆ ೮೫೦.೦೦ ಕೋಟಿ ರೂಪಾಯಿಗಳ ವೆಚ್ಚಕ್ಕೆ ಏರ್ಪಾಡು ಮಾಡಲಾಗಿದೆ. ಕಾಮಗಾರಿಯ ಪ್ರಗತಿಯನ್ನಾಧರಿಸಿ ಈ ವರ್ಷ ಕಾವೇರಿ

ಕಾಮಗಾರಿಗಳಿಗೆ ಇನ್ನೂ ೫೦.೦೦ ಕೋಟಿ ರೂಪಾಯಿಗಳನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ. ಪ್ರಸ್ತುತ ವರ್ಷದಲ್ಲಿ ೧.೨೭ ಲಕ್ಷ ಹೆಕ್ಟೇರುಗಳಷ್ಟು ಹೆಚ್ಚಿನ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

೪೦. ವಿಶ್ವಬ್ಯಾಂಕ್ ನೆರವಿನ ಕೃಷ್ಣಾ ಮೇಲ್ದಂಡೆ ಯೋಜನೆಯಿಂದಾಗಿ ಸ್ಥಳಾಂತರಿತರಾದ ವ್ಯಕ್ತಿಗಳಿಗಾಗಿ ಪುನರ್‌ವ್ಯವಸ್ಥೆ ಮತ್ತು ಪುನರ್ ವಸತಿ ಕಲ್ಪಿಸುವ ಕಾರ್ಯ ನಿಧಾನವಾಗಿದೆ. ವಿಶ್ವಬ್ಯಾಂಕ್ ೧೯೯೨ರ ನವೆಂಬರ್ ಮೊದಲವಾರದಲ್ಲಿ ನೆರವನ್ನು ನಿಲ್ಲಿಸಿದೆ. ನಾನು ಪುನರ್‌ವ್ಯವಸ್ಥೆ ಮತ್ತು ಪುನರ್ ವಸತಿ ಕಾರ್ಯಗಳಿಗೆ ಈಗ ಅತ್ಯಂತ ಹೆಚ್ಚಿನ ಆದ್ಯತೆಯನ್ನು ನೀಡಿದ್ದೇನೆ. ಮತ್ತು ಈ ಯೋಜನೆಗೆ ವಿಶ್ವಬ್ಯಾಂಕ್ ಶೀಘ್ರದಲ್ಲಿಯೇ ನೆರವನ್ನು ಮುಂದುವರಿಸುತ್ತದೆಂಬ ವಿಶ್ವಾಸ ನನಗಿದೆ.

೪೧. ಹಿಂದಿನ ವರ್ಷಗಳಲ್ಲಿ ಬೃಹತ್ ಪ್ರಮಾಣದ ಹಣ ವಿನಿಯೋಗಿಸಿ ಬೃಹತ್, ಮಧ್ಯಮ ಮತ್ತು ಸಣ್ಣ (ಭೂಮೇಲ್ಮೈ) ನೀರಾವರಿ ಅಡಿಯಲ್ಲಿ ೨೨.೮೪ ಲಕ್ಷ ಹೆಕ್ಟೇರುಗಳಷ್ಟು ಗಣನೀಯ ಪ್ರಮಾಣದ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ. ಆದರೆ ವಾಸ್ತವವಾಗಿ ಈ ಸೌಲಭ್ಯವನ್ನು ೨೦.೦೪ ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ಮಾತ್ರ ಬಳಸಿಕೊಳ್ಳಲಾಗಿದೆ. ಈ ಅಸಮತೆಯಿಂದ ರಾಜ್ಯಕ್ಕೆ ಭಾರಿ ನಷ್ಟ ಆಗುತ್ತಿದೆ. ಆದ್ದರಿಂದ ಬಳಕೆ ಅಂಶಕ್ಕೆ ನಾನು ಅತ್ಯಂತ ಹೆಚ್ಚಿನ ಆದ್ಯತೆ ನೀಡಲು ಉದ್ದೇಶಿಸಿದ್ದೇನೆ. ಪ್ರಯುಕ್ತ, ಈ ಅಂತರದ ಪೈಕಿ ೧.೪ ಲಕ್ಷ ಹೆಕ್ಟೇರು ಪ್ರದೇಶವನ್ನು ೧೯೯೩-೯೪ರಲ್ಲಿ ನೀರಾವರಿ ಬಳಕೆಯ ವ್ಯಾಪ್ತಿಗೆ ತರಲಾಗುವುದು. ಬಳಸಿಕೊಳ್ಳದೆ ಉಳಿದಿರುವ ಮತ್ತು ೧೯೯೨-೯೩ರಲ್ಲಿ ಹೊಸದಾಗಿ ಸೃಜಿಸಿರುವ ನೀರಾವರಿ ಸಾಮರ್ಥ್ಯವನ್ನು ೧೯೯೪-೯೫ರಲ್ಲಿ ಬಳಸಿಕೊಳ್ಳಲಾಗುವುದು. ನೀರಾವರಿ ಸಾಮರ್ಥ್ಯವನ್ನು ಸೃಜಿಸಿ ಅದನ್ನು ಬಳಸಿಕೊಳ್ಳುವುದರ ನಡುವಿನ ಅವಧಿಯ ಅಂತರವನ್ನು ಇನ್ನು ಮುಂದೆ ಗರಿಷ್ಠ ಒಂದು ವರ್ಷಕ್ಕೆ ಸೀಮಿತಗೊಳಿಸಲಾಗುವುದು.

೪೨. ೧೯೮೬-೮೭ರಲ್ಲಿ ಕೃಷ್ಣಾ ನದಿ ಕಣಿವೆ ಪ್ರದೇಶಕ್ಕೆ ಒಂದು ಮತ್ತು ಕಾವೇರಿ ನದಿ ಕಣಿವೆ ಪ್ರದೇಶಕ್ಕೆ ಮತ್ತೊಂದು ಹೀಗೆ ರಚಿಸಲಾಗಿದ್ದ ಎರಡು ಏತ ನೀರಾವರಿ ನಿಗಮಗಳು ಯಾವುದೇ ರೀತಿಯಲ್ಲಿ ಉಪಯುಕ್ತವಲ್ಲವೆಂಬುದು ರುಜುವಾತಾಗಿದೆ. ಈ ನಿಗಮಗಳನ್ನು ಸ್ಥಾಪಿಸಿದಂದಿನಿಂದ ಅವುಗಳಿಗೆ ಬಜೆಟ್ಟಿನಲ್ಲಿ ನಿಗದಿ ಮಾಡಿದ್ದ ೮ ಕೋಟಿ ರೂಪಾಯಿಗಳಲ್ಲಿ ೬.೯ ಕೋಟಿ ರೂಪಾಯಿಗಳನ್ನು ಸಿಬ್ಬಂದಿ ವೆಚ್ಚಕ್ಕಾಗಿಯೇ ವಿನಿಯೋಗಿಸಲಾಗಿದೆ. ೧೯೯೩ರ ಏಪ್ರಿಲ್‌ನಿಂದ ಈ ಎರಡೂ ನಿಗಮಗಳನ್ನು ರದ್ದುಪಡಿಸಲಾಗುವುದು ಮತ್ತು ಅವುಗಳ ಕಾರ್ಯವನ್ನು ನೀರಾವರಿ ಇಲಾಖೆಗೇ ವಹಿಸಿಕೊಡಲಾಗುವುದು.

೪೩. ನೀರಾವರಿಯು ಬಹಳಷ್ಟು ಸಂಖ್ಯೆಯ ಜನರಿಗೆ ಪ್ರಯೋಜನಗಳನ್ನು ನೀಡುತ್ತದೆ. ಆದರೆ, ಅದಕ್ಕೆ ಬಹಳ ಬಂಡವಾಳ ಬೇಕು. ಆದುದರಿಂದ, ನಿರ್ವಹಣೆಯ ಹಂತದಲ್ಲಿಯೇ ಸಂಪನ್ಮೂಲಗಳನ್ನು ಸಂಗ್ರಹಿಸುವಲ್ಲಿ ಜನತೆಯೂ ಪಾಲ್ಗೊಳ್ಳುವುದು ಅಪೇಕ್ಷಣೀಯ. ಪ್ರಾರಂಭಿಕ ಕ್ರಮವಾಗಿ, ನಾನು, ನೀರಾವರಿ ನಿಧಿಯೊಂದನ್ನು ರಚಿಸಲು ಉದ್ದೇಶಿಸಿದ್ದು, ಅದಕ್ಕೆ ರೈತರು, ಸಹಕಾರಿ ಸಂಸ್ಥೆಗಳು ಮತ್ತು ಇತರರಿಂದ ವಂತಿಗೆಗಳನ್ನು ಸ್ವಾಗತಿಸಲಾಗುವುದು. ಸಣ್ಣ ಬ್ಯಾರೇಜುಗಳು, ಅಡ್ಡ ಗಟ್ಟೆಗಳು ಮುಂತಾದವುಗಳನ್ನು ನಿರ್ಮಿಸಿ ನಿರ್ವಹಿಸುವ ಸಲುವಾಗಿ ಸಹಕಾರ ಸಂಘಗಳನ್ನು ರಚಿಸಿಕೊಳ್ಳಲು ರೈತರಿಗೆ ಸಹ ಉತ್ತೇಜನ ನೀಡಲಾಗುವುದು. ಹಾಗೂ ಈ ಸಂಘಗಳಿಗೆ ನೆರವಾಗುವ ಸಲುವಾಗಿ ಮೂಲಧನ ಠೇವಣಿ, ಬಡ್ಡಿ ಸಹಾಯಧನ ಮತ್ತು ನಿರ್ವಹಣಾ ಅನುದಾನಗಳನ್ನು ನೀಡಲಾಗುವುದು.

ಕೆರೆ ಕಲ್ಯಾಣ

೪೪. ಸಣ್ಣ ನೀರಾವರಿ ಕೆರೆಗಳಲ್ಲಿ ಹೂಳೆತ್ತುವ, ಅವುಗಳನ್ನು ದುರಸ್ತಿ ಮಾಡುವ ಮತ್ತು ಪೂರ್ವ ಸ್ಥಿತಿಗೆ ತರುವ ಈ ಯೋಜನೆಯನ್ನು ೧೯೯೨-೯೩ರಲ್ಲಿ ಪ್ರಾರಂಭಿಸಿದ್ದರೂ ಸಹ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಲಿಲ್ಲ. ೧೩,೧೦೦ ಹೆಕ್ಟೇರು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ಸುಮಾರು ೫೭ ಕಾಮಗಾರಿಗಳಿಗೆ ಈಗ ಅನುಮೋದನೆ ನೀಡಲಾಗಿದೆ. ಈ ಯೋಜನೆಗೆ ಒದಗಿಸುವ ಹಣವನ್ನು ೫.೦೦ ಕೋಟಿ ರೂಪಾಯಿಗಳಿಂದ ೧೧.೦೦ ಕೋಟಿ ರೂಪಾಯಿಗಳಿಗೆ ಏರಿಸುವುದರೊಂದಿಗೆ ಇದನ್ನು ೧೯೯೩-೯೪ರಲ್ಲೂ ಮುಂದುವರೆಸಲಾಗುವುದು. ವಿಶ್ವಬ್ಯಾಂಕ್ ನೆರವಿನೊಂದಿಗೆ ಜಾರಿಗೊಳಿಸಲಾಗುವ ಸಮಗ್ರ ಕೃಷಿ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಸಣ್ಣ ನೀರಾವರಿ ಕೆರೆಗಳ ಆಧುನೀಕರಣವೂ ಸಹ ಒಂದು ಭಾಗವಾಗಿರುತ್ತದೆ. ಈ ಯೋಜನೆಯ ವ್ಯಾಪ್ತಿಗೆ ೧೨೦-೦೦ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ೧೫೧ ಸಣ್ಣ ನೀರಾವರಿ ಕೆರೆಗಳನ್ನು ಒಳಪಡಿಸಲಾಗುವುದು.

ಲೋಕೋಪಯೋಗಿ ಕಾಮಗಾರಿ

೪೫. ಹೊಸ ಮೂಲಭೂತ ಸೌಲಭ್ಯ ಅಭಿವೃದ್ಧಿಯ ಲೋಕೋಪಯೋಗಿ ಕಾಮಗಾರಿಗಳು ಹಣಕಾಸು ವರ್ಷದ ಪ್ರಾರಂಭದಲ್ಲಿಯೇ ಪ್ರಾರಂಭವಾಗುವಂತೆ ಮಾಡುವುದು ಅತ್ಯವಶ್ಯಕವಾಗಿದೆ. ಅಲ್ಲದೆ, ಈ ಕಾಮಗಾರಿಗಳನ್ನು ಮಂಜೂರು ಮಾಡುವಾಗ ಜನತೆಯ ಆಶೋತ್ತರವನ್ನು ಮತ್ತು ಪ್ರಾದೇಶಿಕ ಸಮತೋಲನವನ್ನು ಕಾಪಾಡಿಕೊಂಡು ಬರುವ ಅಗತ್ಯತೆಯನ್ನು ಗಣನೆಗೆ ತೆಗೆದುಕೊಳ್ಳಲೇ ಬೇಕು. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ೧೯೯೩-೯೪ರಲ್ಲಿ ಪ್ರಾರಂಭಿಸಲಾಗುವ ಹೊಸ ಕಾಮಗಾರಿಗಳ ಒಂದು ಪೂರ್ಣ ಪಟ್ಟಿಯನ್ನು ಈ ಅಧಿವೇಶನವು ಮುಕ್ತಾಯಗೊಳ್ಳುವುದಕ್ಕೆ ಮೊದಲು ಸದನದ ಮುಂದಿಡಲು ಉದ್ದೇಶಿಸಿದ್ದೇನೆ.

ಕೃಷಿ

೪೬. ನೀರಾವರಿ, ಕೃಷಿ ಸಂಶೋಧನೆ, ಮತ್ತು ಉತ್ತಮ ಗುಣಮಟ್ಟದ ಪರಿಕರಗಳನ್ನು ಒದಗಿಸುವುದಕ್ಕಾಗಿ ಗಣನೀಯ ಪ್ರಮಾಣದಲ್ಲಿ ಹಣ ವಿನಿಯೋಗಿಸಿದ್ದರೂ ರಾಜ್ಯದಲ್ಲಿ ಕೃಷಿ ಉತ್ಪಾದಕತೆ ಹಿಂದೆ ಇದ್ದ ಪ್ರಮಾಣದಲ್ಲೇ ಸ್ಥಗಿತಗೊಂಡಿರುವುದು ನಮ್ಮೆಲ್ಲರಿಗೂ ಆತಂಕ ಉಂಟು ಮಾಡಿದೆ. ೧೯೮೦ರ ದಶಕದಲ್ಲಿ, ಈ ವಲಯದಲ್ಲಿನ ಸಾಧನೆಯು ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆಯಿತ್ತು. ಆದ್ದರಿಂದ, ಇದಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಶೀಲಿಸಿ ಕೃಷಿ ಕ್ಷೇತ್ರದಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ಅಗತ್ಯವಾದ ನಿರ್ದಿಷ್ಟ ಕ್ರಮಗಳ ಬಗ್ಗೆ ಶಿಫಾರಸು ಮಾಡಲು ರಾಜ್ಯಸರ್ಕಾರವು, ಸಾಮಾಜಿಕ, ಆರ್ಥಿಕ ಬದಲಾವಣೆ ಅಧ್ಯಯನ ಸಂಸ್ಥೆಯ ನಿರ್ದೇಶಕರಾದ ಶ್ರೀ ಟಿ.ಆರ್. ಸತೀಶಚಂದ್ರನ್ ಅವರ ಅಧ್ಯಕ್ಷತೆಯಲ್ಲಿ ಒಂದು ತಜ್ಞ ಸಮಿತಿಯನ್ನು ರಚಿಸಿದೆ.

೪೭. ರಾಜ್ಯ ಸಮಗ್ರ ಕೃಷಿ ಅಭಿವೃದ್ಧಿ ಯೋಜನೆ ಬಗ್ಗೆ ವಿಶ್ವಬ್ಯಾಂಕಿನೊಂದಿಗೆ ಚರ್ಚಿಸಲಾಗುತ್ತಿದೆ. ವ್ಯವಸಾಯ, ತೋಟಗಾರಿಕೆ, ಸಣ್ಣ ನೀರಾವರಿ, ಕೃಷಿ ಉತ್ಪನ್ನಗಳ ಮಾರಾಟ, ಜಲವಿಭಾಜಕ ಪ್ರದೇಶ ಅಭಿವೃದ್ಧಿ ವಲಯಗಳಲ್ಲಿ ಮತ್ತು ಇತರ ಸಂಬಂಧಪಟ್ಟ ವಲಯಗಳಲ್ಲಿ ಯೋಜನಾ ಬಾಬಿನ ಅಡಿಯಲ್ಲಿ ಹಣ ವಿನಿಯೋಗಿಸುವುದಕ್ಕೆ ಪೂರಕವಾಗಿ ಹಣ ಒದಗಿಸುವ ಸಲುವಾಗಿ ವಿಶ್ವಬ್ಯಾಂಕಿನಿಂದ ೩೦೦-೦೦ ಕೋಟಿ ರೂಪಾಯಿ ಸಾಲ ಪಡೆಯಲು ಉದ್ದೇಶಿಸಲಾಗಿದೆ. ನಾನು ಈಗ ಹೇಳಲಿರುವ ಧ್ಯೇಯೋದ್ದೇಶಗಳನ್ನೊಳಗೊಂಡ ಒಂದು ಕೃಷಿ ಕಾರ್ಯತಂತ್ರ ಪತ್ರವನ್ನು ವಿಶ್ವಬ್ಯಾಂಕ್‌ಗೆ ಸಲ್ಲಿಸುವುದಕ್ಕಾಗಿ ಸರ್ಕಾರ ಸಿದ್ಧಪಡಿಸುತ್ತಿದೆ.

ಎ) ತಾಂತ್ರಿಕ, ಹಣಕಾಸು ಮತ್ತು ಆರ್ಥಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಸುಧಾರಣೆ ತರುವ ಮೂಲಕ ಕೃಷಿ ಬೆಳವಣಿಗೆಯನ್ನು ತ್ವರಿತಗೊಳಿಸುವುದು.

ಬಿ) ಭೂಮಿಯ ಫಲವತ್ತತೆ ಹಾಳಾಗುವುದನ್ನು ತಡೆಯುವುದು ಮತ್ತು ಉತ್ಪಾದಕ ಸಂಪನ್ಮೂಲ ಆಧಾರವನ್ನು ಹೆಚ್ಚಿಸುವುದು.

ಸಿ) ಈ ವಲಯದಲ್ಲಿರುವ ತೀರಾ ಕೆಳದರ್ಜೆಯ ಭೂಮಿಗಳ ಗುಣಮಟ್ಟವನ್ನು ಸುಧಾರಿಸುವುದು.

ಈ ಯೋಜನೆಗೆ ೧೯೯೩-೯೪ನೇ ಸಾಲಿನ ಬಜೆಟ್ಟಿನಲ್ಲಿ ೨೪೦.೦೦ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ಯೋಜನೆಯು, ೧೯೯೩-೯೪ರಲ್ಲಿ ಪ್ರಾರಂಭವಾಗಿ ೫ ವರ್ಷಗಳ ಅವಧಿಯೊಳಗೆ ಪೂರ್ಣಗೊಳ್ಳಲಿದೆ.

೪೮. ಕೃಷಿ ತಂತ್ರಜ್ಞಾನ ಕ್ಷೇತ್ರದಲ್ಲಿ ಆಗಿರುವ ಅಭಿವೃದ್ಧಿಗಳನ್ನು ಪರಿಣಾಮಕಾರಿಯಾಗಿ ರೈತರಿಗೆ ತಲುಪಿಸುವ ಸಲುವಾಗಿ ವಿವಿಧ ಕೃಷಿ ಹವಾಗುಣದ ಪ್ರದೇಶಗಳಲ್ಲಿ ಕೃಷಿ ಕ್ಷೇತ್ರೋತ್ಸವಗಳನ್ನು ನಡೆಸಲು ಉದ್ದೇಶಿಸಲಾಗಿದೆ. ರೈತರು, ವಿಜ್ಞಾನಿಗಳು ಮತ್ತು ಜಾರಿಗೊಳಿಸುವ ಏಜೆನ್ಸಿಗಳು, ಪರಸ್ಪರ ಸೇರಿ ತಮ್ಮ ನಿರ್ದಿಷ್ಟ ಸಮಸ್ಯೆಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಳ್ಳಲು ಇವು ವೇದಿಕೆಯಾಗುತ್ತವೆ. ಜಾರಿಗೊಳಿಸುವ ಏಜೆನ್ಸಿಗಳು ರೈತರ ಸಮಸ್ಯೆಗಳನ್ನು ಪರಾಮರ್ಶೆ ಮಾಡುವ ಅವಕಾಶ ಹೆಚ್ಚಾಗಿ ಉತ್ಪಾದಕತೆ ಹೆಚ್ಚಳಕ್ಕೆ ಸಹ ಇದು ನೆರವಾಗುತ್ತದೆ. ಅಲ್ಲದೆ, ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳ ವೃತ್ತಿ ಪದವೀಧರರನ್ನು ವಿಸ್ತರಣಾ ಕಾರ್ಯಗಳಲ್ಲಿ ತೊಡಗಿಸಲು ಅವರಲ್ಲಿನ ಉದ್ಯಮಶೀಲತೆಗೆ ಉತ್ತೇಜನ ನೀಡುವ ಸಲುವಾಗಿ ಸರ್ಕಾರವು ಯೋಜನೆಯೊಂದನ್ನು ರೂಪಿಸಿದೆ. ಈ ಯೋಜನೆಗೆ ೩೦.೦೦ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

೪೯. ಉತ್ತಮ ಗುಣಮಟ್ಟದ ಬೀಜಗಳು ಅತ್ಯಾವಶ್ಯಕವಾದ ಮೂಲಭೂತ ಪರಿಕರಗಳಾಗಿವೆ. ಈಗ ರಾಜ್ಯದಲ್ಲಿ ಪ್ರಮಾಣೀಕೃತ ಬೀಜಗಳಿಗೆ ಇರುವ ಬೇಡಿಕೆಯಲ್ಲಿ ಶೇಕಡಾ ೪೦ರಷ್ಟನ್ನು ಮಾತ್ರ ಪೂರೈಸಲು ಸಾಧ್ಯವಾಗುತ್ತಿರುವುದರಿಂದ ಬಡ ರೈತ ಕಳಪೆ ಬೀಜಗಳನ್ನೇ ಬಳಸುವಂತಾಗಿದೆ. ಖಾಸಗಿ ಬಿತ್ತನೆ ಬೀಜ ಉತ್ಪಾದಕರಿಗೆ ಹಲವಾರು ರಿಯಾಯಿತಿಗಳನ್ನು ನೀಡಲು ನಾನು ಉದ್ದೇಶಿಸಿದ್ದೇನೆ. ಇದರಿಂದ, ಉತ್ತಮ ಗುಣಮಟ್ಟದ ಬೀಜಗಳಿಗಾಗಿ ಇರುವ ರೈತರ ಬೇಡಿಕೆಯು ಸಂಪೂರ್ಣವಾಗಿ ಈಡೇರುತ್ತದೆ.

೫೦. ಭಾರತ ಸರ್ಕಾರವು ಆರ್ಥಿಕ ಬೆಂಬಲ ನೀಡಿರುವ ಸಣ್ಣ ಮತ್ತು ಅತಿಸಣ್ಣ ರೈತರ ಅಭಿವೃದ್ಧಿ ಯೋಜನೆಯ ಒಂದು ಭಾಗವಾಗಿ, ಸಂಯುಕ್ತ ರಸಗೊಬ್ಬರಗಳ ಮೇಲೆ ಸಹಾಯಧನ ನೀಡುವುದಕ್ಕಾಗಿ ೨೬.೬೦ ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಸಹಕಾರಿ ಸಂಘಗಳ ಸಾಲದ ಮರುಪಾವತಿಗಾಗಿ ಕೃಷಿಕರಿಗೆ ಪ್ರೋತ್ಸಾಹಕಗಳನ್ನು ನೀಡಲು ೫ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಇದರ ಜೊತೆಗೆ ವಿಫಲ ಬಾವಿಗಳ - ಕಾರ್ಯಕ್ರಮದ ಮೇರೆಗೆ ೨ ಕೋಟಿ ರೂಪಾಯಿಗಳ ಸಹಾಯಧನವನ್ನು ಮತ್ತು ಸಣ್ಣ ಹಾಗೂ ಅತಿಸಣ್ಣ ರೈತರಿಗೆ ಪ್ರಮಾಣಿತ ಬೀಜಗಳ ವಿತರಣೆಗಾಗಿ ೨ ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಕೃಷಿ ಪಾಸ್ ಪುಸ್ತಕಗಳ ಮುದ್ರಣಕ್ಕಾಗಿ ೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುವುದು.

೫೧. ಈಗ ರಾಜ್ಯದಲ್ಲಿರುವ ಎರಡು ಕೀಟನಾಶಕ ನಿಯಂತ್ರಣ ಪ್ರಯೋಗಶಾಲೆಗಳ ಜೊತೆಗೆ ೧೯೯೩-೯೪ರ ಕೊನೆಯ ವೇಳೆಗೆ ಇನ್ನೂ ಎರಡು ಪ್ರಯೋಗ ಶಾಲೆಗಳನ್ನು ಸ್ಥಾಪಿಸಲಾಗುವುದು.

೫೨. ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳ ಬೋಧನೆ ಹಾಗೂ ಸಂಶೋಧನಾ ಕಾರ್ಯಕ್ರಮಗಳನ್ನು ಪರಿಶೀಲಿಸಿ ಪುನರ್ ವ್ಯವಸ್ಥೆಗೊಳಿಸಲು ಕೃಷಿ ವಿಶ್ವವಿದ್ಯಾನಿಲಯಗಳ ಪರಿಶೀಲನಾ ಆಯೋಗವೊಂದನ್ನು ರಚಿಸಲು ನಾನು ಉದ್ದೇಶಿಸಿದ್ದೇನೆ. ಅವುಗಳ ಅಭಿವೃದ್ಧಿ ಅನುದಾನಗಳ ಮೂರನೇ ಒಂದು ಭಾಗವನ್ನು ಸಂಶೋಧನೆಯ ಉದ್ದೇಶಕ್ಕಾಗಿಯೇ ಮೀಸಲಿಡಲಾಗುವುದು.

ಅಂಥ ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೃಷಿ ಹವಾಗುಣವನ್ನು ಆಧರಿಸಿ ಯೋಜಿಸಲೇ ಬೇಕಾಗುತ್ತದೆ. ಬಿಜಾಪುರ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ಅನುಕ್ರಮವಾಗಿ ತೋಟಗಾರಿಕೆ ಹಾಗೂ ಹತ್ತಿಯ ಬೆಳೆಗೆ ಪ್ರಾಮುಖ್ಯತೆ ನೀಡುವುದರೊಂದಿಗೆ ನಿರ್ದಿಷ್ಟ ಬೆಳೆ ಪ್ರಾದೇಶಿಕ ಯೋಜನೆ ಮತ್ತು ಉತ್ಪಾದನಾ ಕಾರ್ಯಕ್ರಮಗಳನ್ನು ಪ್ರಾರಂಭಿಸಲು ನಾನು ಉದ್ದೇಶಿಸಿದ್ದೇನೆ.

೫೩. ಜಲ ವಿಭಾಜಕ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮವನ್ನು ಕಾರ್ಯಗತ ಗೊಳಿಸುವ ಸಲುವಾಗಿ ಪ್ರತಿಯೊಂದು ವಿಭಾಗದಲ್ಲಿ ಒಣಭೂಮಿ ಅಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಲಾಗಿತ್ತು. ಈ ಕಾರ್ಯಕ್ರಮಗಳನ್ನು ಬರಗಾಲ ಪೀಡಿತ ಪ್ರದೇಶ ಕಾರ್ಯಕ್ರಮ ಮತ್ತು ಬಂಜರು ಭೂಮಿ ಅಭಿವೃದ್ಧಿ ಕಾರ್ಯಕ್ರಮಗಳೊಂದಿಗೆ ಸಾರ್ಥಕ ರೀತಿಯಲ್ಲಿ ಸಮನ್ವಯಗೊಳಿಸಿ ಅವುಗಳನ್ನು ಒಂದೇ ಆಡಳಿತ ವ್ಯವಸ್ಥೆಗೆ ಒಳಪಡಿಸುವ ಸಾಧ್ಯತೆಗಳನ್ನು ಪರಿಶೀಲಿಸಲಾಗುವುದು. ಈ ವ್ಯವಸ್ಥೆಯಿಂದ ಮೈದಾನ ಮತ್ತು ಬರಗಾಲ ಪೀಡಿತ ಪ್ರದೇಶಗಳ ಸಮಗ್ರ ಅಭಿವೃದ್ಧಿ ಸಾಧ್ಯವಾಗುತ್ತದೆ.

೫೪. ರೈತರು ತಮ್ಮ ಉತ್ಪನ್ನಗಳಿಗೆ ನ್ಯಾಯ ಬೆಲೆ ಪಡೆಯುವಂತೆ ಮಾಡುವ ಸಲುವಾಗಿ ಹುಬ್ಬಳ್ಳಿ ಮತ್ತು ಗದಗ್ ಹತ್ತಿ ಮಾರಾಟ ಸಂಘಗಳ ಮಾದರಿಯಲ್ಲೇ ಬೆಳಗಾವಿ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಹತ್ತಿ ಮಾರಾಟ ಸಂಘವೊಂದನ್ನು ಸ್ಥಾಪಿಸಲಾಗುವುದು. ತರುವಾಯ, ರಾಯಚೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲೂ ಇಂಥ ಸಂಘಗಳನ್ನು ಸ್ಥಾಪಿಸಲಾಗುವುದು.

ಸಂಪದ

೫೫. ಒಂದು ಎಕರೆಗಿಂತ ಕಡಿಮೆ ಭೂಮಿ ಹೊಂದಿರುವ ರೈತರ ಅನುಕೂಲಕ್ಕಾಗಿ, ಹೆಚ್ಚು ಆದಾಯ ಗಳಿಸಿಕೊಡುವಂಥ ಹಾಗೂ ಸಮಗ್ರ ಕೃಷಿ ವಿಸ್ತರಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂಥ ಹಾಗೂ ತರಬೇತಿ, ವಿಸ್ತರಣೆ ಮತ್ತು ಕೃಷಿ ಸಾಮಗ್ರಿಗಳನ್ನು ನೀಡುವ ಮೂಲಕ ಅನುಷ್ಠಾನ ಕಾರ್ಯದಲ್ಲಿ ಅವರಿಗೆ ನೆರವು ನೀಡುವಂಥ ''ಸಂಪದ'' ಎಂಬ ಹೊಸ ಯೋಜನೆಯೊಂದನ್ನು ಪ್ರಾರಂಭಿಸಲು ನಾನು ಉದ್ದೇಶಿಸಿದ್ದೇನೆ. ಕೃಷಿ ವಿಶ್ವವಿದ್ಯಾನಿಲಯಗಳು ರಾಜ್ಯದ ವಿವಿಧ ಬಗೆಯ ಕೃಷಿ ಹವಾಗುಣ ವಲಯಗಳಲ್ಲಿ ನೀರಿನ ಲಭ್ಯತೆಯನ್ನಾಧರಿಸಿ ಅಂಥ ಕಾರ್ಯಕ್ರಮಗಳನ್ನು ರೂಪಿಸುತ್ತವೆ.

ಡಂಕೆಲ್ ಕರಡು

೫೬. ''ಗ್ಯಾಟ್'' (GATT) ಕುರಿತ ಸಮಾಲೋಚನಾ ಸಭೆಗಳ ಮುಂದಿಟ್ಟಿರುವ ಡಂಕೆಲ್ ಪ್ರಸ್ತಾವನೆಯಲ್ಲಿ ಒಳಗೊಂಡಿರುವ, ವ್ಯಾಪಾರ ಸಂಬಂಧಿ ಬೌದ್ಧಿಕ ಆಸ್ತಿಯ ಹಕ್ಕುಗಳಿಂದ ಉಂಟಾಗುವ ಪರಿಣಾಮಗಳ ಬಗ್ಗೆ ಹೇಳುವುದಾದರೆ, ಅದು ರಾಜ್ಯದ ಹಿತಾಸಕ್ತಿಯ ಮೇಲೆ ಉಂಟು ಮಾಡುವ ಪರಿಣಾಮಗಳ ಬಗ್ಗೆಯೂ ಸರ್ಕಾರ ಪರಿಶೀಲಿಸುತ್ತಿದೆ. ಈ ಪ್ರಸ್ತಾವನೆಯಿಂದಾಗಿ ಕೃಷಿ, ಆರೋಗ್ಯ ಮತ್ತು ಕೈಗಾರಿಕೆ ಮುಂತಾದ ವಲಯಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆಂದು ಹಾಗೂ ಅದು ಉದ್ಯೋಗಾವಕಾಶಗಳ ಮೇಲೆಯೂ ಪರಿಣಾಮ ಬೀರುತ್ತದೆಂದು ವಿವಿಧ ರಂಗಗಳಲ್ಲಿ ವ್ಯಕ್ತವಾಗಿರುವ ಶಂಕೆಯನ್ನು ಸಮಾಲೋಚನಾ ಪ್ರಕ್ರಿಯೆಯ ಮೂಲಕ ಪರಿಶೀಲಿಸಲಾಗುವುದು ಹಾಗೂ ರಾಜ್ಯದ ಅಭಿಪ್ರಾಯವನ್ನು ಸೂಕ್ತ ಕ್ರಮಕ್ಕಾಗಿ ಭಾರತ ಸರ್ಕಾರಕ್ಕೆ ತಿಳಿಸಲಾಗುವುದು.

ತೋಟಗಾರಿಕೆ

೫೭. ಕರ್ನಾಟಕವು ಅದರಲ್ಲೂ ಮುಖ್ಯವಾಗಿ ಬೆಂಗಳೂರು ಹಾಗೂ ಸುತ್ತಮುತ್ತಲಿನ ಪ್ರದೇಶಗಳು ಒಂದು ಕಾಲದಲ್ಲಿ ತೋಟಗಳು, ಉದ್ಯಾನಗಳು, ಹಣ್ಣಿನ ತೋಟಗಳು ಹಾಗೂ

ವೃಕ್ಷಗಳಿಗಾಗಿ ಹೆಸರುವಾಸಿಯಾಗಿದ್ದವು. ಆದ್ದರಿಂದ ಕರ್ನಾಟಕವನ್ನು "ತೋಟಗಳ ನಾಡಾಗಿ" ಪರಿವರ್ತಿಸುವ ಸಲುವಾಗಿ ಒಂದು ನೀತಿಯನ್ನು ರೂಪಿಸಲು ನಾನು ಉದ್ದೇಶಿಸಿದ್ದೇನೆ. ಬೆಂಗಳೂರಿನಲ್ಲಿರುವ ಲಾಲ್‌ಬಾಗ್ ಹಾಗೂ ಕಬ್ಬನ್‌ಪಾರ್ಕ್ ಸೇರಿದಂತೆ, ನಗರಗಳಲ್ಲಿರುವ ಸಾರ್ವಜನಿಕ ಉದ್ಯಾನಗಳ ಮತ್ತು ತೋಟಗಳ ಸುಧಾರಣೆ ಹಾಗೂ ಅವುಗಳ ನಿರ್ವಹಣೆಯ ಕಾರ್ಯದಲ್ಲಿ ಸರ್ಕಾರಿ ವಲಯ ಹಾಗೂ ಖಾಸಗಿ ವಲಯಗಳೆರಡನ್ನೂ ತೊಡಗಿಸಲಾಗುವುದು.

೫೮. ಕಚ್ಚಾ, ಅರೆ ಸಂಸ್ಕರಿಸಿದ ಅಥವಾ ಸಂಸ್ಕರಿಸಿದ ತೋಟಗಾರಿಕೆ ಬೆಳೆಗಳ ರಫ್ತಿಗೆ ಉತ್ತೇಜನ ನೀಡುವ ದೃಷ್ಟಿಯಿಂದ, ಮಾವಿಗೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ, ಹೂಗಳಿಗೆ ಬೆಂಗಳೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಮತ್ತು ದ್ರಾಕ್ಷಿ, ದಾಳಿಂಬೆಗೆ ಮತ್ತು ಇತರ ವಿದೇಶಿ ಮೂಲದ ಹಣ್ಣುಗಳಿಗೆ ಬಿಜಾಪುರ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ ತೋಟಗಾರಿಕೆ ಅಭಿವೃದ್ಧಿ ವಲಯಗಳನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಖಾಸಗಿ ಉದ್ಯಮಿಗಳಿಗೂ ಅವಕಾಶ ನೀಡಲಾಗುವುದು.

೫೯. ಸಮಗ್ರ ಕೃಷಿ ಅಭಿವೃದ್ಧಿ ಯೋಜನೆಯ ಒಂದು ಬಾಗವಾಗಿ, ಒಣಭೂಮಿ ತೋಟಗಾರಿಕೆಗೆ ಉತ್ತೇಜನ ನೀಡುವ ದೃಷ್ಟಿಯಿಂದ ೨೫,೦೦೦ ಭೂ ರಹಿತ ಕೃಷಿ ಕಾರ್ಮಿಕರಿಗೆ ಮತ್ತು ಅತಿ ಸಣ್ಣ ರೈತರಿಗೆ, ಪ್ರತಿಯೊಬ್ಬರಿಗೂ ಸರ್ಕಾರಿ ಸಿ ಮತ್ತು ಡಿ ವರ್ಗದ ೧ ಹೆಕ್ಟೇರ್ ಭೂಮಿಯನ್ನು ಹಂಚಲಾಗುವುದು ಮತ್ತು ಒಣ ಭೂಮಿ ತೋಟಗಾರಿಕೆಯನ್ನು ಕೈಗೊಳ್ಳುವಂತೆ ಮಾಡುವ ಸಲುವಾಗಿ ಇನ್ನು ೨೫೦೦೦ ಸಣ್ಣ ಮತ್ತು ಅತಿಸಣ್ಣ ರೈತರಿಗೆ, ತರಬೇತಿ, ವಿಸ್ತರಣಾ ಸೌಲಭ್ಯಗಳನ್ನು ಹಾಗೂ ಬೆಂಬಲವನ್ನು ನೀಡಲಾಗುವುದು. ಈ ಯೋಜನೆಗೆ ಐದು ವರ್ಷದಲ್ಲಿ ತಗಲುವ ವೆಚ್ಚ ೬೦.೦೦ ಕೋಟಿ ರೂಪಾಯಿಗಳು.

ಪಶು ಸಂಗೋಪನೆ

೬೦. ಜಾನುವಾರುಗಳ ಸಂಖ್ಯೆಯ ಮೇಲೆ ಆಧಾರಿತವಾದ ನಿಬಂಧನೆಗಳ ಪ್ರಕಾರ, ಕರ್ನಾಟಕದಲ್ಲಿ ಈಗಿರುವ ೨೮೧೬ ಪಶುವೈದ್ಯ ಸಂಸ್ಥೆಗಳಿಗೆ ಪ್ರತಿಯಾಗಿ ೩೬೦೦ ಸಂಸ್ಥೆಗಳು ಇರಬೇಕಾಗಿದೆ. ಈ ಅಂತರವನ್ನು ಹಂತ ಹಂತವಾಗಿ ಕಡಿಮೆ ಮಾಡಲು ೧೯೯೩-೯೪ರಲ್ಲಿ, ೨೦೦ ಪ್ರಾಥಮಿಕ ಪಶುವೈದ್ಯ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು ಹಾಗೂ ೮೦ ಕೇಂದ್ರಗಳನ್ನು ಪಶುವೈದ್ಯ ಶಾಲೆಗಳ ದರ್ಜೆಗೇರಿಸಲಾಗುವುದು. ಈ ಉದ್ದೇಶಕ್ಕಾಗಿ, ಬಜೆಟ್‌ನಲ್ಲಿ ೮.೦೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಪಶು ವೈದ್ಯ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಖಾಸಗಿ ಉದ್ಯಮಿಗಳಿಗೆ ಸಹ ಉತ್ತೇಜನ ನೀಡಲಾಗುವುದು. ಈವರೆಗೆ ಬೆಂಗಳೂರಿನಲ್ಲಿ ಮಾತ್ರ ಇದ್ದ ಕೃತಕ ಗರ್ಭಧಾರಣೆ ಕುರಿತ ಹೊಸ ತಂತ್ರಜ್ಞಾನಗಳನ್ನು ಮತ್ತು ಘನೀಕೃತ ವೀರ್ಯ ಉತ್ಪಾದನಾ ಸೌಲಭ್ಯಗಳನ್ನು ಧಾರವಾಡ ಮತ್ತು ಮುನಿರಾಬಾದ್‌ಗಳಿಗೂ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಕೊಯಿಲ್‌ಗೂ ವಿಸ್ತರಿಸಲಾಗುವುದು.

೬೧. ಮಿಶ್ರತಳಿ ಪಶು ಸಂವರ್ಧನೆ ಹಾಗೂ ಕರು ಸಾಕಣೆ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರೇತರ ಸಂಸ್ಥೆಗಳಿಗೆ ಬೆಂಬಲ ನೀಡುವ ಹೊಸ ಯೋಜನೆಯೊಂದನ್ನು ರೂಪಿಸಲಾಗಿದ್ದು, ೧೯೯೩-೯೪ರಲ್ಲಿ, ನಾಲ್ಕು ರೆವಿನ್ಯೂ ವಿಭಾಗಗಳ ಪೈಕಿ ಪ್ರತಿಯೊಂದು ವಿಭಾಗದ ಆಯ್ದ ಕೇಂದ್ರಗಳಲ್ಲಿ ಅಂಥ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು. ಈ ನಾಲ್ಕೂ ಜಿಲ್ಲೆಗಳಲ್ಲಿರುವ ಸಮಗ್ರ ಗ್ರಾಮೀಣಾಭಿವೃದ್ಧಿ ಯೋಜನೆಯ ಫಲಾನುಭವಿಗಳು ಇನ್ನು ಮುಂದೆ ಆ ಕೇಂದ್ರಗಳಿಂದಲೇ ಸಬ್ಸಿಡಿ ದರದಲ್ಲಿ ಸುಧಾರಿತ ಕರಾವು ಹಸುಗಳನ್ನು ಕೊಂಡುಕೊಳ್ಳಬೇಕಾಗುತ್ತದೆ ಮತ್ತು ಸಬ್ಸಿಡಿಯನ್ನು ಈ ಕೇಂದ್ರಗಳಿಗೆ ನೇರವಾಗಿ ಸಂದಾಯ ಮಾಡಲಾಗುತ್ತದೆ. ಇದರಿಂದ ದುರುಪಯೋಗವನ್ನು ತಡೆಗಟ್ಟಿದಂತಾಗುತ್ತದೆ.

ಮೀನುಗಾರಿಕೆ-ನೀಲಿಕ್ರಾಂತಿ

೬೨. ಮೀನುಗಾರಿಕೆ ವಲಯದಲ್ಲಿ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಆಳ ಸಮುದ್ರದಲ್ಲಿ ಮೀನು ಹಿಡಿಯುವ, ಉಪ್ಪು ನೀರಿನಲ್ಲಿ ಮೀನು ಹಿಡಿಯುವ ಮತ್ತು ಒಳನಾಡು ಮೀನುಗಾರಿಕೆಯ ಗುರಿಯಿಟ್ಟು ಕೊಂಡಿರುವ ನೀಲಿಕ್ರಾಂತಿ ಎಂಬ ಒಂದು ನಿರ್ದಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ತರಬೇತಿ ಮತ್ತು ವಿಸ್ತರಣೆ, ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಮತ್ತು ಉದ್ಯಮಿಗಳಿಗೆ ಪ್ರೋತ್ಸಾಹಧನ ನೀಡಿಕೆ ಒಳಗೊಂಡಿರುತ್ತದೆ. ಕರ್ನಾಟಕದ ಮೀನುಗಾರರು, ವಿದೇಶಿ ವಿನಿಮಯವನ್ನು ಗಳಿಸಿಕೊಡುವಂಥ ಮೀನುಗಳನ್ನು ಹಿಡಿಯುವುದಕ್ಕಾಗಿ ಆಳ ಸಮುದ್ರದ ಪ್ರಯೋಜನ ಪಡೆದುಕೊಂಡಿಲ್ಲ. ಈ ವಲಯದಲ್ಲಿ ಖಾಸಗಿ ಉದ್ಯಮಿಗಳಿಗೆ ಉತ್ತೇಜನ ನೀಡಲು ಉದ್ದೇಶಿಸಲಾಗಿದೆ. ಅದೇ ರೀತಿ ಉಪ್ಪುನೀರು ಮೀನುಗಾರಿಕೆಗೆ ೪೦೦೦ ಹೆಕ್ಟೇರು ವಿಸ್ತೀರ್ಣದ ಸೂಕ್ತ ಪ್ರದೇಶವನ್ನು ಈಗಾಗಲೇ ಗುರುತಿಸಲಾಗಿದೆ. ಈ ಪ್ರದೇಶವನ್ನು ಈ ಉದ್ದೇಶಕ್ಕಾಗಿ ಬಳಸಿಕೊಳ್ಳಲಾಗುವುದು. ಒಳನಾಡು ಮೀನುಗಾರಿಕೆ ಬಗ್ಗೆ ಹೇಳುವುದಾದರೆ, ಪ್ರಸ್ತುತ ಇರುವ ಮೀನು ಕೃಷಿ ಕೇಂದ್ರಗಳಲ್ಲಿ ಉದ್ಪಾದನೆಯನ್ನು ಹೆಚ್ಚಿಸುವ ಮೂಲಕ ಮತ್ತು ಖಾಸಗಿ ವಲಯದ ಉದ್ಯಮಗಳು ಇದರಲ್ಲಿ ಹೆಚ್ಚು ಹೆಚ್ಚು ಪಾಲ್ಗೊಳ್ಳುವಂತೆ ಮಾಡುವ ಮೂಲಕ ಸುಧಾರಿತ ತಳಿಯ ಮೀನುಮರಿಗಳನ್ನು ಉತ್ಪಾದಿಸುವುದು ನಮ್ಮ ಗುರಿಯಾಗಿದೆ.

೬೩. ಬಂದರುಗಳಲ್ಲಿ ಹೂಳೆತ್ತುವ ಕಾರ್ಯಾಚರಣೆಗಳೂ ಸೇರಿದಂತೆ ಅವಶ್ಯಕ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುವುದು. ಸುಮಾರು ೧೦.೦೦ ಕೋಟಿ ರೂಪಾಯಿಗಳ ಒಟ್ಟು ವೆಚ್ಚದಲ್ಲಿ ಮಲ್ಪೆ ಮೀನುಗಾರಿಕೆ ಬಂದರಿನ ಎರಡನೇ ಹಂತದ ಕೆಲಸವನ್ನು ಕೇಂದ್ರದ ನೆರವಿನೊಂದಿಗೆ ಕೈಗೆತ್ತಿಕೊಳ್ಳಲಾಗುವುದು. ಹೆಜಮಾಡಿಕೋಡಿ, ಪೆಣಂಬೂರು, ಹುಂಗರಕಟ್ಟೆ ಗಂಗೊಳ್ಳಿ, ಭಟ್ಕಳ, ಗಂಗವಳ್ಳಿ ಮತ್ತು ಬೆಳ್ಳಿಕೇರಿಗಳಲ್ಲಿ ಇಳಿದಾಣ ಕೇಂದ್ರಗಳ ನಿರ್ಮಾಣ ಕಾರ್ಯ ಸಹ ೧೯೯೩-೯೪ರಲ್ಲಿ ಪ್ರಾರಂಭವಾಗಲಿದೆ. ಆಳ ಸಮುದ್ರದಲ್ಲಿರುವ ಮೀನು ಸಂಪನ್ಮೂಲಗಳನ್ನು ಬಳಸಿಕೊಳ್ಳಲು ೪.೨೫ ಕೋಟಿ ರೂಪಾಯಿಗಳ ಅಂದಾಜು ವೆಚ್ಚದಲ್ಲಿ ಭಾರತ ಡೇನಿಷ್ ಸಮಗ್ರ ಮೀನುಗಾರಿಕೆ ಯೋಜನೆಯ ಎರಡನೇ ಹಂತವನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ. ಕುಮಟಾ ತಾಲ್ಲೂಕಿನಲ್ಲಿರುವ ಸೀಗಡಿಮರಿ ಉತ್ಪಾದನಾ ಕೇಂದ್ರದಲ್ಲಿ ವಾಣಿಜ್ಯ ಉತ್ಪಾದನೆ ೧೯೯೩-೯೪ರಲ್ಲಿ ಆರಂಭವಾಗಲಿದೆ. ಶಿವಮೊಗ್ಗ, ಧಾರವಾಡ ಮತ್ತು ರಾಯಚೂರುಗಳಲ್ಲಿ ಯೂರೋಪ್ ಆರ್ಥಿಕ ಸಮುದಾಯದ ನೆರವಿನೊಂದಿಗೆ ೬.೭೯ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೀನುಗಾರಿಕೆ ಯೋಜನೆಯೊಂದನ್ನು ಆರಂಭಿಸಲು ಸಹ ಉದ್ದೇಶಿಸಲಾಗಿದೆ.

ಸಾಗರ ದೀಪ

೬೪. ಸಮುದ್ರ ಮತ್ತು ಒಳನಾಡು ವಲಯಗಳಿಗೆ ಮಂಜೂರಾದ ಸಾಲಗಳಿಗೆ ಶೇಕಡಾ ೫೦ರಷ್ಟು ಬಡ್ಡಿ ಸಬ್ಸಿಡಿ ನೀಡುವುದರ ಮೂಲಕ ಸುಮಾರು ೬೦೦೦ ಬಡ ಮತ್ತು ಸಾಂಪ್ರದಾಯಿಕ ಮೀನುಗಾರರಿಗೆ ನೆರವು ನೀಡುವ ಸಲುವಾಗಿ ಸಾಗರ ದೀಪ ಯೋಜನೆಯನ್ನು ಪುನಃ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಸಾಂಪ್ರದಾಯಿಕ ಮೀನುಗಾರಿಕೆ ದೋಣಿಗಳಿಗೆ ಮೋಟಾರು ಅಳವಡಿಸುವ ಯೋಜನೆ ಅಡಿಯಲ್ಲಿ, ೧೯೯೨-೯೩ರಲ್ಲಿ ೮೦ ಸಾಂಪ್ರದಾಯಿಕ ಮೀನುಗಾರರಿಗೆ ನೆರವು ನೀಡಲಾಗಿತ್ತು. ೧೯೯೩-೯೪ರಲ್ಲಿ ೧೬೦ ಸಾಂಪ್ರದಾಯಿಕ ಮೀನುಗಾರರಿಗೆ ನೆರವು ನೀಡಲಾಗುವುದು ಮತ್ತು ಮೀನು ಕಡಿಮೆ ದೊರೆಯುವ ಅವಧಿಯಲ್ಲಿ, ಉಳಿತಾಯ ಹಾಗೂ ಪರಿಹಾರ ಯೋಜನೆಯ ಮೇರೆಗೆ ೮೦೦೦ ಮೀನುಗಾರರಿಗೆ ನೆರವು ನೀಡಲಾಗುವುದು. ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ೨೫೦ ವಸತಿ ಗೃಹಗಳನ್ನು ನಿರ್ಮಿಸಿ ಬಡ ಮೀನುಗಾರರಿಗೆ ಹಂಚಲಾಗುವುದು.

ಅರಣ್ಯಗಳು

೬೫. ರಾಜ್ಯದಲ್ಲಿ ೩೮ ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಅರಣ್ಯಗಳಿವೆ. ಇದು ಒಟ್ಟು ಪ್ರದೇಶದ ಸುಮಾರು ಶೇ. ೨೦ ರಷ್ಟಾಗುತ್ತದೆ. ಈ ಅರಣ್ಯಗಳ ಮೂರನೇ ಒಂದರಷ್ಟು ಭಾಗ, ಜಾನುವಾರುಗಳನ್ನು ಮೇಯಿಸುವುದರಿಂದಾಗಿ ಮತ್ತು ಸೌದೆ ಕಡಿಯುವುದರ ಪರಿಣಾಮವಾಗಿ ಬಹಳಷ್ಟು ಅವನತಿ ಹೊಂದಿದೆ. ಈ ಪ್ರದೇಶವನ್ನು ಪೂರ್ವಸ್ಥಿತಿಗೆ ತರಲು ಪ್ರಯತ್ನಗಳನ್ನು ಮಾಡಲಾಗುವುದು. ೮ನೇ ಯೋಜನಾ ಅವಧಿಯಲ್ಲಿ ೪ ಲಕ್ಷ ಹೆಕ್ಟೇರು ಪ್ರದೇಶವನ್ನು ಪೂರ್ವ ಸ್ಥಿತಿಗೆ ತರುವ ಗುರಿಯನ್ನು ಹಾಕಿಕೊಳ್ಳಲಾಗಿದೆ. ಕೋಲಾರದಲ್ಲಿ ಕಾರ್ಯಗತಗೊಳಿಸುತ್ತಿರುವ ಮರಗಳ ಬೆಳೆಗಾರರ ಸಹಕಾರಿ ಸಂಘಗಳ ನೆರವಿನೊಂದಿಗೆ ಪಾಳುಭೂಮಿಯನ್ನು ಹಸಿರುಗೊಳಿಸುವ ಒಂದು ಯೋಜನೆಯನ್ನು ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಿಗೆ ವಿಸ್ತರಿಸಲಾಗುವುದು. ಮರಗಳ ಬೆಳೆಗಾರರ ರಾಷ್ಟ್ರೀಯ ಸಹಕಾರ ಮಹಾಮಂಡಲಿ ಮತ್ತು ಕೆನಡಿಯನ್ ಅಂತರಾಷ್ಟ್ರೀಯ ಅಭಿವೃದ್ಧಿ ನೆರವು ನೀಡಿಕೆ ಸಂಸ್ಥೆಯು ೧೫.೦೦ ಕೋಟಿ ರೂ.ಗಳಷ್ಟು ವೆಚ್ಚವನ್ನು ಭರಿಸಲಿವೆ.

೬೬. ಕಳೆದ ಕೆಲವು ವರ್ಷಗಳಲ್ಲಿ, ಕರ್ನಾಟಕದಲ್ಲಿ ಅರಣ್ಯ ನೆಡುತೋಪುಗಳು ಮತ್ತು ಸಾಧಿಸಿದ ಪ್ರಗತಿ ಬಗ್ಗೆ ಭಾರತೀಯ ಅರಣ್ಯ ನಿರ್ವಹಣಾ ಸಂಸ್ಥೆಯಿಂದ ಅಧ್ಯಯನ ನಡೆಸಲು ನಾನು ಉದ್ದೇಶಿಸಿದ್ದೇನೆ. ನಮ್ಮ ಕಾರ್ಯಕ್ರಮಗಳ ವಾಸ್ತವ ಪರಿಣಾಮವನ್ನು ಕಂಡುಕೊಳ್ಳಲು ವೈಜ್ಞಾನಿಕ ಮಾನದಂಡಗಳನ್ನು ನಿಗದಿಪಡಿಸಲಾಗುವುದು ಮತ್ತು ಇಲಾಖೆಯಲ್ಲಿ ಸಮರ್ಪಕ ನಿರ್ವಹಣಾ ಮಾಹಿತಿ ವ್ಯವಸ್ಥೆ ಮತ್ತು ಮೌಲ್ಯಮಾಪನ ಪದ್ಧತಿಯನ್ನು ಪ್ರಾರಂಭಿಸಲಾಗುವುದು.

೬೭. ಭಾರತ ಸರ್ಕಾರದ ಸಲಹೆಯ ಮೇರೆಗೆ ಜಂಟಿ ಅರಣ್ಯ ಯೋಜನಾ ಮತ್ತು ನಿರ್ವಹಣ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಈ ಕಾರ್ಯಕ್ರಮದಲ್ಲಿ, ಅರಣ್ಯ ಸಂರಕ್ಷಣೆಯ ಮತ್ತು ಅವನತಿ ಹೊಂದಿದ ಭೂಮಿಗಳಲ್ಲಿ ಮತ್ತು ಪಾಳು ಭೂಮಿಗಳಲ್ಲಿ ಅರಣ್ಯ ನಿರ್ಮಿಸುವ ಕಾರ್ಯಕ್ರಮವನ್ನು ರೂಪಿಸುವ ಮತ್ತು ಕಾರ್ಯಗತಗೊಳಿಸುವ ಕಾರ್ಯದಲ್ಲಿ ನೆರವಾಗಲು ಗ್ರಾಮ ಅರಣ್ಯ ಸಮಿತಿಗಳನ್ನು ಸಂಘಟಿಸುವುದೂ ಸೇರಿದೆ. ಗ್ರಾಮಸ್ಥರಿಗೆ ಹುಲ್ಲು ಕೊಯ್ಯುವುದಕ್ಕೆ, ಸೊಪ್ಪುಸದೆ ತೆಗೆದುಕೊಂಡು ಹೋಗುವುದಕ್ಕೆ, ರೆಂಬೆ ಕೊಂಬೆಗಳನ್ನು ಕಡಿದುಕೊಳ್ಳುವುದಕ್ಕೆ ಅವಕಾಶ ನೀಡಲಾಗುವುದು. ಅಲ್ಲದೆ, ಸಣ್ಣ ಅರಣ್ಯ ಉತ್ಪನ್ನಗಳನ್ನು ಮತ್ತು ಅಂತಿಮ ಅರಣ್ಯ ಫಸಲನ್ನು ಗ್ರಾಮ ಅರಣ್ಯ ಸಮಿತಿಗಳಿಗೆ ಹಂಚಲಾಗುವುದು. ಗ್ರಾಮ ಅರಣ್ಯ ಅಭಿವೃದ್ಧಿ ನಿಧಿ ಎಂಬ ನಿಧಿಗೆ ಕನಿಷ್ಠ ಶೇಕಡ ೨೫ರಷ್ಟು ಮೊತ್ತವನ್ನು ವರ್ಗಾಯಿಸಲಾಗುತ್ತದೆ ಮತ್ತು ಆ ನಿಧಿಯನ್ನು ಪುನರ್ ವನನಿರ್ಮಾಣ ಸಮಿತಿಗಳು ನಿರ್ವಹಿಸುತ್ತವೆ. ಜನರು ಪಾಲ್ಗೊಳ್ಳುವ ಈ ಯೋಜನೆಯು ದೀರ್ಘಾವಧಿ ಪರಿಣಾಮಗಳನ್ನು ಒಳಗೊಂಡ ಪರಿಸರ ಅಗತ್ಯತೆಗಳ ಬಗ್ಗೆ ಖಂಡಿತಾ ಅರಿವು ಮೂಡಿಸುತ್ತದೆ ಎಂದು ನಾನು ಭಾವಿಸಿದ್ದೇನೆ.

೬೮. ವನ್ಯಜೀವಿ ರಂಗದಲ್ಲಿ, ''ಹುಲಿ-ಯೋಜನೆ'' ಮಾದರಿಯಲ್ಲೇ ನೂರಕ್ಕೆ ನೂರರಷ್ಟು ಕೇಂದ್ರ ನೆರವಿನೊಂದಿಗೆ ''ಆನೆ-ಯೋಜನೆ'' ಯನ್ನು ಪ್ರಾರಂಭಿಸಲಾಗಿದೆ. ಈ ಯೋಜನೆ ಅಡಿಯಲ್ಲಿ ಆನೆಗಳಿಗೆ ಅನುಕೂಲಕರವಾದಂಥ ಜೀವಿ ಪರಿಸರ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಆನೆಗಳಿಂದ ರೈತರಿಗೆ ಉಂಟಾಗುವ ಹಾನಿಗಳಿಗೆ ಈ ಯೋಜನೆ ಅಡಿಯಲ್ಲಿ ಪರಿಹಾರ ಸಹ ನೀಡಲಾಗುವುದು.

ಸಹಕಾರ

೬೯. ರಾಜ್ಯದ ಅರ್ಥವ್ಯವಸ್ಥೆಗೆ ಸಹಕಾರ ವಲಯದ ಕೊಡುಗೆ ಅತ್ಯಂತ ಮಹತ್ವದ್ದಾಗಿದೆ. ೨೫,೦೦೦ ಸಂಘ ಸಂಸ್ಥೆಗಳ ವ್ಯಾಪಕ ಜಾಲ ಇದ್ದರೂ ಅವುಗಳ ಆಡಳಿತ ನಿರ್ವಹಣೆಯಲ್ಲಿ ಸಮಾಜದ ದುರ್ಬಲವರ್ಗಗಳ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಜನರು ಮತ್ತು

ಮಹಿಳೆಯರು ಪಾಲ್ಗೊಳ್ಳುವುದು, ಅವರಲ್ಲಿ ಹಣಕಾಸಿನ ಶಕ್ತಿ ಇಲ್ಲದಿರುವುದರಿಂದ, ತೀರಾ ಸೀಮಿತವಾಗಿದೆ. ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಅವರು ಸಹಕಾರೀ ಸಂಘಗಳ ಸದಸ್ಯರಾಗುವಂತೆ ಮಾಡಲು ನಾನು ಉದ್ದೇಶಿಸಿದ್ದು, ಸದಸ್ಯತ್ವ ಶುಲ್ಕವನ್ನು ಸಂಪೂರ್ಣವಾಗಿ ಭರಿಸುವ ಮೂಲಕ ಮುಂದಿನ ವರ್ಷದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಒಂದು ಲಕ್ಷ ಜನರನ್ನು ಮತ್ತು ೫೦,೦೦೦ ಮಹಿಳೆಯರನ್ನು ಸದಸ್ಯರನ್ನಾಗಿ ಮಾಡುವ ಗುರಿ ಹಾಕಿಕೊಳ್ಳಲಾಗಿದೆ.

೭೦. ಸಹಕಾರ ಚಟುವಟಿಕೆಗಳ ಬೆನ್ನೆಲುಬಾದ ಸಹಕಾರೀ ಸಾಲದ ಸ್ವರೂಪವನ್ನು ಸಹ ಪುನಃ ಪರಿಷ್ಕರಿಸಬೇಕಾಗಿದೆ. ಪ್ರಾಥಮಿಕ ಸಾಲ ನೀಡಿಕೆ ಸಹಕಾರ ಸಂಘಗಳಿಗೆ ಹಣಕಾಸಿನ ನೆರವನ್ನು ನೀಡಲಾಗುವುದು. ಅವುಗಳ ಸಿಬ್ಬಂದಿ ವರ್ಗದವರಿಗೆ ಪರಿಣಾಮಕಾರಿ ತರಬೇತಿ ನೀಡುವ ಮೂಲಕ ಅವುಗಳ ಕಾರ್ಯ ನಿರ್ವಹಣೆಯಲ್ಲಿ ಸುಧಾರಣೆ ತರಲು ಸಾಕಷ್ಟು ಹಣವನ್ನು ಒದಗಿಸಲಾಗಿದೆ. ರೈತರಿಗೆ ಕಡಿಮೆ ಬಡ್ಡಿದರದ ಸಾಲವನ್ನು ಒದಗಿಸುವ ದೃಷ್ಟಿಯಿಂದ ಈಗಿರುವ ೩ ಹಂತದ ಸಾಲ ನೀಡಿಕೆ ವ್ಯವಸ್ಥೆಯ ಬದಲಾಗಿ ೨ ಹಂತದ ಸಾಲ ನೀಡಿಕೆ ವ್ಯವಸ್ಥೆಯನ್ನು ಪ್ರಾರಂಭಿಸುವ ಸಾಧ್ಯತೆಗಳನ್ನು ಸರ್ಕಾರ ಗಂಭೀರವಾಗಿ ಪರಿಶೀಲಿಸುತ್ತಿದೆ.

೭೧. ಕೃಷಿ ವಲಯದಲ್ಲಿ ಸಾಲ ಉಪಯೋಗಿಸಿಕೊಳ್ಳುವುದನ್ನು ಪ್ರೋತ್ಸಾಹಿಸುವುದಕ್ಕಾಗಿ ವಾಣಿಜ್ಯ ಬ್ಯಾಂಕ್‌ಗಳು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳು ಮುಂತಾದವುಗಳಿಂದ ಸಣ್ಣ ರೈತರು ಮತ್ತು ಅತಿ ಸಣ್ಣ ರೈತರು ಪಡೆಯುವ ೧೫೦೦೦ ರೂಪಾಯಿಗಳ ವರೆಗಿನ ಸಾಲದ ಮೇಲೆ ಸ್ಟಾಂಪ್ ಶುಲ್ಕವನ್ನು ಸರ್ಕಾರ ಈಗಾಗಲೇ ಮನ್ನಾ ಮಾಡಿದೆ. ಎಲ್ಲಾ ರೈತರಿಗೆ ಅನ್ವಯವಾಗುವಂತೆ ವಿನಾಯಿತಿಯ ಮಿತಿಯನ್ನು ೨೫೦೦೦ ರೂಪಾಯಿಗಳವರೆಗೆ ಏರಿಸಲು ನಾನು ಈಗ ಉದ್ದೇಶಿಸಿದ್ದೇನೆ. ಇದರಿಂದ ರಾಜ್ಯ ಬೊಕ್ಕಸಕ್ಕೆ ಸುಮಾರು ೩.೦೦ ಕೋಟಿ ರೂಪಾಯಿ ನಷ್ಟವಾಗಲಿದೆ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಈ ವಿನಾಯಿತಿಯ ಮಿತಿ ೫೦೦೦೦ ರೂಪಾಯಿಗಳಾಗಿರುತ್ತದೆ.

ಪ್ರವಾಸೋದ್ಯಮ

೭೨. ಹೊಸ ಸೌಕರ್ಯಗಳನ್ನು ಕಲ್ಪಿಸುವಲ್ಲಿ ಖಾಸಗಿ ವಲಯದ ಉದ್ಯಮಿಗಳು ಹಣ ಹೂಡುವಂತೆ ಆಕರ್ಷಿಸುವುದೇ ರಾಜ್ಯ ಪ್ರವಾಸೋದ್ಯಮ ನೀತಿಯ ಮುಖ್ಯ ಗುರಿಯಾಗಿರುತ್ತದೆ. ೧೯೯೩-೯೪ರಲ್ಲಿ, ಈಗ ಇರುವ ಸಿಂಗಲ್ ವಿಂಡೋ ಏಜೆನ್ಸಿಯನ್ನು ಚುರುಕುಗೊಳಿಸಲು ಹಾಗೂ ಅರ್ಹ ಉದ್ಯಮಶೀಲರಿಗೋಸ್ಕರ ಪ್ರಕಟಿಸಿರುವ ಪ್ರೋತ್ಸಾಹಗಳು ಮತ್ತು ರಿಯಾಯಿತಿಗಳನ್ನು ಒದಗಿಸಲು ನಾನು ಉದ್ದೇಶಿಸಿದ್ದೇನೆ. ರಾಜ್ಯದ ವಿವಿಧ ಸ್ಥಳಗಳಲ್ಲಿ ಹೋಟೇಲುಗಳನ್ನು ನಿರ್ಮಿಸಲು ಪ್ರಮುಖ ಹೋಟೇಲ್ ಗ್ರೂಪ್‌ಗಳು ಈಗಾಗಲೇ ಮುಂದೆ ಬಂದಿವೆ.

೭೩. ಬಹುಮಟ್ಟಿಗೆ ಕರ್ನಾಟಕದ ದಕ್ಷಿಣಭಾಗಕ್ಕೆ ಸೀಮಿತವಾಗಿರುವ ಪ್ರವಾಸೋದ್ಯಮವನ್ನು ಗುಲ್ಬರ್ಗಾ, ರಾಯಚೂರು ಬಳ್ಳಾರಿ, ಹುಬ್ಬಳ್ಳಿ ಮತ್ತು ಬೆಳಗಾವಿಗಳಿಗೆ ವಿಮಾನಯಾನ ಸೌಕರ್ಯವನ್ನು ಒದಗಿಸುವ ಮೂಲಕ ಈಗ ರಾಜ್ಯದ ಉತ್ತರ ಭಾಗಗಳಲ್ಲೂ ಅಭಿವೃದ್ಧಿಪಡಿಸಲಾಗುವುದು. ರಾಜ್ಯದ ಉತ್ತರ ಭಾಗದ ಜಿಲ್ಲೆಗಳಲ್ಲಿ ವಿಮಾನ ನಿಲ್ದಾಣಗಳನ್ನು ನಿರ್ಮಿಸಲು ಭಾರತ ಸರ್ಕಾರದ ಮನವೊಲಿಸುವ ವಿಶ್ವಾಸ ನಮಗಿದೆ.

೭೪. ಬೆಂಗಳೂರು ಒಂದು ಪ್ರಮುಖ ನಗರವಾಗಿ ಬೆಳೆಯುತ್ತಿದ್ದಾಗ್ಯೂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಂಥ ಮೂಲಭೂತ ಸೌಕರ್ಯ ಇಲ್ಲಿ ಇಲ್ಲವೇ ಇಲ್ಲ. ಈಗಾಗಲೇ ಈ ವಿಷಯವನ್ನು ನಾನು ಕೇಂದ್ರ ಸರ್ಕಾರದ ಮುಂದಿಟ್ಟಿದ್ದೇನೆ. ಕರ್ನಾಟಕದಲ್ಲಿ ವ್ಯಾಪಾರ ಮತ್ತು ಪ್ರವಾಸೋದ್ಯಮ ಅಭಿವೃದ್ಧಿಗೆ ಅನುಕೂಲ ಕಲ್ಪಿಸಲು ಬೆಂಗಳೂರಿನಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸ್ಥಾಪನೆಗೆ ಅನುಮೋದನೆ ದೊರೆಯುವ ತನಕ ಸಿಂಗಪೂರ್ ಮತ್ತು

ಫ್ರಾಂಕ್‌ಫರ್ಟ್ ನಗರಗಳಿಗೆ ನೇರವಾಗಿ ಪ್ರಯಾಣಿಕರ ವಿಮಾನಯಾನಗಳನ್ನು ಪ್ರಾರಂಭಿಸಬೇಕೆಂದು ನಾನು ಒತ್ತಾಯಿಸುತ್ತಿದ್ದೇನೆ.

೭೫. ಸೋಮನಾಥಪುರ, ಬೇಲೂರು, ಹಳೇಬೀಡು, ಶ್ರವಣಬೆಳಗೊಳ, ಹಂಪಿ, ಬಾದಾಮಿ, ವಿಜಾಪುರ ಮುಂತಾದ ಪ್ರವಾಸಿ ಸ್ಥಳಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಸುಧಾರಣೆ ಕಾರ್ಯವನ್ನು ಕೈಗೊಳ್ಳಲು ನಾನು ಉದ್ದೇಶಿಸಿದ್ದೇನೆ. ಬೆಂಗಳೂರಿನಲ್ಲಿ ಪ್ರವಾಸೋದ್ಯಮ ಮಾಹಿತಿ ಕೇಂದ್ರವೊಂದನ್ನು ಹುಡ್ಕೊ ನೆರವಿನಲ್ಲಿ ನಿರ್ಮಿಸಲಾಗುವುದು. ಪ್ರವಾಸೋದ್ಯಮ ಮತ್ತು ಸ್ಥಳೀಯ ಕರಕುಶಲ ಕಲೆಗಳಿಗೆ ಉತ್ತೇಜನ ನೀಡುವ ಸಲುವಾಗಿ ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ 'ಕೌಶಲ್ಯಧಾಮ' ಎಂಬ ಕರಕುಶಲ ಗ್ರಾಮವೊಂದನ್ನು ಸ್ಥಾಪಿಸಲು ಸಹ ಉದ್ದೇಶಿಸಲಾಗಿದೆ.

೭೬. ಯಾತ್ರಾಸ್ಥಳಗಳು, ಸಾಹಸಪ್ರೇರಣಾ ಸ್ಥಳಗಳು, ವನ್ಯಜೀವಿ ಸ್ಥಳಗಳು ಮತ್ತು ಸಮುದ್ರ ತೀರದ ವಿಹಾರ ಸ್ಥಳಗಳೇ ಮುಂತಾದ ಪ್ರವಾಸೋದ್ಯಮದಲ್ಲಿನ ಕೆಲವು ವಲಯಗಳಿಗೆ ಪ್ರಾಮುಖ್ಯತೆ ನೀಡಲಾಗುವುದು. ಗುಲ್ಬರ್ಗಾ ಮತ್ತು ಶೃಂಗೇರಿಗಳನ್ನು ಯಾತ್ರಾಸ್ಥಳಗಳಾಗಿ ಅಭಿವೃದ್ಧಿಪಡಿಸಲು ಭಾರತ ಸರ್ಕಾರವು ಅನುಕ್ರಮವಾಗಿ ೮೦ ಲಕ್ಷ ರೂ. ಮತ್ತು ೭೫ ಲಕ್ಷ ರೂ.ಗಳಷ್ಟು ಹಣದ ನೆರವು ನೀಡಲಿದೆ. ಛತ್ರಗಳನ್ನು ನಿರ್ಮಿಸಲು ಬಜೆಟ್ಟಿನಲ್ಲಿ ೨೫ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಮುಜರಾಯಿ ಮತ್ತು ಇತರ ದಾನಿಗಳು ನೀಡುವ ನೆರವಿನಿಂದ ಈ ನಿಧಿಗಳ ಮೊತ್ತವನ್ನು ಹೆಚ್ಚಿಸಲಾಗುವುದು. ನೇತ್ರಾಣಿ ದ್ವೀಪದಲ್ಲಿ ಮತ್ತು ಕೋಡಿವಾಡದಲ್ಲಿ ಸಮುದ್ರ ತೀರದ ವಿಹಾರ ಧಾಮಗಳ ಅಭಿವೃದ್ಧಿ ಕಾರ್ಯವನ್ನು ಮತ್ತು ಸಾಹಸ ಪ್ರವಾಸೋದ್ಯಮದ ಅಡಿಯಲ್ಲಿ ೭ ಯೋಜನೆಗಳನ್ನು ಸಹ ಮುಂದಿನ ವರ್ಷ ಕೈಗೊಳ್ಳಲಾಗುವುದು.

ವಿಜ್ಞಾನ ಮತ್ತು ತಂತ್ರಜ್ಞಾನ

೭೭. ಆಧುನಿಕ ಸಮಾಜದಲ್ಲಿ ಸ್ಪರ್ಧಾತ್ಮಕ ಮನೋಭಾವವನ್ನು ಮೂಡಿಸಲು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಉತ್ತೇಜನ ನೀಡುವುದು ಅತ್ಯಗತ್ಯ. ನಮ್ಮ ರಾಜ್ಯದಲ್ಲಿ ಅನೇಕ ಪ್ರತಿಭಾವಂತ ವಿಜ್ಞಾನಿಗಳು ಮತ್ತು ತಂತ್ರಜ್ಞಾನ ಸಿಬ್ಬಂದಿ ಇರುವುದು ನಮ್ಮ ಅದೃಷ್ಟ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅದರಲ್ಲೂ ಮುಖ್ಯವಾಗಿ, ರಫ್ತು ಆಧಾರಿತ ತಂತ್ರಜ್ಞಾನ, ಸಾಫ್ಟ್‌ವೇರ್ ಸಂಶೋಧನೆ ಮತ್ತು ಅಭಿವೃದ್ಧಿ ಕ್ಷೇತ್ರದಲ್ಲಿ ಬಂಡವಾಳ ಹೂಡುವುದನ್ನು ಆಕರ್ಷಿಸುವಂಥ, ಅನುಕೂಲಕರವಾದ ಕ್ರಮಗಳನ್ನು ರೂಪಿಸುವ ದೃಷ್ಟಿಯಿಂದ ಖ್ಯಾತ ವಿಜ್ಞಾನಿ ಡಾ|| ಸಿ.ಎನ್.ಆರ್. ರಾವ್ ಅವರ ಅಧ್ಯಕ್ಷತೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ತಂಡವನ್ನು ರಚಿಸಲು ಉದ್ದೇಶಿಸಲಾಗಿದೆ. ರಾಜ್ಯದಲ್ಲಿರುವ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲೂ ವಿಜ್ಞಾನ ಅಭಿವೃದ್ಧಿ ನಿಧಿಯೊಂದನ್ನು ಸ್ಥಾಪಿಸಲಾಗುವುದು.

ಪರಿಸರ

೭೮. ಅಭಿವೃದ್ಧಿ ಹೊಂದಬೇಕೆಂಬುದು ವಿಶ್ವದ ಎಲ್ಲಾ ರಾಷ್ಟ್ರಗಳ ಅಪೇಕ್ಷೆಯಾದರೂ ಅಭಿವೃದ್ಧಿಯಿಂದಾಗಿ ಪರಿಸರದ ಮೇಲೆ ಆಗುವ ಪರಿಣಾಮದ ಬಗ್ಗೆ ಕೂಡ ನಮಗೆ ಕಾಳಜಿ ಇದೆ. ಮಾಲಿನ್ಯವನ್ನು ನಿಯಂತ್ರಣದಲ್ಲಿಡುವ ಸಲುವಾಗಿ ತುರ್ತು ಕ್ರಮ ತೆಗೆದುಕೊಳ್ಳಲು ಹಾಗೂ ಸಂತುಲಿತ ಪರಿಸರ ಸಂರಕ್ಷಣೆಯಾಗುವಂತೆ ನೋಡಿಕೊಳ್ಳಲು ಮಾಲಿನ್ಯ ನಿವಾರಣಾ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಅವಶ್ಯಕತೆಯಿದೆ. ನಮ್ಮ ಎಲ್ಲಾ ಚಟುವಟಿಕೆಗಳನ್ನು ಪರಿಸರ ಅಭಿವೃದ್ಧಿಯ ಕಡೆಗೆ ತಿರುಗಿಸಲು ಪ್ರಯತ್ನ ಮಾಡಲಾಗುವುದು.

ಶಿಕ್ಷಣ

೭೯. ಮಾನವ ಸಂಪನ್ಮೂಲ ಅಭಿವೃದ್ಧಿಯು ಪ್ರಗತಿಗೆ ಪ್ರೇರಕ ಎಂದು ಪರಿಗಣಿಸಲಾಗಿದೆ. ರಾಷ್ಟ್ರೀಯ ಸಾಕ್ಷರತಾ ಆಂದೋಲನದ ಮೂಲಕ ೧೯೯೩-೯೪ ರಿಂದಾರಂಭಿಸಿ ಎರಡು ವರ್ಷಗಳ ಅವಧಿಯಲ್ಲಿ ಇಡೀ ರಾಜ್ಯದ ಜನತೆಯನ್ನು ಸಾಕ್ಷರರನ್ನಾಗಿ ಮಾಡಲಾಗುವುದು. ಈ ಜನಾಂದೋಲನದಲ್ಲಿ ಭಾಗವಹಿಸುವಂತೆ ಸರ್ಕಾರಿ ನೌಕರರು, ಸರ್ಕಾರೇತರ ಸಂಘ ಸಂಸ್ಥೆಗಳು, ಸಾರ್ವಜನಿಕ ಪ್ರತಿನಿಧಿಗಳು, ಬುದ್ಧಿಜೀವಿಗಳು ಹಾಗೂ ವಾಣಿಜ್ಯ ಮತ್ತು ಕೈಗಾರಿಕ ಕ್ಷೇತ್ರದ ಸದಸ್ಯರಿಗೆ ನಾನು ಮನವಿ ಮಾಡಿಕೊಳ್ಳುತ್ತೇನೆ. ಎಲ್ಲ ಮಟ್ಟಗಳಲ್ಲಿ ಸಮನ್ವಯ ಸಾಧಿಸಲು ರಾಜ್ಯಮಟ್ಟದ ಮೂರು ಸಂಸ್ಥೆಗಳನ್ನು ರಚಿಸಲು ನಾನು ಉದ್ದೇಶಿಸಿದ್ದೇನೆ.

ಎ) ಎಲ್ಲ ರಾಜಕೀಯ ಪಕ್ಷಗಳು ಪಕ್ಷಭೇಧ ಮರೆತು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವಂಥ ರಾಜಕೀಯ ಪ್ರಜ್ಞೆಯನ್ನು ಬೆಳೆಸುವ ಸಲುವಾಗಿ ಕರ್ನಾಟಕ ರಾಜ್ಯ ಸಾಕ್ಷರತಾ ಆಂದೋಳನ ಸಮಿತಿ;

ಬಿ) ಅನುಷ್ಠಾನಗೊಳಿಸುವ ಅಧಿಕಾರಿಗಳೊಡನೆ ನಿಯತವಾಗಿ ಕಾರ್ಯಕ್ರಮವನ್ನು ಪರಿಶೀಲಿಸುವಂಥ ರಾಜ್ಯ ನಿರ್ವಹಣಾ ಮತ್ತು ಮೇಲ್ವಿಚಾರಣಾ ಸಮಿತಿ;

ಸಿ) ಕಾರ್ಯಕ್ರಮಕ್ಕೆ ವೃತ್ತಿ ಶಿಕ್ಷಕರ ತಂಡವನ್ನು ಸಜ್ಜುಗೊಳಿಸಲು ರಾಜ್ಯ ಶೈಕ್ಷಣಿಕ ಸಮಿತಿ;

೮೦. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿನ ಎಲ್ಲ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು. ಶಾಲೆಗೆ ಸೇರುವ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುವಲ್ಲಿ ಅಥವಾ ಶಾಲೆಯನ್ನು ಮಧ್ಯದಲ್ಲಿಯೇ ಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡುವಲ್ಲಿ ಅಕ್ಷಯ ಯೋಜನೆಯಿಂದ ಯಾವುದೇ ಪ್ರಯೋಜನವಾಗಿಲ್ಲವೆಂದು ಭಾವಿಸಲಾಗಿದೆ. ಆದ್ದರಿಂದ, ಮೂರು ಘಟಕಾಂಶಗಳುಳ್ಳ ಹಲವಾರು ಸಮಗ್ರ ಚಟುವಟಿಕೆಗಳನ್ನು ಸೇರಿಸುವ ಸಲುವಾಗಿ ಅಕ್ಷಯ ಕಾರ್ಯಕ್ರಮವನ್ನು ಪರಿಷ್ಕರಿಸಲಿಕ್ಕೆ ನಾನು ಉದ್ದೇಶಿಸಿದ್ದೇನೆ.

1) ಆಹಾರ - ವಸ್ತ್ರಧಾರಾ - ಪುಸ್ತಕಾಲಯ
2) ವಿದ್ಯಾವರಣ
3) ಯಾತ್ರಾ - ಮನೋರಂಜನ

೧೯೯೩-೯೪ನೇ ವರ್ಷದಲ್ಲಿ ೩೫.೦೦ ಕೋಟಿ ರೂಪಾಯಿ ವೆಚ್ಚ ಮಾಡಿ ಬಹಳಷ್ಟು ಸಂಖ್ಯೆಯ ಮಕ್ಕಳಿಗೆ ಶಕ್ತಿಯುತ ಆಹಾರ ವಿತರಿಸಲಾಗುವುದು. ಇದಲ್ಲದೆ, ಈ ಯೋಜನೆಯಲ್ಲಿ ಇನ್ನಷ್ಟು ಮಕ್ಕಳಿಗೆ ಪಠ್ಯಪುಸ್ತಕಗಳು ಮತ್ತು ಶಾಲಾ ಸಮವಸ್ತ್ರಗಳನ್ನು ಉಚಿತವಾಗಿ ವಿತರಣೆ ಮಾಡುವುದು ಸೇರುತ್ತದೆ. ಈ ಕಾರ್ಯಕ್ರಮದಲ್ಲಿ ಒತ್ತು ನೀಡಬೇಕಾದ ಅಂಶ, ಶಾಲೆಗೆ ಬರಲು ಮಕ್ಕಳಿಗೆ ಪ್ರೋತ್ಸಾಹಕಗಳನ್ನು ಕೊಡುವುದು ಮಾತ್ರವಲ್ಲದೆ ಉತ್ಸಾಹ, ಇಚ್ಛೆ ಮತ್ತು ಉತ್ತೇಜಕ ಧೋರಣೆಯನ್ನು ಮೂಡಿಸುವುದಾಗಿರುತ್ತದೆ. ಆದ್ದರಿಂದ, ಈ ಯೋಜನೆಯನ್ವಯ ಆಟದ ಮೈದಾನಗಳು, ಆಟದ ಸಲಕರಣೆಗಳು, ಸಾಂಸ್ಕೃತಿಕ ಚಟುವಟಿಕೆಗಳು ಮತ್ತು ಶಾಲಾ ಪರಿಸರದ ಸುಧಾರಣೆ ಇವುಗಳಿಗೆ ಭಾರಿ ವೆಚ್ಚ ಮಾಡಲು ಉದ್ದೇಶಿಸಲಾಗಿದೆ.

೮೧. ಕ್ರಿ.ಶ. ೨೦೦೦ದ ವೇಳೆಗೆ ಒಂದು ತರಗತಿಗೆ ಕನಿಷ್ಠ ಒಂದು ಕೊಠಡಿ ಮತ್ತು ಒಬ್ಬ ಶಿಕ್ಷಕ ದೊರೆಯುವಂತೆ ಮಾಡುವುದು ಸರ್ಕಾರದ ಪ್ರಯತ್ನವಾಗಿರುತ್ತದೆ. ೧೯೯೩-೯೪ರಲ್ಲಿ ೧೦,೦೦೦ ತರಗತಿ ಕೊಠಡಿಗಳನ್ನು ನಿರ್ಮಿಸಲಾಗುವುದು. ಶಾಲಾ ಕಟ್ಟಡ ನಿಧಿಯೊಂದನ್ನು ಸ್ಥಾಪಿಸಲು ಉದ್ದೇಶಿಸಲಾಗಿದ್ದು, ಇದಕ್ಕೆ ರಾಜ್ಯ ಸರ್ಕಾರ ೧೦.೦೦ ಕೋಟಿ ರೂಪಾಯಿಗಳ ವಂತಿಗೆ ನೀಡುತ್ತದೆ ಮತ್ತು ಅಷ್ಟೇ ಪ್ರಮಾಣದ ವಂತಿಗೆಯನ್ನು ಹಿತೈಷಿಗಳು, ವ್ಯಾಪಾರಸ್ಥರು ಮತ್ತು ಇತರ ದಾನಿಗಳಿಂದ ಸಂಗ್ರಹಿಸಲಾಗುವುದು. ಆದ್ದರಿಂದ ಮಾನ್ಯ ಸದಸ್ಯರೆಲ್ಲರೂ ತಮ್ಮ ತಮ್ಮ ಕ್ಷೇತ್ರಗಳಲ್ಲಿ ಕಾರ್ಯಪ್ರವೃತ್ತರಾಗಿ ಈ ವಂತಿಗೆಯನ್ನು ಸಂಗ್ರಹಿಸಬೇಕೆಂದು ನಾನು ತಮ್ಮೆಲ್ಲರನ್ನು ಪ್ರಾರ್ಥಿಸುತ್ತೇನೆ.

೮೨. ಖಾಸಗಿ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶ ನೀಡುವ ನೀತಿಗೆ ಸಂಬಂಧಿಸಿದಂತೆ ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯ ನೀಡಿದ ಆಜ್ಞೆಗನುಗುಣವಾಗಿ ರಾಜ್ಯ ಸರ್ಕಾರ ಸಹ ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ನಿಯಮಗಳನ್ನು ಪ್ರಕಟಿಸುತ್ತದೆ. ಕಾಲೇಜುಗಳಲ್ಲಿ ಈಗ ಇರುವ ಸೌಲಭ್ಯಗಳನ್ನು ಮತ್ತೆ ಪರಿಶೀಲಿಸಲಾಗುವುದು ಮುಂದಿನ ಎರಡು ವರ್ಷಗಳಲ್ಲಿ ದಂತ ಕಾಲೇಜು ಮತ್ತು ಫಾರ್ಮಸಿ ಕಾಲೇಜುಗಳು ಸೇರಿದಂತೆ ಯಾವುದೇ ಹೊಸ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳಿಗೆ ಅನುಮತಿ ನೀಡುವುದಿಲ್ಲ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ

೮೩. ಇಲಾಖೆಯ ವಾರ್ಷಿಕ ಯೋಜನಾ ವೆಚ್ಚವನ್ನು ಪ್ರಸಕ್ತ ವರ್ಷದ ೬೮.೦೦ ಕೋಟಿ ರೂಪಾಯಿಗಳಿಂದ ೧೯೯೩-೯೪ರಲ್ಲಿ ೧೧೨.೪೨ ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ೧೩೪೨ ಜನರಿಗೆ ಒಂದು ಹಾಸಿಗೆಯಂತೆ ಈಗ ಇರುವ ಹಾಸಿಗೆಗಳ ಸಂಖ್ಯೆಯನ್ನು ಕ್ರಿ.ಶ. ೨೦೦೦ದ ವೇಳೆಗೆ ೧೦೦೦ ಜನರಿಗೆ ಒಂದು ಹಾಸಿಗೆ ಇರುವಂತೆ ಸುಧಾರಣೆ ಮಾಡುವ ಗುರಿಯನ್ನು ತಲುಪಲು ಫಾರ್ಮಸಿ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ಸಂಖ್ಯೆಯನ್ನು ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ. ಈಗ ಈ ಕೇಂದ್ರಗಳನ್ನು ಕ್ರಮವಾಗಿ ೫೦ ಮತ್ತು ೧೦ ರಂತೆ ಮಂಜೂರು ಮಾಡಲಾಗುತ್ತಿದ್ದು ೧೯೯೩-೯೪ರಲ್ಲಿ ಕ್ರಮವಾಗಿ ೬೦ ಮತ್ತು ೧೫ ರಂತೆ ಮಂಜೂರು ಮಾಡಲು ಉದ್ದೇಶಿಸಲಾಗಿದೆ. ಜಿಲ್ಲಾ ಆಸ್ಪತ್ರೆಗಳನ್ನು ಬಲಪಡಿಸುವ ಮತ್ತು ಆಧುನೀಕರಣಗೊಳಿಸುವ ಕಾರ್ಯಕ್ರಮವನ್ನು ಹಂತಹಂತವಾಗಿ ತೆಗೆದುಕೊಳ್ಳಲಾಗುವುದು. ಇದಲ್ಲದೆ, ಈ ಮುಂದಿನ ಕ್ರಮಗಳನ್ನು ಕೈಗೊಳ್ಳಲು ಸಹ ನಾನು ಉದ್ದೇಶಿಸಿದ್ದೇನೆ.

ಎ) ರೋಗ ನಿರೋಧಕ ಕಾರ್ಯಕ್ರಮದ ಅಡಿಯಲ್ಲಿ ಕನಿಷ್ಠ ಶೇ. ೮೦ರಷ್ಟು ಜನರು ಬರುವಂತೆ ಮಾಡುವುದು;

ಬಿ) ಔಷಧಗಳಿಗೆ ನೀಡಲಾಗುವ ಮೊತ್ತದ ಪ್ರಮಾಣವನ್ನು ಪ್ರಸಕ್ತ ವರ್ಷದ ಮೊತ್ತದ ಶೇ. ೫೦ರಷ್ಟು ಹೆಚ್ಚಿಸುವುದು;

ಸಿ) ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಯ ಎಲ್ಲಾ ಖಾಲಿ ಸ್ಥಾನಗಳನ್ನು ಭರ್ತಿ ಮಾಡುವುದು;

ಡಿ) ೨ ಬಾಹ್ಯ ಕೇಂದ್ರಗಳ ಸಹಿತ ಕ್ಯಾನ್ಸರ್ ಪತ್ತೆ ಹಚ್ಚುವ ೩ ಕೇಂದ್ರಗಳನ್ನು ಪ್ರಾರಂಭಿಸುವುದು;

ಇ) ಹೆಚ್‌ಐವಿ ಪಾಸಿಟಿವ್ ಮತ್ತು ಏಡ್ಸ್ ಪ್ರಕರಣಗಳನ್ನು ನಿಯಂತ್ರಿಸುವ ಸಲುವಾಗಿ ವಿಭಾಗೀಯ ರಕ್ತ ಪರೀಕ್ಷಾ ಕೇಂದ್ರಗಳನ್ನು, ಆಧುನೀಕೃತ ರಕ್ತ ಬ್ಯಾಂಕ್‌ಗಳನ್ನು ಸ್ಥಾಪಿಸುವುದು ಮತ್ತು ರಕ್ತ ಸುರಕ್ಷತಾ ಕ್ರಮಗಳನ್ನು ಸುಧಾರಿಸುವುದು;

ಎಫ್) ಗಿನಿ ಹುಳದಿಂದ ಬರುವ ಕಾಯಿಲೆಯ ನಿರ್ಮೂಲನ.

೮೪. ಕಳೆದೆರಡು ದಶಕಗಳಲ್ಲಿ ರಾಜ್ಯದ ಜನಸಂಖ್ಯೆ ೧.೫ ಕೋಟಿಯಷ್ಟು ಹೆಚ್ಚಿದೆ. ಈ ಅಪಾಯಕಾರಿ ಪ್ರವೃತ್ತಿಯನ್ನು ತಡೆಗಟ್ಟುವ ಸಲುವಾಗಿ ಕ್ರಿ.ಶ. ೨೦೦೦ದ ಹೊತ್ತಿಗೆ ಕುಟುಂಬ ಕಲ್ಯಾಣ ಕಾರ್ಯಕ್ರಮದ ವ್ಯಾಪ್ತಿಗೊಳಪಡುವ ದಂಪತಿಗಳ ಪ್ರಮಾಣವನ್ನು ಈಗಿರುವ ಶೇಕಡಾ ೪೯ ರಿಂದ ಶೇಕಡಾ ೬೦ಕ್ಕೆ ಹೆಚ್ಚಿಸುವ ಸಲುವಾಗಿ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ. ಕುಟುಂಬ ಕಲ್ಯಾಣ ಕ್ರಮಗಳಾಗಿ ದಂಪತಿಗಳಿಗೆ ಸಮುದಾಯ ಪ್ರಶಸ್ತಿಗಳು ಮತ್ತು ಹೆಚ್ಚಿನ ಪ್ರೋತ್ಸಾಹಕಗಳನ್ನು ನೀಡಲಾಗುವುದು.

೮೫. ವೈದ್ಯಕೀಯ ತಪಾಸಣೆಯ ಶುಶ್ರೂಷ ಯೋಜನೆಯನ್ನು ಮುಂದುವರಿಸಲಿದ್ದು ೮ನೇ ಯೋಜನೆಯ ಅಂತ್ಯದ ವೇಳೆಗೆ ಬಡತನ ರೇಖೆಗಿಂತ ಕೆಳಗಿನ ಎಲ್ಲ ಜನರನ್ನು ಈ ಯೋಜನೆಯ ವ್ಯಾಪ್ತಿಗೆ ತರಲಾಗುವುದು. ಈ ಕೆಲಸವನ್ನು ತ್ವರಿತಗೊಳಿಸಲು ಮತ್ತು ಈ ಸೌಲಭ್ಯ ಹೆಚ್ಚು ಜನರಿಗೆ ದೊರೆಯುವಂತೆ ಮಾಡಲು ಸಂಚಾರಿ ಘಟಕಗಳನ್ನು ನಡೆಸಲಾಗುವುದು ಮತ್ತು ಭಾರತೀಯ ವೈದ್ಯಕೀಯ ಸಂಘ ಮತ್ತು ಇತರ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಖಾಸಗಿ ವೈದ್ಯ ವೃತ್ತಿ ನಿರತರನ್ನು ಈ ಯೋಜನೆಯಲ್ಲಿ ತೊಡಗಿಸಲಾಗುವುದು.

ಆಶ್ರಯ

೮೬. ರಾಜ್ಯದಲ್ಲಿ ೧-೧-೯೩ ರಂದು ಇದ್ದ ೪.೨೬ ಲಕ್ಷ ನಿವೇಶನ ರಹಿತ ಕುಟುಂಬಗಳ ಪೈಕಿ ೧೯೯೩-೯೪ ರಲ್ಲಿ ೨ ಲಕ್ಷ ಮಂದಿಗೆ ಉಚಿತ ನಿವೇಶನಗಳನ್ನು ನೀಡಲಾಗುವುದು. ಇದಕ್ಕಾಗಿ ಬಜೆಟ್ಟಿನಲ್ಲಿ ೧೦.೦೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಉಳಿದವರಿಗೆ ಒಂದು ವರ್ಷದ ತರುವಾಯ ಈ ಸೌಲಭ್ಯ ಒದಗಿಸಲಾಗುವುದು. ೧೯೯೧-೯೨ ರಲ್ಲಿ ೨.೩೫ ಲಕ್ಷ ಮನೆಗಳನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತಾದರೂ ೧೯೯೨ರ ಡಿಸೆಂಬರ್‌ವರೆಗೆ ೧೫೭೭೯ ಮನೆಗಳನ್ನು ಮಾತ್ರ ಪೂರ್ಣಗೊಳಿಸಲಾಗಿದೆ. ಕಾರ್ಯಕ್ರಮವನ್ನು ಪುನಃ ಪರಿಶೀಲಿಸಿದ ನಂತರ ೧೬೦.೫೦ ಕೋಟಿ ರೂಪಾಯಿಗಳ ಒಟ್ಟು ವೆಚ್ಚದಲ್ಲಿ ೧೯೯೩ರ ಜೂನ್ ವೇಳೆಗೆ ೧.೦೬ ಲಕ್ಷ ಮನೆಗಳನ್ನು ನಿರ್ಮಿಸಲು ಈಗ ಉದ್ದೇಶಿಸಲಾಗಿದೆ. ಇದರ ಜೊತೆಗೆ ೧೯೯೩-೯೪ರಲ್ಲಿ ಇನ್ನೂ ಒಂದು ಲಕ್ಷ ಮನೆಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ನೆರಳಿನ ಭಾಗ್ಯ

೮೭. ಆಶ್ರಯ ಯೋಜನೆಗೆ ಮುಂಬರುವ ವರ್ಷಗಳಲ್ಲಿ ಮತ್ತೊಂದು ಆಯಾಮವನ್ನು ನೀಡಲು ನಾನು ಉದ್ದೇಶಿಸಿದ್ದೇನೆ. ಹುಲ್ಲು ಜೋಪಡಿಗಳಲ್ಲಿ ವಾಸ ಮಾಡುತ್ತಿರುವ ಗ್ರಾಮೀಣ ಪ್ರದೇಶದ ಕುಟುಂಬಗಳಿಗೆ ಹೆಂಚಿನ ಛಾವಣಿಗಳನ್ನು ಒದಗಿಸುವ ಸಲುವಾಗಿ ಒಂದು ಕುಟುಂಬಕ್ಕೆ ೩೦೦೦ರೂ. ವರೆಗೆ ನೆರವು ನೀಡಲಾಗುವುದು. ೧೯೯೩-೯೪ರಲ್ಲಿ ಅಂಥ ಒಂದು ಲಕ್ಷ ಮನೆಗಳಿಗೆ ಈ ಸೌಲಭ್ಯ ಕಲ್ಪಿಸಲು ನಾನು ಉದ್ದೇಶಿಸಿದ್ದೇನೆ.

ನಗರಾಭಿವೃದ್ಧಿ

೮೮. ಈ ವಲಯಗಳಲ್ಲಿ, ಈ ಮುಂದಿನ ಕ್ರಮಗಳನ್ನು ಕೈಗೊಳ್ಳಲು ನಾನು ಉದ್ದೇಶಿಸಿದ್ದೇನೆ.

ಎ) ಈ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳಲು ವಸತಿ ಮತ್ತು ನಗರಾಭಿವೃದ್ಧಿ ವಲಯದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗೆ ತರಬೇತಿ ನೀಡುವ ಸಲುವಾಗಿ ಕರ್ನಾಟಕ ಗೃಹ ನಿರ್ಮಾಣ ಮ ಂಡಲಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಜಲಮಂಡಲಿಗಳ ಬೆಂಬಲದಿಂದ ಹಾಗೂ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಸಹಾಯದಿಂದ, ಮಾನವ ವಸತಿ ನೆಲೆಗಳು ಮತ್ತು ನಗರ ನಿರ್ವಹಣೆ ಸಂಸ್ಥೆಯ ಸ್ಥಾಪನೆ;

ಬಿ) ೧೯೯೩ರ ಮಾರ್ಚ್ ಕೊನೆಯ ವಾರದಲ್ಲಿ ಕಾವೇರಿ ನೀರು ಸರಬರಾಜು ಯೋಜನೆಯ III ನೇ ಹಂತದ ಕಾರ್ಯಾರಂಭ ಮಾಡುವುದು ಮತ್ತು ೧೯೯೩-೯೪ರಲ್ಲಿ ಯೋಜನೆಯ IV ನೇ ಹಂತದ ಒಂದನೇ ಘಟ್ಟವನ್ನು ಪ್ರಾರಂಭಿಸುವುದು;

ಸಿ) ಕೈಗಾರಿಕೆಗಳ ಬಳಕೆಗಾಗಿ ನೀರನ್ನು ಶುದ್ಧೀಕರಿಸಲು ೧೬.೦೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕೃಷ್ಣಾ ಮತ್ತು ಕಾವೇರಿ ಕಣಿವೆಯಲ್ಲಿ ಒಂದು ೫೦ ಎಂಎಲ್‌ಡಿ ಮೂರನೇ ಶ್ರೇಣಿಯ ಸಂಸ್ಕರಣ ಸ್ಥಾವರವನ್ನು ಸ್ಥಾಪಿಸುವುದು;

ಡಿ) ಪುರಸಭೆಗಳಿಗೆ ಸಂದಾಯ ಮಾಡಬೇಕಾಗಿರುವ ಆಕ್ಟ್ರಾಯ್ ಪರಿಹಾರ ಅನುದಾನಗಳನ್ನು ಶೇಕಡ ೧೫ರಷ್ಟು ಹೆಚ್ಚಿಸುವುದು;

ಇ) ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಮೈಸೂರು ಮತ್ತು ಮಂಗಳೂರುಗಳಲ್ಲಿನ ಬೆಳವಣಿಗೆಯನ್ನು ಏಕರೂಪಗೊಳಿಸಲು ರಾಷ್ಟ್ರದ ರಾಜಧಾನಿ ಪ್ರದೇಶದಲ್ಲಿನ ಎನ್‌ಓಐಡಿಎ ಯ ರೀತಿಯಲ್ಲಿ ಉಪನಗರ ಅಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸುವುದು;

ಎಫ್) ಬೆಂಗಳೂರು ನಗರದಲ್ಲಿ ಸಮಗ್ರ ರೈಲು-ರಸ್ತೆಸಾರಿಗೆ ಪದ್ಧತಿ ಬಗ್ಗೆ ವ್ಯವಹರಿಸಲು ಬೆಂಗಳೂರು ತ್ವರಿತ ಸಾರಿಗೆ ಪ್ರಾಧಿಕಾರವನ್ನು ರಚಿಸುವುದು. ಈ ಯೋಜನೆಗೆ ಹಣಕಾಸು ಒದಗಿಸುವ ಸಂಬಂಧ ಹಾಗೂ ಸಹಮತಿಗಾಗಿ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಒಂದು ವರದಿಯನ್ನು ಸಲ್ಲಿಸಲಾಗಿದೆ.

ಜಿ) ಎಲ್ಲ ಖಾಸಗಿ ಲೇ-ಔಟ್‌ಗಳಲ್ಲಿಯೂ ಆರ್ಥಿಕವಾಗಿ ದುರ್ಬಲರಾದ ವರ್ಗಗಳಿಗೆ ಶೇಕಡಾ ೩೦ರಷ್ಟು ನಿವೇಶನಗಳನ್ನು ಮೀಸಲಿಡುವುದು;

೮೯. ರಾಜ್ಯದ ೨೦.೮೦ ಲಕ್ಷ ಜನರು ನಗರ ಕೊಳಗೇರಿಗಳಲ್ಲಿ ವಾಸಿಸುತ್ತಿದ್ದು, ಬೆಂಗಳೂರಿನ ಕೊಳೆಗೇರಿಗಳಲ್ಲಿಯೇ ೯ ಲಕ್ಷ ಜನರು ವಾಸಿಸುತ್ತಿದ್ದಾರೆ. ಎಲ್ಲಾ ಕೊಳಗೇರಿ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಸರ್ಕಾರವು ಒಂದು ಸಮಗ್ರ ಯೋಜನೆಯನ್ನು ಸಿದ್ಧಪಡಿಸಲು ಉದ್ದೇಶಿಸಿದೆ. ಪ್ರಾರಂಭಿಕ ಸೂಚನೆಗಳಂತೆ ಇದಕ್ಕೆ ೧೫೦ ಕೋಟಿ ರೂಪಾಯಿಗಳು ಬೇಕಾಗಿದ್ದು, ಈ ಕೆಲಸವನ್ನು ಮುಂದಿನ ಐದು ವರ್ಷಗಳಲ್ಲಿ ಪೂರ್ಣಗೊಳಿಸುವ ಸಲುವಾಗಿ ಹಣಕಾಸು ಸಂಸ್ಥೆಗಳಿಂದ ಮತ್ತು ಅಂತರರಾಷ್ಟ್ರೀಯ ಏಜೆನ್ಸಿಗಳಿಂದ ಸಹಾಯ ಕೋರಲು ಸರ್ಕಾರ ಉದ್ದೇಶಿಸಿದೆ.

ಗ್ರಾಮೀಣ ನೀರು ಸರಬರಾಜು

೯೦. ಗ್ರಾಮಾಂತರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸರಬರಾಜಿಗೆ ಸರ್ಕಾರ ಮೊದಲ ಆದ್ಯತೆ ನೀಡಿದೆ. ಈ ಉದ್ದೇಶಕ್ಕಾಗಿ ಪ್ರಸಕ್ತ ವರ್ಷದಲ್ಲಿ ೬೬.೪೮ ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ, ೧೯೯೩-೯೪ರಲ್ಲಿ, ೧೦೮.೬೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ವಿಶ್ವಬ್ಯಾಂಕಿನ ನೆರವಿನ ೩೮೩.೯೭ ಕೋಟಿ ರೂಪಾಯಿಗಳ ವೆಚ್ಚದ ಒಂದು ನೀರು ಪೂರೈಕೆ ಯೋಜನೆಗೆ ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದು ಈ ಯೋಜನೆಯನ್ನು ರಾಜ್ಯದ ಹತ್ತು ಜಿಲ್ಲೆಗಳಲ್ಲಿ ಕಾರ್ಯಗತಗೊಳಿಸಲಾಗುವುದು. ಅಂತೆಯೇ ಡಚ್ ನೆರವಿನೊಂದಿಗೆ ೬೭.೫೨ ಕೋಟಿ ರೂ.ಗಳ ವೆಚ್ಚದಲ್ಲಿ ಕೈಗೊಳ್ಳಲಾಗುವ ಇನ್ನೊಂದು ಯೋಜನೆ ಮಂಜೂರಾತಿ ಪಡೆಯುವ ಅಂತಿಮ ಹಂತದಲ್ಲಿದೆ. ಗ್ರಾಮೀಣ ಪ್ರದೇಶಗಳಲ್ಲಿ ಸೂಕ್ತ ನೈರ್ಮಲ್ಯ ವ್ಯವಸ್ಥೆಯನ್ನು ಕಲ್ಪಿಸಲು ಸಹ ಸರ್ಕಾರ ಗಮನ ನೀಡುತ್ತದೆ. ಈ ಎಲ್ಲಾ ನೀರು ಪೂರೈಕೆ ಯೋಜನೆಗಳಲ್ಲಿ ಸಮುದಾಯ ಮತ್ತು ಪ್ರತ್ಯೇಕ ಶೌಚಾಲಯಗಳನ್ನು ಒದಗಿಸುವ ವ್ಯವಸ್ಥೆಯಿದೆ.

ಸಮಾಜ ಕಲ್ಯಾಣ

೯೧. ಸಾಮಾಜಿಕ ನ್ಯಾಯ ಒದಗಿಸಬೇಕೆಂಬ ಅಂತಿಮ ಗುರಿಯನ್ನು ಸಾಧಿಸಲು ರಾಜ್ಯದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳ ಜನರ ಕಲ್ಯಾಣಕ್ಕೆ ಸರ್ಕಾರ ಬದ್ಧವಾಗಿದೆ. ಕರ್ನಾಟಕ ಪ.ಜಾ./ಪ.ಪಂ. ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಬಜೆಟ್‌ನಲ್ಲಿ ಒದಗಿಸುವ ಹಣವನ್ನು ಈಗಿನ ೨.೨೦ ಕೋಟಿ ರೂಪಾಯಿ ಮತ್ತು ೪.೮೫ ಕೋಟಿ ರೂಪಾಯಿಗಳ ಪ್ರಮಾಣದಿಂದ ೧೯೯೩-೯೪ರಲ್ಲಿ

ಕ್ರಮವಾಗಿ ೩.೨೦ ಕೋಟಿ ರೂಪಾಯಿಗೆ ಮತ್ತು ೭.೫೦ ಕೋಟಿ ರೂಪಾಯಿಗೆ ಏರಿಸಲಾಗಿದೆ. ಈ ಎರಡು ನಿಗಮಗಳ ಕಾರ್ಯಪ್ರಗತಿಯನ್ನು ಪರಿಶೀಲಿಸಿದ ನಂತರ ಪ್ರಸಕ್ತ ವರ್ಷ ಇನ್ನಷ್ಟು ಹಣವನ್ನು ಬಿಡುಗಡೆ ಮಾಡಲಾಗುವುದು.

ಬೆಳ್ಳ ಬೆಳಕು

೯೨. ತೀರಾ ದೂರದಲ್ಲಿರುವ ಹಾಗೂ ರಸ್ತೆಯೇ ಇಲ್ಲದ ಅತಿ ಸಣ್ಣ ಗ್ರಾಮಗಳಲ್ಲಿರುವ ಹಿಂದುಳಿದ ವರ್ಗಗಳ ಜನರ ಸಮಗ್ರ ಹಾಗೂ ವ್ಯಾಪಕ ಅಭಿವೃದ್ಧಿಗಾಗಿ ೧೯೯೩-೯೪ರಲ್ಲಿ ಒಂದು ಪ್ರಾಯೋಗಿಕ ಯೋಜನೆಯನ್ನು ಕೈಗೆತ್ತಿ ಕೊಳ್ಳಲಾಗುವುದು. ಈ ಯೋಜನೆಯ ಮೇರೆಗೆ ಅನಕ್ಷರತೆ ನಿವಾರಣೆಗಾಗಿ ಆಶ್ರಮ ಶಾಲೆಗಳನ್ನು ತೆರೆಯಲಾಗುವುದು, ಸುರಕ್ಷಿತ ಕುಡಿಯುವ ನೀರಿನ ಪೂರೈಕೆ ಮತ್ತು ನೈರ್ಮಲ್ಯ ವ್ಯವಸ್ಥೆಯನ್ನು ಒದಗಿಸಲಾಗುವುದು. ಆರೋಗ್ಯ ರಕ್ಷಣೆಗೆ ಕನಿಷ್ಠ ಸೌಲಭ್ಯಗಳು ದೊರೆಯುವಂತೆ ಮಾಡಲು ಸಂಚಾರಿ ಆರೋಗ್ಯ ಘಟಕ ವಾಹನಗಳಿಗೆ ಏರ್ಪಾಡು ಮಾಡಲಾಗುವುದು. ಈ ಅತಿಸಣ್ಣ ಗ್ರಾಮಗಳನ್ನು ತುಂಬಾ ಹತ್ತಿರದ ಗ್ರಾಮದೊಂದಿಗೆ ಅಥವಾ ಮೋಟಾರು ವಾಹನ ಸಂಚಾರ ಯೋಗ್ಯ ರಸ್ತೆಯೊಂದಿಗೆ ಸಂಪರ್ಕ ಕಲ್ಪಿಸಲಾಗುವುದು. ಕೋಳಿ ಸಾಕಣೆ, ಹೈನುಗಾರಿಕೆ, ಕರಕುಶಲ ಕಲೆ ಮುಂತಾದ ಆದಾಯ ತರುವ ಚಟುವಟಿಕೆಗಳನ್ನು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ನೆರವಿನೊಂದಿಗೆ ಕೈಗೊಳ್ಳಲಾಗುವುದು. ೧೯೯೩-೯೪ನೇ ವರ್ಷಕ್ಕಾಗಿ ಬಜೆಟ್ಟಿನಲ್ಲಿ ೧೩೩ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

೯೩. ವಿದ್ಯಾರ್ಥಿನಿಲಯಗಳಲ್ಲಿದ್ದುಕೊಂಡು ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್ ನಂತರದ ಶಿಕ್ಷಣ ಪಡೆಯುತ್ತಿರುವ ಪ.ಜಾ./ಪ.ಪಂ. ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಊಟ ಮತ್ತು ವಸತಿಗಾಗಿ ನೀಡುವ ಹಣದ ಮೊತ್ತವನ್ನು ಹೆಚ್ಚಿಸಿರುವುದನ್ನು ಸರ್ಕಾರ ಈಗಾಗಲೇ ಪ್ರಕಟಿಸಿದೆ. ಆಶ್ರಮ ಶಾಲೆಗಳ ಮತ್ತು ವಸತಿ ಶಾಲೆಗಳ ವಿದ್ಯಾರ್ಥಿಗಳ ಊಟದ ದರವನ್ನು ತಿಂಗಳೊಂದಕ್ಕೆ ೫೦ ರೂ. ಗಳಷ್ಟು ಹೆಚ್ಚಿಸಲು ಈಗ ಉದ್ದೇಶಿಸಲಾಗಿದೆ. ೧೯೯೩-೯೪ರಲ್ಲಿ ನಿರ್ಮಿಸಲಾಗುವ ಮತ್ತು ಪ್ರಾರಂಭಿಸಲಾಗುವ ಹೊಸ ವಿದ್ಯಾರ್ಥಿನಿಲಯಗಳ ವಿವರ ಹೀಗಿದೆ:

ಲಕ್ಷ ರೂ.ಗಳಲ್ಲಿ.

	೧೯೯೨-೯೩		೧೯೯೩-೯೪	
	ಸಂಖ್ಯೆ	ವೆಚ್ಚ	ಸಂಖ್ಯೆ	ವೆಚ್ಚ
(ಎ) ಪ.ಜಾ /ಪ.ಪಂ ದವರಿಗೆ				
(ಛ) ಹೊಸ ವಿದ್ಯಾರ್ಥಿನಿಲಯಗಳು	೫೬	೭೨.೦೮	೯೫	೨೩೭.೦೦
(ಛಛ) ಕಟ್ಟಡಗಳ ನಿರ್ಮಾಣ	೫೩	೬೦೦.೮೬	೭೦	೭೪೭.೦೨
(ಬಿ) ಹಿಂದುಳಿದ ವರ್ಗಗಳವರಿಗೆ				
(ಛ) ಹೊಸ ವಿದ್ಯಾರ್ಥಿನಿಲಯಗಳು	೩೦	೧೮೧.೧೧	೧೦೦	೩೨೦.೦೦
(ಛಛ) ಕಟ್ಟಡಗಳ ನಿರ್ಮಾಣ	೩೬	೫೪೩.೦೪	೭೫	೭೫೦.೦೦

ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾರ್ಥಿನಿಲಯಗಳ ನಿರ್ಮಾಣ ಮಾಡುವುದಕ್ಕಾಗಿ ಸ್ವಯಂ ಸೇವಾ ಸಂಘಗಳಿಗೆ ಹೆಚ್ಚಿನ ನೆರವನ್ನು ಒದಗಿಸಲಾಗುವುದು ಮತ್ತು ಈಗಿರುವ ವಿದ್ಯಾರ್ಥಿನಿಲಯಗಳಿಗೆ ಎಲ್‌ಪಿಜಿ ಸಂಪರ್ಕಗಳನ್ನು ಕಲ್ಪಿಸಲಾಗುವುದು ಮತ್ತು ಸೋಲಾರ್ ಹೀಟರುಗಳನ್ನು ಒದಗಿಸಲಾಗುವುದು.

೯೪. ಅಂತರ್ಜಾತೀಯ ವಿವಾಹಗಳಿಗೆ ನೀಡುವ ಪ್ರೋತ್ಸಾಹ ಧನಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ವಧೂವರರಲ್ಲೊಬ್ಬರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ್ದರೆ, ಪ್ರೋತ್ಸಾಹಧನವನ್ನು ಈಗಿರುವ ೫೦೦೦ ರೂ.ಗಳಿಂದ ೨೦,೦೦೦ ರೂ.ಗಳಿಗೆ ಹೆಚ್ಚಿಸಲಾಗುವುದು. ದೇವದಾಸಿಯರಿಗೆ ಪುನರ್ವಸತಿ ಕಲ್ಪಿಸುವ ಕಾರ್ಯಕ್ರಮವೊಂದನ್ನು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಮೂಲಕ ಕಾರ್ಯಗತಗೊಳಿಸಲಿದ್ದು ಈ ಯೋಜನೆಯ ಪ್ರಯೋಜನ ೭೩೭೨ ಫಲಾನುಭವಿಗಳಿಗೆ ದೊರೆಯಲಿದೆ ಹಾಗೂ ಇದಕ್ಕೆ ೫.೫೩ ಕೋಟಿ ರೂ. ವೆಚ್ಚವಾಗಲಿದೆ. ಇದರಲ್ಲಿ, ಕೌಶಲ್ಯ ವರ್ಧನೆ ಹಾಗೂ ಸ್ವಯಂ ಉದ್ಯೋಗ ಕಾರ್ಯಕ್ರಮಗಳು, ಎತ್ತುಗಳು, ಭೂಮಿ ಮುಂತಾದವುಗಳನ್ನು ಒದಗಿಸುವುದು ಸೇರುತ್ತದೆ. ಸಮಾಜದ ಮುಖ್ಯ ವಾಹಿನಿಯಲ್ಲಿ ಅವರು ಬೆರೆತು ಮುನ್ನಡೆಯುವಂತೆ ಮಾಡಲು ಉದ್ದೇಶಿಸಲಾಗಿದೆ.

ಅಂಬೇಡ್ಕರ್ ವಸತಿ ಯೋಜನೆ

೯೫. ಡಾ|| ಬಿ.ಆರ್. ಅಂಬೇಡ್ಕರ್ ಶತಮಾನೋತ್ಸವ ಕಾರ್ಯಕ್ರಮದ ಅಡಿಯಲ್ಲಿ ರೂಪಿಸಿರುವ ವಿಶೇಷ ಯೋಜನೆಗಳನ್ನು ಮುಂದುವರಿಸಲಾಗುವುದು. ಈ ಕಾರ್ಯಕ್ರಮದ ಅಡಿಯಲ್ಲಿ ೧೯೯೨ರ ಡಿಸೆಂಬರ್‌ವರೆಗೆ ಕೇವಲ ೨೦ ಮನೆಗಳನ್ನು ಮಾತ್ರ ಕಟ್ಟಲಾಗಿತ್ತು. ಈ ವರ್ಷ ೨೫೦೦೦ ಮನೆಗಳನ್ನು ಕಟ್ಟಲು ಉದ್ದೇಶಿಸಲಾಗಿದೆ. ಈ ಉದ್ದೇಶಕ್ಕಾಗಿ ೩೬.೦೦ ಕೋಟಿ ರೂಪಾಯಿಗಳಷ್ಟು ಹಣ ಒದಗಿಸಲಾಗಿದೆ.

ದೇವರಾಜ್ ಅರಸ್ ಸಂಸ್ಥೆ

೯೬. ಹಿಂದುಳಿದ ವರ್ಗಗಳಿಗಾಗಿ ಇರುವ ದೇವರಾಜ್ ಅರಸ್ ಸಂಶೋಧನಾ ಸಂಸ್ಥೆಯು ೧೯೯೩-೯೪ರಲ್ಲಿ ತನ್ನ ಚಟುವಟಿಕೆಗಳನ್ನು ಪ್ರಾರಂಭಿಸುತ್ತದೆ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಈ ಸಂಸ್ಥೆ ಗಣನೀಯ ಸೇವೆ ಸಲ್ಲಿಸಲಿದೆ. ಹಿಂದುಳಿದ ವರ್ಗಗಳಿಗಾಗಿ ಇರುವ ವಿವಿಧ ಯೋಜನೆಗಳ ಪ್ರಗತಿಯ ಮೇಲ್ವಿಚಾರಣೆಗಾಗಿ ತಾಲ್ಲೂಕು ಮಟ್ಟದ ಸಮಿತಿಗಳನ್ನು ರಚಿಸಲಾಗುವುದು.

ಮಹಿಳೆಯರ ಅಭಿವೃದ್ಧಿ

೯೭. ಕರ್ನಾಟಕದ ಜನಸಂಖ್ಯೆಯಲ್ಲಿ ಶೇಕಡ ೪೯ರಷ್ಟು ಮಹಿಳೆಯರಿದ್ದಾರೆ. ಆದರೆ, ಅಭಿವೃದ್ಧಿ ಕಾರ್ಯಕ್ರಮಗಳ ಪ್ರಯೋಜನವನ್ನು ಪುರುಷರು ಪಡೆದುಕೊಂಡಷ್ಟು ಅವರು ಪಡೆದುಕೊಂಡಿಲ್ಲ ಎಂಬುದು ವಿಷಾದಕರವಾದರೂ ವಾಸ್ತವಾಂಶವಾಗಿದೆ. ಡಿಡಬ್ಲ್ಯುಎಸಿಆರ್‌ಎಯಂಥ ಮಹಿಳೆಯರ ನಿರ್ದಿಷ್ಟ ಕಾರ್ಯಕ್ರಮಗಳ ಗುರಿಗಳನ್ನು ಮುಂಬರುವ ವರ್ಷಗಳಲ್ಲಿ ಹೆಚ್ಚಿಸಲಾಗುವುದು. ನಾನು ಈಗಾಗಲೇ ಸೂಚಿಸಿರುವಂತೆ ಎಲ್ಲಾ ವಲಯಗಳಲ್ಲಿ ಅವರಿಗೆ ವಿಶೇಷ ಮೀಸಲಾತಿ ಸೌಲಭ್ಯಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ. ಆದರೆ ನಾವು ಲಿಂಗಭೇದವನ್ನು ಹೋಗಲಾಡಿಸದಿದ್ದಲ್ಲಿ ರಾಜಕೀಯ ಸಂಸ್ಥೆಗಳಲ್ಲಿ ಅಥವಾ ವಿಶೇಷ ಕಾರ್ಯಕ್ರಮಗಳಲ್ಲಿ ಅವರಿಗೆ ಯಾವುದೇ ಮೀಸಲಾತಿ ನೀಡಿದರೂ ಪರಾಧೀನ ಸ್ಥಿತಿಯ ನಿವಾರಣೆಯಲ್ಲಿ ಯಶಸ್ಸು ದೊರೆಯಲಾರದು. ಮಹಿಳೆಯರು ತಮ್ಮ ಸಾಮರ್ಥ್ಯವನ್ನು ಅರಿತುಕೊಳ್ಳುವ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವಂತೆ ಮಾಡುವುದು ಒಂದು ಧ್ಯೇಯವಾಗಿದ್ದು ಅದಕ್ಕಾಗಿ ನಾವೆಲ್ಲ ಶ್ರಮಿಸಲೇಬೇಕಾಗಿದೆ. ಶೋಷಣೆಯನ್ನು ತಪ್ಪಿಸಲು ಮತ್ತು ಅವರಲ್ಲಿ ಕಾನೂನು ತಿಳಿವಳಿಕೆಯನ್ನು ಹೆಚ್ಚಿಸಲು, ರಾಷ್ಟ್ರೀಯ ಕಾನೂನು ಶಾಲೆ ಮತ್ತು ಮಹಿಳಾ ಸಮಖ್ಯ, ಕರ್ನಾಟಕ ಕಾನೂನು ನೆರವು ಮಂಡಳಿ ಮತ್ತು ವಿದೇಶಿ ನೆರವಿನ ಸಂಸ್ಥೆಗಳನ್ನು ತೊಡಗಿಸಿಕೊಂಡು ಕಾನೂನು ಸಾಕ್ಷರತಾ ಸಂಸ್ಥೆಯನ್ನು ರಚಿಸಲಾಗುವುದು.

ಹಿರಿಯ ಮಾಜಿ ಯೋಧರಿಗೆ ಮಾಸಾಶನ

೯೮. ೨ನೇ ವಿಶ್ವ ಸಮರದ ನಂತರ ಬರಖಾಸ್ತು ಹೊಂದಿರುವ ಹಿರಿಯ ಯೋಧರಿಗೆ ಮತ್ತು ಅವರ ವಿಧವೆಯರಿಗೆ ಮಾಸಿಕ ೩೦೦ ರೂಪಾಯಿಗಳ ಮಾಸಾಶನವನ್ನು ನೀಡಲು ಸರ್ಕಾರ ಉದ್ದೇಶಿಸಿದೆ.

ಆಶಾಕಿರಣ ಯೋಜನೆ

೯೯. ಕೃಷಿಕಾರ್ಮಿಕರು, ಬೀಡಿವ್ಯಾಪಾರಿಗಳು, ಹಮಾಲಿಗಳು, ಮೀನುಗಾರರು, ಕಟ್ಟಡ ನಿರ್ಮಾಣ ಕೆಲಸಗಾರರು ಮುಂತಾದ ಅಸಂಘಟಿತ ವಲಯದಲ್ಲಿ ಕೆಲಸಮಾಡುತ್ತಿರುವ ಕೆಲಸಗಾರರು ಗಾಯಗೊಂಡರೆ ಅವರಿಗೆ ಪರಿಹಾರ ನೀಡುವ ಸಲುವಾಗಿ ಬೀದಿ ಭಾಗ್ಯ ಯೋಜನೆಯನ್ನು ಮಾರ್ಪಾಟುಮಾಡಿ ಆಶಾಕಿರಣ ಯೋಜನೆಯನ್ನು ಮತ್ತೆ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ೧೯೯೩-೯೪ರಲ್ಲಿ ಈ ಯೋಜನೆಗೆ ೧.೦೦ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ.

ದಾರಿದ್ರ್ಯ ನಿವಾರಣೆ ಕಾರ್ಯಕ್ರಮ

೧೦೦. ಗ್ರಾಮೀಣ ಪ್ರದೇಶದ ಮಹಿಳೆಯರು ಮತ್ತು ಮಕ್ಕಳು ಸೇರಿದಂತೆ ಬಡವರು ಹಾಗೂ ತುಳಿತಕ್ಕೊಳಗಾದವರ ಉನ್ನತಿಗಾಗಿ ಕಾರ್ಯಕ್ರಮಗಳನ್ನು ರೂಪಿಸಲು ಸರ್ಕಾರವು ಸಂಪೂರ್ಣವಾಗಿ ಬದ್ಧವಾಗಿದೆ. ಅದರಂತೆ, ೧೯೯೩-೯೪ರಲ್ಲಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಮೇರೆಗೆ ಬಡತನ ರೇಖೆಗಿಂತ ಕೆಳಗಿರುವ ೧,೨೦,೪೫೭ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸುವ ವಾಸ್ತವಿಕ ಗುರಿ ಇಟ್ಟುಕೊಳ್ಳಲಾಗಿದ್ದು, ಈ ಉದ್ದೇಶಕ್ಕೆ, ೧೯೯೩-೯೪ನೇ ಸಾಲಿಗೆ ೪೨.೯೬ ಕೋಟಿ ರೂಪಾಯಿ ಒದಗಿಸಲಾಗಿದೆ. ೧೯೯೨-೯೩ರಲ್ಲಿ ೮೬,೪೨೫ ಫಲಾನುಭವಿಗಳಿಗೆ ಈ ಯೋಜನೆಯ ಸೌಲಭ್ಯ ಒದಗಿಸಲಾಗಿತ್ತು.

೧೦೧. ಚಿಕ್ಕಮಗಳೂರು, ಹಾಸನ, ಮಂಡ್ಯ, ಮೈಸೂರು, ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಜೀತಮುಕ್ತ ಕಾರ್ಮಿಕರ ಪೈಕಿ ಕನಿಷ್ಠ ೬೦೦ ಕುಟುಂಬಗಳಿಗೆ, ಮುಂದಿನ ವರ್ಷ ಪ್ರತಿಯೊಂದು ಕುಟುಂಬಕ್ಕೆ ೪ ಎಕರೆ ಸರ್ಕಾರಿ ಜಮೀನಿನ ಹಂಚಿಕೆ ಮಾಡುವ ಮೂಲಕ ನೆರವು ನೀಡುವುದಕ್ಕಾಗಿ ೫೬ ಕೃಷಿ ಎಸ್ಟೇಟುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ. ಇವರಲ್ಲಿ ಬಹಳಷ್ಟು ಜನರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಾಗಿದ್ದಾರೆ. ಪ್ರಗತಿಯಲ್ಲಿರುವ ಕಾರ್ಯಕ್ರಮಗಳಲ್ಲಿ ಅವರಿಗೆ ಆದ್ಯತೆ ನೀಡಿ ಮನೆ ಕಟ್ಟಿಕೊಳ್ಳಲು ನೆರವು ನೀಡಲಾಗುವುದು.

ಸ್ವಯಂ ಸೇವಾ ಸಂಸ್ಥೆಗಳಿಗೆ ಉತ್ತೇಜನ

೧೦೨. ಉದಾರ ನೀತಿಯಿಂದಾಗಿ, ನಾ ಮುಂದು ತಾ ಮುಂದು ಎಂದು ಬಂದಿರುವ ಸಂಘ ಸಂಸ್ಥೆಗಳ ಕಾರ್ಯಸಾಮರ್ಥ್ಯದ ಮೇಲೆ ಭರವಸೆ ಇಟ್ಟು ಕೊಳ್ಳುವುದರಿಂದ ಮಾತ್ರವೇ ಸಮಾಜ ಕಲ್ಯಾಣವನ್ನು ಗರಿಷ್ಠ ಪ್ರಮಾಣದಲ್ಲಿ ಸಾಧಿಸಬೇಕೆಂಬ ಧ್ಯೇಯೋದ್ದೇಶ ಈಡೇರಲಾರದು ಎಂಬ ಅರಿವು ಸರ್ಕಾರಕ್ಕಿದೆ. ಸಾಕ್ಷರತೆ, ಸಮಾಜದ ದುರ್ಬಲ ವರ್ಗಗಳಿಗಾಗಿ ಆರೋಗ್ಯ ರಕ್ಷಣೆ, ಪೌಷ್ಠಿಕಾಹಾರ, ಪರಿಸರ, ಮತ್ತು ಜೀವಿಪರಿಸರ ಗ್ರಾಮೀಣ ಅಭಿವೃದ್ಧಿ ಮುಂತಾದ ಹಲವಾರು ಕ್ಷೇತ್ರಗಳಲ್ಲಿ ಸರ್ಕಾರವು ಪ್ರಮುಖ ಪಾತ್ರ ವಹಿಸಬೇಕಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ, ಹಲವಾರು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು, ಈ ಕ್ಷೇತ್ರಗಳಲ್ಲಿ ತಮ್ಮ ಚಟುವಟಿಕೆಗಳ ಮೂಲಕ ಸರ್ಕಾರದ ಪ್ರಯತ್ನಗಳಿಗೆ ಪೂರಕವಾಗಿ ಕೆಲಸ ಮಾಡುತ್ತಿವೆ. ನಾನು, ಈ ಸಂಸ್ಥೆಗಳಿಗೆ ಸಕ್ರಿಯ ಉತ್ತೇಜನ ನೀಡಬಯಸುತ್ತೇನೆ ಹಾಗೂ ರಾಜ್ಯದ ನಾಗರೀಕರ ಪುರೋಭಿವೃದ್ಧಿಗಾಗಿ ಅವುಗಳು ಸ್ವತಃ ಮುಂದೆ ಬಂದು ಸಾರ್ವಜನಿಕ ಸೇವೆ ಸಲ್ಲಿಸುವುದನ್ನು ಸ್ವಾಗತಿಸುತ್ತೇನೆ.

ಆರಾಧನಾ

೧೦೩. ಆರಾಧನಾ ಸ್ಥಳಗಳನ್ನು ದುರಸ್ತಿ ಮಾಡುವುದಕ್ಕಾಗಿ ಆರಾಧನಾ ಯೋಜನೆಯನ್ನು ಮುಂದುವರಿಸಲಾಗುವುದು. ೧೯೯೨-೯೩ನೇ ಸಾಲಿನಲ್ಲಿ ಈ ಯೋಜನೆಗೆ ೫.೦೦ ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ, ಈಗ ಅದನ್ನು ೬.೦೦ ಕೋಟಿ ರೂಪಾಯಿಗಳಿಗೆ ಏರಿಸಲಾಗಿದೆ. ಈ ಯೋಜನೆಯನ್ನು ಇತರ ಅಲ್ಪ ಸಂಖ್ಯಾತ ಕೋಮುಗಳಿಗೆ ಸೇರಿದ ಆರಾಧನಾ ಸ್ಥಳಗಳಿಗೂ ಅನ್ವಯವಾಗುವಂತೆ ಮಾಡಲಾಗುವುದು.

ಅಲ್ಪಸಂಖ್ಯಾತರ ಅಭಿವೃದ್ಧಿ

೧೦೪. ಅಲ್ಪಸಂಖ್ಯಾತರ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ವಕ್ಫ್ ಮಂಡಳಿಗೆ ನೀಡುವ ಹಣವನ್ನು ಮುಂದಿನ ವರ್ಷಕ್ಕೆ ೧೩೫ ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲು ಉದ್ದೇಶಿಸಿದ್ದೇನೆ. ೧೯೯೨-೯೩ರಲ್ಲಿ ೨೦ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿತ್ತು. ಇದರ ಪೈಕಿ ೧ ಕೋಟಿ ರೂಪಾಯಿಯನ್ನು ಮಸೀದಿಗಳ ನಿರ್ಮಾಣ ಮತ್ತು ದುರಸ್ತಿಗಾಗಿ ಮೀಸಲಿಡಲಾಗುವುದು. ಅದೇ ರೀತಿ, ಕರ್ನಾಟಕ ರಾಜ್ಯ ಮಹಿಳಾಭಿವೃದ್ಧಿ ವಕ್ಫ್ ಪ್ರತಿಷ್ಠಾನಕ್ಕೆ ನೀಡುವ ಹಣವನ್ನು ೧೯೯೩-೯೪ರಲ್ಲಿ ೨೫ ಲಕ್ಷ ದಿಂದ ೫೦ ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ ಮತ್ತು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ನೀಡುವ ಹಣವನ್ನು ೨ ಕೋಟಿ ರೂಪಾಯಿಗಳಿಂದ ೨.೫೦ ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಕರ್ನಾಟಕ ರಾಜ್ಯವಕ್ಫ್ ಪರಿಷತ್ತಿಗೆ ೬೩ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಉರ್ದು ಶಾಲೆಗಳಲ್ಲಿನ ಉರ್ದು ಮತ್ತು ಕನ್ನಡ ಭಾಷಾ ಉಪಾಧ್ಯಾಯರ ಎಲ್ಲಾ ಹುದ್ದೆಗಳನ್ನು ಆದ್ಯತೆಯ ಆಧಾರದ ಮೇಲೆ ಭರ್ತಿ ಮಾಡಲಾಗುವುದು.

ಕಲೆ ಮತ್ತು ಸಂಸ್ಕೃತಿ

೧೦೫. ನಮ್ಮ ಕಲೆಯನ್ನು ಸಂರಕ್ಷಿಸುವ, ಪ್ರಚುರಪಡಿಸುವ ಮತ್ತು ಜನಪ್ರಿಯಗೊಳಿಸುವ ಸಲುವಾಗಿ ಯೋಜನೆಯೊಂದನ್ನು ಪ್ರಾರಂಭಿಸಲು ನಾನು ಉದ್ದೇಶಿಸಿದ್ದು, ಈ ಯೋಜನೆ ಅಡಿಯಲ್ಲಿ ಆಯ್ದ ''ಗುರು''ಗಳಿಗೆ, ನಿಗದಿತ ಸಂಖ್ಯೆಯ ಶಿಷ್ಯರಿಗೆ ಶಿಕ್ಷಣ ನೀಡುವುದಕ್ಕಾಗಿ ಹಣಕಾಸಿನ ನೆರವನ್ನು ನೀಡಲಾಗುವುದು. ಶಿಷ್ಯರಿಗೆ ಸಹ ವಿದ್ಯಾರ್ಥಿ ವೇತನ ನೀಡಲಾಗುವುದು. ಈ ಉದ್ದೇಶಕ್ಕಾಗಿ ೧೯೯೩-೯೪ನೇ ಸಾಲಿನಲ್ಲಿ ೧೫.೦೦ ಲಕ್ಷ ರೂಪಾಯಿಗಳನ್ನು ಮೀಸಲಿಡಲಾಗಿದೆ.

೧೦೬. ಕೇಂದ್ರ ಅಕಾಡೆಮಿ ಪ್ರಶಸ್ತಿ ಪಡೆದಿರುವ ೬೦ ವರ್ಷಕ್ಕಿಂತ ಮೇಲ್ಪಟ್ಟ ವಯಸ್ಸಿನ ಕಲಾವಿದರಿಗೆ ತಿಂಗಳಿಗೆ ೧೦೦೦ ರೂಪಾಯಿ ಗೌರವ ಧನ ನೀಡಲು ನಾನು ಉದ್ದೇಶಿಸಿದ್ದೇನೆ. ಸಾಂಸ್ಕೃತಿಕ ಸಂಸ್ಥೆಗಳಿಗೆ ನೀಡುತ್ತಿರುವ ಅನುದಾನಗಳಲ್ಲಿನ ಅಸಮತೋಲನವನ್ನು ಸರಿಪಡಿಸಲು ನಾನು ಉದ್ದೇಶಿಸಿದ್ದು ಇದರಿಂದ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿನ ಸಂಸ್ಥೆಗಳಿಗೆ ಉತ್ತಮ ಪಾಲು ದೊರೆಯುತ್ತದೆ.

ತುಳು-ಕೊಂಕಣಿ-ಕೊಡವ ಅಕಾಡೆಮಿ

೧೦೭. ಕರ್ನಾಟಕದಲ್ಲಿ ಕನ್ನಡ ಭಾಷೆಯ ಜೊತೆಗೆ, ಸಾಕಷ್ಟು ಸಂಖ್ಯೆಯ ಜನಗಳು ಮಾತನಾಡುವ ತುಳು, ಕೊಂಕಣಿ ಮತ್ತು ಕೊಡವ ಇಂತಹ ಇತರ ಭಾಷೆಗಳೂ ಇವೆ. ಈ ಜನತೆಯ ಭಾಷೆ ಮತ್ತು ಸಂಸ್ಕೃತಿಯ ಸುಧಾರಣೆಗಾಗಿ ಒಂದು ತುಳು-ಕೊಂಕಣಿ-ಕೊಡವ ಅಕಾಡೆಮಿಯನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

೧೦೮. ಸಂರಕ್ಷಣಾ ಅಂಶಕ್ಕೆ ಒತ್ತು ನೀಡುವ ಮೂಲಕ ಪುರಾತತ್ವ ಇಲಾಖೆಗೆ ಒಂದು ಹೊಸ ಆಯಾಮ ನೀಡಬಯಸುತ್ತೇನೆ. ಈ ಉದ್ದೇಶಕ್ಕಾಗಿ ೧೯೯೩-೯೪ರಲ್ಲಿ ೧೦೦.೦೦ ಲಕ್ಷ

ರೂಪಾಯಿಗಳನ್ನು ನಿಗದಿ ಮಾಡಿದ್ದೇನೆ. ಹಾಗೆಯೇ ಚಿತ್ರಪಟಗಳ ಸಂಗ್ರಹಾಗಾರವನ್ನು ಮತ್ತು ಪ್ರಕಟಣೆಗಳನ್ನು ಸುಧಾರಿಸುವ ಅಗತ್ಯವಿದೆ. ಈ ಉದ್ದೇಶಕ್ಕಾಗಿ ೧೯೯೩-೯೪ರಲ್ಲಿ ೧೦.೦೦ ಲಕ್ಷ ರೂಪಾಯಿಗಳನ್ನು ಒದಗಿಸಲು ಉದ್ದೇಶಿಸಿದ್ದೇನೆ.

ಕನ್ನಡ ಚಿತ್ರಗಳಿಗೆ ಸಹಾಯಧನ

೧೦೯. ಸರ್ಕಾರದ ಸಹಾಯಧನ ಪಡೆಯುತ್ತಿರುವ ಬಹಳಷ್ಟು ಕನ್ನಡ ಚಲನ ಚಿತ್ರಗಳು ಇತರ ಭಾಷೆಗಳ ಚಲನ ಚಿತ್ರಗಳ ರೀಮೇಕ್‌ಗಳಾಗಿರುವುದು ಕಂಡು ಬಂದಿದೆ. ಮೂಲತಃ ಕನ್ನಡದಲ್ಲೇ ತಯಾರಿಸಿದ ಹಾಗೂ ಸೃಜನಾತ್ಮಕವಾದ ಕನ್ನಡ ಚಲನ ಚಿತ್ರಗಳಿಗೆ ಪ್ರೋತ್ಸಾಹ ನೀಡಲು ಮತ್ತು ಮೂಲ ಕನ್ನಡ ಕಲಾತ್ಮಕ ಚಲನ ಚಿತ್ರ ಮತ್ತು ಇತರ ಮೂಲ ಕನ್ನಡ ಚಲನ ಚಿತ್ರಗಳಿಗೆ ನೀಡುವ ಸಹಾಯಧನವನ್ನು ಅನುಕ್ರಮವಾಗಿ ೫ ಲಕ್ಷ ರೂಪಾಯಿಗಳಿಗೆ ಮತ್ತು ೪ ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ. ಇನ್ನುಮುಂದೆ ಕನ್ನಡದಲ್ಲಿನ ರೀಮೇಕ್ ಚಿತ್ರಗಳು ಯಾವುದೇ ಸಹಾಯಧನಕ್ಕೆ ಅರ್ಹವಾಗುವುದಿಲ್ಲ.

೧೧೦. ವಿಡಿಯೋ ಪಾರ್ಲರುಗಳು ಮತ್ತು ಕೇಬಲ್ ಟಿವಿಯ ಮೂಲಕ ಚಿತ್ರಗಳನ್ನು ಪ್ರದರ್ಶಿಸುವುದರ ಬಗ್ಗೆ ಶಾಸನವನ್ನು ಜಾರಿಗೆ ತರುವ ಮೂಲಕ ವಿಡಿಯೋ ಹಾವಳಿಯನ್ನು ನಿಯಂತ್ರಿಸಲಾಗುವುದು.

೧೧೧. ಚಿತ್ರನಗರಿಯ ಸ್ಥಾಪನೆ ಕರ್ನಾಟಕದಲ್ಲಿನ ಚಿತ್ರೋದ್ಯಮದ ಬಹುದಿನದ ಅವಶ್ಯಕತೆ. ಚಿತ್ರನಗರಿಯನ್ನು ಸ್ಥಾಪಿಸಲು ಚಿತ್ರೋದ್ಯಮವು ಮುಂದೆ ಬಂದು ಚಲನಚಿತ್ರ ಕೈಗಾರಿಕಾ ಅಭಿವೃದ್ಧಿ ನಿಗಮದ ಜೊತೆ ಸೇರಲಿಚ್ಛಿಸಿದಲ್ಲಿ, ಸರ್ಕಾರವು ಎಲ್ಲಾ ಅವಶ್ಯಕ ಬೆಂಬಲ ಮತ್ತು ಪ್ರೋತ್ಸಾಹವನ್ನು ನೀಡುವುದು.

೧೧೨. ಬೆಂಗಳೂರು ನಗರದ ಪ್ರಾಮುಖ್ಯತೆ ಹೆಚ್ಚುತ್ತಿರುವುದರಿಂದ ಹಾಗೂ ವಿವಿಧ ಜನಾಂಗೀಯ ಸಂಸ್ಕೃತಿಯ ಎಲ್ಲ ಲಕ್ಷಣಗಳೂ ಇಲ್ಲಿರುವದರಿಂದ, ಎರಡನೇ ರಾಜಧಾನಿಯಾಗುವ ಸಾಮರ್ಥ್ಯ ನಮ್ಮ ನಗರಕ್ಕಿದೆ. ಈ ದೃಷ್ಟಿಯಿಂದ, ಬೆಂಗಳೂರಿನಲ್ಲಿರುವ ಆಕಾಶವಾಣಿ ಕೇಂದ್ರವನ್ನು ವಿಸ್ತರಿಸಿ ಬಲಪಡಿಸುವಂತೆ ನಾನು ಕೇಂದ್ರಸರ್ಕಾರಕ್ಕೆ ವಿನಂತಿ ಮಾಡಿಕೊಂಡಿದ್ದೇನೆ ಮತ್ತು ಬೆಂಗಳೂರಿಗೆ ಎರಡನೇ ಚಾನೆಲ್ಲಿನ ಅಗತ್ಯವಿರುವ ಬಗ್ಗೆಯೂ ನಾನು ಕೇಂದ್ರಕ್ಕೆ ಒತ್ತಿ ಹೇಳಿದ್ದೇನೆ. ಮೆಟ್ರೋ ಚಾನಲ್ ಒದಗಿಸುವ ತನಕ, ಪ್ರಸಾರ ಮಾಧ್ಯಮಗಳ ಮತ್ತು ಇತರ ಏಜೆನ್ಸಿಗಳ ನೆರವಿನೊಂದಿಗೆ ಬೆಂಗಳೂರು ದೂರದರ್ಶನದ ಮೂಲಕ ವಿಶೇಷ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವ ಸಲುವಾಗಿ ಪ್ರಾದೇಶಿಕ ಯೋಜನೆಯೊಂದನ್ನು ನಾನು ರೂಪಿಸುತ್ತಿದ್ದೇನೆ.

ಯುವಜನ ಸೇವೆಗಳು

೧೧೩. ಕರ್ನಾಟಕದ ಯುವಜನರಿಗಾಗಿ ವಿದ್ಯಾನಗರದಲ್ಲಿ ಕ್ರೀಡಾ ಅಭಿವೃದ್ಧಿ ಸಂಸ್ಥೆಯೊಂದನ್ನು ಸ್ಥಾಪಿಸಲು ನಾನು ಉದ್ದೇಶಿಸಿದ್ದೇನೆ. ಈ ಸಂಸ್ಥೆ, ಕ್ರೀಡೆಗಳಲ್ಲಿ ದೈಹಿಕ ಶಿಕ್ಷಣ ಮತ್ತು ತರಬೇತಿ ಇವುಗಳನ್ನು ಸಂಯೋಜಿಸುತ್ತದೆ ಹಾಗೂ ನಾಯಕತ್ವ ಕೌಶಲಗಳನ್ನು ರೂಢಿಸಿಕೊಳ್ಳಲು ಯುವಜನತೆಗೆ ತರಬೇತಿ ನೀಡುತ್ತದೆ. ೧೧೬ ಲಕ್ಷ ರೂ.ಗಳ ವೆಚ್ಚದಲ್ಲಿ ಗುಲ್ಬರ್ಗಾದಲ್ಲಿ ಒಂದು ಕ್ರೀಡಾ ಸಂಕೀರ್ಣವನ್ನು ಮತ್ತು ಶೇಕಡಾ ೫೦ರಷ್ಟು ಭಾರತ ಸರ್ಕಾರದ ನೆರವಿನೊಡನೆ, ಪ್ರತಿಯೊಂದಕ್ಕೆ ೨೫ ಲಕ್ಷ ರೂಪಾಯಿಗಳ ವೆಚ್ಚ ತಗಲುವ ವಿವಿಧೋದ್ದೇಶ ಕ್ರೀಡಾಂಗಣಗಳನ್ನು (ಒಳಾಂಗಣ ಕ್ರೀಡಾಂಗಣ) ಮುಂದಿನ ವರ್ಷ ನಿರ್ಮಿಸಲು ಸಹ ಉದ್ದೇಶಿಸಲಾಗಿದೆ.

ಕಾನೂನು ಮತ್ತು ಸುವ್ಯವಸ್ಥೆ

೧೧೪. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ರಾಜ್ಯವು ಕಡ್ಡಾಯವಾಗಿ ಮಾಡಲೇಬೇಕಾದ ಕರ್ತವ್ಯವಾಗಿದ್ದು, ಸರ್ಕಾರ, ಶಿಸ್ತಿನಿಂದ ಕೂಡಿದ ದಕ್ಷ ಪೋಲೀಸು

ಪಡೆಯ ಅಭಿವೃದ್ಧಿಗೆ ಅತಿ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತದೆ. ರಾಜ್ಯದ ಪೋಲೀಸು ಪಡೆಯ ಗಾತ್ರವನ್ನು ಹೆಚ್ಚಿಸುವುದಕ್ಕಿಂತಲೂ, ಬಜೆಟ್ಟಿನಲ್ಲಿ ಹೆಚ್ಚಿಗೆಯಾಗಿ ೧೧.೦೦ಕೋಟಿ ರೂಪಾಯಿಗಳನ್ನು ಒದಗಿಸುವ ಮೂಲಕ ಸಾಕಷ್ಟು ವಾಹನಗಳನ್ನು ಮತ್ತು ಸಾಧನ ಸಾಮಗ್ರಿಗಳನ್ನು ಪೂರೈಸಲು ನಾನು ಉದ್ದೇಶಿಸಿದ್ದೇನೆ. ಗ್ರಾಮಗಳಿಗೆ ರಕ್ಷಣೆ ಒದಗಿಸುವುದಕ್ಕಾಗಿ ಮಾಜಿ ಸೈನಿಕರ ಸೇವೆಯನ್ನು ಉಪಯೋಗಿಸಿಕೊಳ್ಳುವ ಸಾಧ್ಯತೆ ಬಗ್ಗೆ ಪರಿಶೀಲಿಸುತ್ತೇನೆ. ಪ್ರತಿ ತಾಲ್ಲೂಕಿಗೆ ಒಂದು ಪ್ಲಟೂನನ್ನು ಒದಗಿಸುವ ಅಂತಿಮ ಗುರಿಯನ್ನಿಟ್ಟುಕೊಂಡು ಮುಂಬರುವ ವರ್ಷದಲ್ಲಿ ಹೋಂ ಗಾರ್ಡ್‌ಗಳ ಸಂಖ್ಯೆಯನ್ನು ೧೭೦೦೦ದಿಂದ ೨೫,೦೦೦ಕ್ಕೆ ಹೆಚ್ಚಿಸಲಾಗುವುದು. ಅಗ್ನಿಶಾಮಕ ದಳವನ್ನು ಸಹ ಹೆಚ್ಚಿಸಬೇಕಾಗಿದೆ. ಅಗ್ನಿಶಾಮಕ ಕೇಂದ್ರಗಳ ಸಂಖ್ಯೆಯನ್ನು ಪ್ರತಿ ವರ್ಷಕ್ಕೆ ಹತ್ತರಂತೆ ಹೆಚ್ಚಿಸಲಾಗುತ್ತದೆ.

ಭೂ ಸುಧಾರಣೆಗಳು

೧೧೫. ಉಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆಗಳು ಇತ್ಯರ್ಥವಾಗದೆ ಉಳಿದಿರುವುದರಿಂದಾಗಿ ಹೆಚ್ಚುವರಿ ಜಮೀನುಗಳ ವಿತರಣೆಯ ಕಾರ್ಯಪ್ರಗತಿ ನಿಧಾನವಾಗಿದೆ. ಆದುದರಿಂದ ರಾಜ್ಯ ಸರ್ಕಾರವು ಎಲ್ಲಾ ಭೂ ಸುಧಾರಣಾ ಪ್ರಕರಣಗಳು ತ್ವರಿತವಾಗಿ ಇತ್ಯರ್ಥವಾಗುವಂತೆ ಮಾಡಲು ಭಾರತ ಸಂವಿಧಾನದ ಅನುಚ್ಛೇದ೩೨೩(ಬಿ) ಮೇರೆಗೆ ವಿಶೇಷ ನ್ಯಾಯಮಂಡಳಿಗಳನ್ನು ಸ್ಥಾಪಿಸುತ್ತದೆ.

ಅನಧಿಕೃತ ಸಾಗುವಳಿ ಜಮೀನನ್ನು ಸಕ್ರಮಗೊಳಿಸುವುದು

೧೧೬. ಅನಧಿಕೃತ ಜಮೀನನ್ನು ಸಕ್ರಮಗೊಳಿಸುವ ಪ್ರಸಕ್ತ ಯೋಜನೆಯ ಮೇರೆಗೆ ಒಟ್ಟು ೧೦.೮೬ ಲಕ್ಷ ಅರ್ಜಿಗಳು ಬಂದಿದ್ದವು. ೧೯೯೨ರ ಡಿಸೆಂಬರ್‌ವರೆಗೆ ೧.೫೮ ಲಕ್ಷ ಅರ್ಜಿಗಳನ್ನು ವಿಲೇ ಮಾಡಲಾಗಿದ್ದು ೮೭೪೪೪ ಎಕರೆ ಜಮೀನನ್ನು ಸಕ್ರಮಗೊಳಿಸಲಾಗಿದೆ. ಬಾಕಿ ಇರುವ ಎಲ್ಲಾ ಅರ್ಜಿಗಳನ್ನು ಆರು ತಿಂಗಳ ಅವಧಿಯೊಳಗಾಗಿ ವಿಲೇ ಮಾಡಲು ಉದ್ದೇಶಿಸಲಾಗಿದೆ.

ಸರ್ಕಾರಿ ನೌಕರರು

೧೧೭. ಕರ್ನಾಟಕ ೪ನೇ ವೇತನ ಆಯೋಗದ ಶಿಫಾರಸುಗಳ ಆಧಾರದ ಮೇಲೆ ಸರ್ಕಾರವು ಮೂಲ ವೇತನದ ಶೇ. ೫ರಷ್ಟು ತಾತ್ಕಾಲಿಕ ಪರಿಹಾರವನ್ನು ಈಗಾಗಲೇ ಮಂಜೂರು ಮಾಡಿದೆ. ಆಯೋಗದ ಅಂತಿಮ ವರದಿಯನ್ನು ನಿರೀಕ್ಷಿಸಲಾಗುತ್ತಿದೆ. ನಿವೃತ್ತಿ ವಯೋಮಿತಿಯನ್ನು ೫೮ ವರ್ಷವಾಗಿ ಉಳಿಸಿಕೊಳ್ಳಲು ಸಹಾ ಉದ್ದೇಶಿಸಲಾಗಿದೆ.

ಮಿತವ್ಯಯ ಕ್ರಮಗಳು

೧೧೮. ಈಗಿರುವ ಮಿತವ್ಯಯ ಆದೇಶಗಳು ಕಟ್ಟುನಿಟ್ಟಾಗಿ ಜಾರಿಗೆ ಬರುವಂತಾಗಲು ನಾನು ಕೂಡಲೇ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದ್ದೇನೆ. ಆದರೆ, ಶಿಕ್ಷಣ, ಆರೋಗ್ಯ ಪಶುವೈದ್ಯಕೀಯ ಮತ್ತು ಸಮಾಜ ಕಲ್ಯಾಣ ಇಲಾಖೆಗಳಲ್ಲಿನ ಹುದ್ದೆಗಳನ್ನು ಭರ್ತಿ ಮಾಡುವ ವಿಷಯದಲ್ಲಿ ಆ ಆದೇಶಗಳನ್ನು ಸಡಿಲಗೊಳಿಸಲಾಗುವುದು. ಅಭಿವೃದ್ಧಿ ಚಟುವಟಿಕೆಗಳಿಗೆ ಸಂಪನ್ಮೂಲಗಳು ದೊರೆಯುವಂತೆ ನೋಡಿಕೊಳ್ಳಲು ಯೋಜನೇತರ ವೆಚ್ಚಗಳನ್ನು ನಿಯಂತ್ರಿಸಲಾಗುವುದು. ಪ್ರವಾಸ ಮತ್ತು ಪ್ರಯಾಣಕ್ಕಾಗಿ ಸಚಿವರುಗಳು ವಹಿಸುವ ವೆಚ್ಚ, ಕಚೇರಿ ಹಾಗೂ ಮನೆಗಳನ್ನು ಸಜ್ಜುಗೊಳಿಸುವುದು ಮತ್ತು ಟೆಲಿಫೋನ್ ವೆಚ್ಚಗಳ ಮೇಲೂ ಈ ಮಿತವ್ಯಯ ಆದೇಶಗಳನ್ನು ಅನ್ವಯಿಸಲಾಗುವುದು.

ಮದ್ಯಪಾನ ನೀತಿ

೧೧೯. ಮದ್ಯದ ಬಗ್ಗೆ ಮನುಷ್ಯನಿಗಿರುವ ಮೋಹವನ್ನು ಬಂಡವಾಳ ಮಾಡಿಕೊಂಡು ಆತನನ್ನು ನಿರ್ದಯವಾಗಿ ಶೋಷಿಸುವುದು ಈ ಸರ್ಕಾರದ ಅಬಕಾರಿ ನೀತಿಯಲ್ಲ. ವ್ಯಕ್ತಿಗಳ ಆರೋಗ್ಯ ಅದರಲ್ಲೂ ಯುವಜನತೆಯ ಕಲ್ಯಾಣ ಮತ್ತು ಕುಟುಂಬಗಳ ಕಲ್ಯಾಣ ನನಗೆ ಎಲ್ಲಕ್ಕಿಂತ ಹೆಚ್ಚಿನದು. ಹೀಗಾಗಿ, ಬಾರ್ ಮತ್ತು ರೆಸ್ಟೋರೆಂಟ್‌ಗಳಲ್ಲಿ ೨೧ ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮದ್ಯ ಸರಬರಾಜು ಮಾಡುವುದನ್ನು ನಿಷೇಧಿಸಲು ಕ್ರಮಗಳನ್ನು ನಾನು ಈಗಾಗಲೇ ಕೈಗೊಂಡಿದ್ದೇನೆ. ಶೈಕ್ಷಣಿಕ ಸಂಸ್ಥೆಗಳ, ಆರಾಧನಾ ಸ್ಥಳಗಳ ಮತ್ತು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿಗಳ ಬಳಿಯಲ್ಲಿ ಮದ್ಯದಂಗಡಿಗಳನ್ನು ತೆರೆಯುವುದರ ಬಗ್ಗೆ ಈಗಾಗಲೇ ನಿಷೇಧ ವಿಧಿಸಲಾಗಿದ್ದು ಈಗ ಸರ್ಕಾರಿ ಕಚೇರಿಗಳ, ಆಸ್ಪತ್ರೆಗಳ ಬಳಿಯಲ್ಲಿ ಮತ್ತು ರಾಷ್ಟ್ರೀಯ ಹೆದ್ದಾರಿಗಳಲ್ಲಿ ಅಂಥ ಅಂಗಡಿಗಳನ್ನು ತೆರೆಯುವುದರ ಮೇಲೂ ಈ ನಿಷೇಧ ವಿಧಿಸಲಾಗಿದೆ ಉತ್ತಮ ಜೀವನ ನಡೆಸಲು ಪ್ರೋತ್ಸಾಹಿಸುವಂತೆ ಮದ್ಯಪಾನದ ಬಗ್ಗೆ ಸಂಯಮ ಮೂಡಿಸುವುದು ನನ್ನ ಸರ್ಕಾರದ ತತ್ವವಾಗಿದೆ.

ಜಮೆಗಳು

೧೨೦. ತೆರಿಗೆ ವಿಧಿಸುವ ವಿಷಯದಲ್ಲಿ, ನಾನು ಮತ್ತೆ ಮತ್ತೆ ಹೇಳಬಯಸುವ ಒಂದು ಸಂಗತಿಯೆಂದರೆ, ಹೊಸ ತೆರಿಗೆಗಳನ್ನು ವಿಧಿಸದೆಯೇ ಅಥವಾ ತೆರಿಗೆ ದರಗಳನ್ನು ಹೆಚ್ಚಿಸದೆಯೇ ಈಗ ಇರುವ ತೆರಿಗೆ ಕಾನೂನುಗಳನ್ನೇ ಕಟ್ಟುನಿಟ್ಟಾಗಿ ಹಾಗೂ ನಿಷ್ಪಕ್ಷಪಾತವಾಗಿ ಜಾರಿಗೊಳಿಸುವ ಮೂಲಕ ಸರ್ಕಾರಕ್ಕೆ ಹೆಚ್ಚು ತೆರಿಗೆ ಸಂಗ್ರಹಿಸುವುದು ನನ್ನ ಗುರಿ. ಪ್ರಚಲಿತ ತೆರಿಗೆ ಪದ್ಧತಿ ಕುರಿತಂತೆ ಹಲವಾರು ಗುಂಪುಗಳಿಂದ ಹಾಗೂ ಸಂಘಸಂಸ್ಥೆಗಳಿಂದ ನನಗೆ ಹಲವಾರು ಮನವಿಗಳು ಬಂದಿವೆ. ವಾಣಿಜ್ಯ ತೆರಿಗೆಗಳಿಗೆ ಸಂಬಂಧಿಸಿದಂತೆ ತೆರಿಗೆ ಸದ್ಧತಿ, ತೆರಿಗೆ ದರಗಳು ಮುಂತಾದವನ್ನು ಸಮಂಜಸಗೊಳಿಸುವ ಬಗ್ಗೆ ಅತ್ಯಮೂಲ್ಯ ಸಲಹೆಗಳು ಬಂದಿವೆ. ಸಮಂಜಸಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದರೆ ಸಮಂಜಸಗೊಳಿಸುವ ಪ್ರಕ್ರಿಯೆ ನಿರಂತರವಾದುದು. ಆದ್ದರಿಂದ ಈ ಬಾರಿ ಸಾಧ್ಯವಾದಷ್ಟು ಮಟ್ಟಿಗೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮದ ಅಡಿಯಲ್ಲಿ ಏಕಹಂತ ತೆರಿಗೆ ಪದ್ಧತಿಯನ್ನು ಜಾರಿಗೆ ತರಲು ಉದ್ದೇಶಿಸಿದ್ದೇನೆ.

ಮಾರಾಟ ತೆರಿಗೆ

೧೨೧. ಸುಧಾರಣಾ ಕ್ರಮದ ಅಂಗವಾಗಿ ಮದ್ಯ, ಸ್ಟೇನ್‌ಲೇಸ್ ಸ್ಟೀಲ್ ವಸ್ತುಗಳು ಮತ್ತು ಗಾಜಿನ ಖಾಲಿ ಬಾಟಲಿಗಳನ್ನು ಬಿಟ್ಟು ಇದುವರೆವಿಗೂ ಶೇಕಡ ೭ರ ಬಹುಹಂತದ ತೆರಿಗೆಗೆ ಭಾಧ್ಯವಾಗಿದ್ದ ಮಿಕ್ಕೆಲ್ಲಾ ವಸ್ತುಗಳನ್ನು ಶೇಕಡ ೮ರ ಏಕ ಹಂತದ ತೆರಿಗೆ ವ್ಯಾಪ್ತಿಗೆ ತರಲು ನಾನು ಉದ್ದೇಶಿಸಿದ್ದೇನೆ. ಹಾಗೆ ಮಾಡುವಾಗ ಅಂತಹ ಕೆಲವುವಸ್ತುಗಳಿಗೆ, ಹಿಂದೆ ಕೊಟ್ಟಿದ್ದ ತೆರಿಗೆ ವಿನಾಯಿತಿಯನ್ನು ಹಾಗೂ ಕೆಲವು ವಸ್ತುಗಳ ಮೇಲಿನ ತೆರಿಗೆ ಇಳಿತವನ್ನೂ ಅನುಬಂಧ III ರಲ್ಲಿ ಸೂಚಿಸಿರುವಂತೆ ಕೆಲವು ಮಾರ್ಪಾಟಿನೊಂದಿಗೆ ಮುಂದುವರೆಸಲು ನಾನು ಉದ್ದೇಶಿಸಿದ್ದೇನೆ.

೧೨೨. ಈ ಮುಂದೆ ಹೇಳಿರುವ ವಸ್ತುಗಳ ಮೇಲೆ ಅಂತಿಮ ಮಾರಾಟದ ಹಂತದಲ್ಲಿ ವಿಧಿಸುವ ತೆರಿಗೆಯನ್ನು ರದ್ದು ಮಾಡಲು ನಾನು ಉದ್ದೇಶಿಸಿದ್ದೇನೆ:

(i) ವಿದ್ಯುತ್ ಉಪಕರಣಗಳು, ಸಾಧನಗಳು ಮತ್ತು ಸಲಕರಣೆಗಳು.

(ii) ಕಾರ್ಬನ್, ಬ್ಲಾಟಿಂಗ್ ಪೇಪರ್, ಮುಂತಾದ ಎಲ್ಲಾ ಬಗೆಯ ಪೇಪರ್, ಪೇಪರ್ ಬೋರ್ಡ್, ಪಲ್ಪ್ ಬೋರ್ಡ್ ಮುಂತಾದವು ಮತ್ತು ಸೆಲ್ಲೋಫೇನ್.

(iii) ಪ್ಲಾಸ್ಟಿಕ್ ಹರಳುಗಳು (ಗ್ರ್ಯಾನ್ಯೂಲ್ಸ್) ಮತ್ತು ಎಲ್ಲಾ ತರಹದ ಮತ್ತು ಬಗೆಯ ಪ್ಲಾಸ್ಟಿಕ್ ವಸ್ತುಗಳು.
(iv) ಡೀಸೆಲ್ ಎಂಜಿನ್‌ಗಳು.
(v) ಗಾಜಿನ ಶೀಟುಗಳು.
(vi) ಬಾಲ್ ಅಥವಾ ರೋಲರ್ ಬೆರಿಂಗ್‌ಗಳು (ಎಲ್ಲಾ ಬಗೆಯವು).

೧೨೩. ಪ್ರಾದೇಶಿಕ ಸಮತೆಯನ್ನು ತರಲು ಮತ್ತು ವ್ಯಾಪಾರ ಪಲ್ಲಟವಾಗುವುದನ್ನು ತಡೆಯಲು, ಕೆಲವು ವಸ್ತುಗಳ ಮೇಲಿನ ಮಾರಾಟ ತೆರಿಗೆ ದರವನ್ನು ಮಾರ್ಪಾಡು ಮಾಡಲು ನಾನು ಉದ್ದೇಶಿಸಿದ್ದೇನೆ. ಅಂತಹ ವಸ್ತುಗಳ ಪಟ್ಟಿ ಮತ್ತು ಉದ್ದೇಶಿತ ದರಗಳನ್ನು ಅನುಬಂಧ ಛರಿ ರಲ್ಲಿ ಕೊಡಲಾಗಿದೆ.

೧೨೪. ವ್ಯಾಪಾರ ಪಲ್ಲಟವಾಗುವುದನ್ನು ತಡೆಯಲು, ಸೈಡ್‌ಬಾಡಿಯಿರುವ ಟ್ರಕ್-ಬಸ್ ಚಾಸಿಗಳ ಮತ್ತು, ಲಘು ಮತ್ತು ಭಾರಿ ಸರಕು ವಾಹನಗಳ ಮಾರಾಟದ ಮೇಲೆ ತೆರಬೇಕಾದ ವಹಿವಾಟು ತೆರಿಗೆಗೆ ವಿನಾಯಿತಿ ನೀಡಲು ನಾನು ಉದ್ದೇಶಿಸಿದ್ದೇನೆ.

೧೨೫. ವ್ಯಾಪಾರ ಪಲ್ಲಟವಾಗುವುದನ್ನು ತಡೆಯಲು, ೧೯೯೨-೯೩ನೇ ವರ್ಷದಲ್ಲಿ ತ್ರಿಚಕ್ರ ವಾಹನಗಳ (ಆಟೋರಿಕ್ಷಾಗಳ) ಮೇಲಿನ ತೆರಿಗೆಯನ್ನು ಒಂದು ವರ್ಷದ ಅವಧಿಗೆ ಶೇಕಡ ೫ಕ್ಕೆ ಇಳಿಸಲಾಗಿತ್ತು. ತೆರಿಗೆ ಇಳಿತವು ತೆರಿಗೆ ಸಂಗ್ರಹಣೆಯಲ್ಲಿ ಗಣನೀಯ ಹೆಚ್ಚಳ ಉಂಟುಮಾಡಿದೆ. ಆದುದರಿಂದ, ಶೇಕಡ ೫ರ ಇಳಿಸಿದ ತೆರಿಗೆ ದರವನ್ನು ಇನ್ನೂ ಒಂದು ವರ್ಷ ಮುಂದುವರೆಸಲು ನಾನು ಉದ್ದೇಶಿಸಿದ್ದೇನೆ.

೧೨೬. ರಿಯಾಯಿತಿ ದರದ ಪ್ರಯೋಜನ ಪಡೆಯುವ ಸಲುವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳು ಬೇರೆ ರಾಜ್ಯಗಳಿಂದ ಸರಕುಗಳನ್ನು ಖರೀದಿಸುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಆದುದರಿಂದ, ರಾಜ್ಯದಲ್ಲಿನ ಸರ್ಕಾರಿ (ಕೇಂದ್ರ ಮತ್ತು ರಾಜ್ಯ) ಇಲಾಖೆಗಳಿಗೆ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಮಾರುವ ಮರಮುಟ್ಟು, ಪೆಟ್ರೋಲ್, ಡೀಸಲ್ ಮತ್ತು ಇತರ ಪೆಟ್ರೋಲಿಯಂ ಪದಾರ್ಥಗಳನ್ನು ಬಿಟ್ಟು, ಮಿಕ್ಕ ವಸ್ತುಗಳ ಮೇಲಿನ ಮಾರಾಟ ತೆರಿಗೆಯನ್ನು ಶೇಕಡ ೪ಕ್ಕೆ ಇಳಿಸಲು ನಾನು ಉದ್ದೇಶಿಸಿದ್ದೇನೆ.

೧೨೭. ಪ್ರಸ್ತುತ ನೋಟ್ ಪುಸ್ತಕಗಳು, ಎಕ್ಸರ್‌ಸೈಸ್ ಪುಸ್ತಕಗಳು, ಕಾಪಿ ಪುಸ್ತಕಗಳು ಮತ್ತು ಔಟ್‌ಲೈನ್ ಮ್ಯಾಪ್‌ಗಳಿಗೆ ತೆರಿಗೆ ವಿನಾಯಿತಿ ಇದೆ. ನೋಟ್ ಪುಸ್ತಕಗಳ ತಯಾರಕರಲ್ಲಿ ಕೆಲವರು, ಕೆಲ ಪೇಪರ್ ವ್ಯಾಪಾರಿಗಳಿಗೆ ತಮ್ಮ ಹೆಸರನ್ನು ನೀಡಿ ತೆರಿಗೆ ತಪ್ಪಿಸಲು ಸಹಾಯ ಮಾಡುತ್ತಿರುವುದು ಮತ್ತು ಉತ್ತೇಜನ ನೀಡುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಆದುದರಿಂದ, ಕರ್ನಾಟಕ ಮಾರಾಟ ತೆರಿಗೆಗೆ ಒಳಪಟ್ಟ ಪೇಪರ್ ಮತ್ತು ಪೇಪರ್ ಬೋರ್ಡ್‌ನಿಂದ ಮಾಡಿದ ಸದರಿ ವಸ್ತುಗಳಿಗೆ ಮಾತ್ರ ತೆರಿಗೆ ವಿನಾಯಿತಿ ನೀಡಲು ನಾನು ಉದ್ದೇಶಿಸಿದ್ದೇನೆ.

೧೨೮. ಪ್ರಸ್ತುತ ವ್ಯಾಪಾರಿಯೊಬ್ಬ ವ್ಯವಹರಿಸುವ ಸರಕುಗಳು ತೆರಿಗೆ ಅನುಸೂಚಿಯ ವಿವಿಧ ನಮೂದುಗಳಡಿಯಲ್ಲಿ ಬರುತ್ತಿದ್ದ, ವಿವಿಧ ತೆರಿಗೆ ದರಗಳಿಗೆ ಒಳಪಟ್ಟಿವೆ. ಅಂತಹ ವಸ್ತುಗಳಲ್ಲಿ ಕೆಲವನ್ನು ಒಂದೇ ನಮೂದುಗಳಡಿಯಲ್ಲಿ ತರಲು ಮತ್ತು ಒಂದೇ ತೆರಿಗೆ ದರವನ್ನು ವಿಧಿಸಲು ನಾನು ಉದ್ದೇಶಿಸಿದ್ದೇನೆ. ಒಂದೇ ನಮೂದು ಮತ್ತು ಒಂದೇ ತೆರಿಗೆ ದರದಡಿಯಲ್ಲಿ ತರಲು ನಾನು ಉದ್ದೇಶಿಸಿರುವ ವಸ್ತುಗಳನ್ನು ಅನುಬಂಧ V ರಲ್ಲಿ ಕೊಡಲಾಗಿದೆ.

೧೨೯. ಸರಕುಗಳ ಮಾಲೀಕರು ಅಥವಾ ಸರಕು ಸಾಗಣಿಕೆದಾರರ ಮೇಲೆ ರಾಜ್ಯದಲ್ಲಿನ ದೂರದ ಚೆಕ್‌ಪೋಸ್ಟ್‌ಗಳಲ್ಲಿ ತೆಗೆದುಕೊಂಡ ಕ್ರಮಗಳಿಗೆ ಸಂಬಂಧಪಟ್ಟಂತೆ, ಅವರುಗಳು ತಮ್ಮ ವ್ಯಾಪಾರ ಸ್ಥಳಕ್ಕೆ ಹತ್ತಿರವಾದ ಸ್ಥಳದಲ್ಲಿರುವ ಅಧಿಕೃತ ಅಧಿಕಾರಿಯ ಮುಂದೆ

ಹಾಜರಾಗಲು ಅವಕಾಶ ಕಲ್ಪಿಸುವ ಸಲುವಾಗಿ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಗೆ ತಿದ್ದುಪಡಿ ತರಲು ನಾನು ಉದ್ದೇಶಿಸಿದ್ದೇನೆ.

ವಿನಾಯಿತಿ ಮತ್ತು ರಿಯಾಯಿತಿಗಳು

೧೩೦. ವಿನಾಯಿತಿ ಮತ್ತು ರಿಯಾಯಿತಿಗಳನ್ನು ಪ್ರಸ್ತಾವಿಸುವಾಗ ಅವು ಅರ್ಹ ವರ್ಗಗಳಾದ ರೈತರು, ಮೀನುಗಾರರು, ಮಹಿಳೆಯರು ಮತ್ತು ಸಮಾಜದ ಬಡ ವರ್ಗಗಳಿಗೆ ತಲುಪುತ್ತವೆಂಬುದನ್ನು ನಾನು ಖಚಿತಪಡಿಸಿಕೊಂಡಿದ್ದೇನೆ.

ವಿನಾಯಿತಿಗಳು

೧೩೧. ಮುಂದೆ ಹೇಳಿರುವ ವಸ್ತುಗಳನ್ನು ಮಾರಾಟ ತೆರಿಗೆಯಿಂದ ವಿನಾಯಿತಿ ಮಾಡಲು ನಾನು ಉದ್ದೇಶಿಸಿದ್ದೇನೆ:

(i) ಒಂದು ಸಾವಿರ ರೂಪಾಯಿಗಳವರೆಗಿನ ಚಿನ್ನದ ತಾಳಿ ಸರ
(ii) ಎಲ್ಲಾ ತರಹದ ನಕಲಿ ಆಭರಣಗಳು
(iii) ಹಣ್ಣಿನ ಬಿತ್ತನೆ ಬೀಜಗಳು
(iv) ಕೃಷಿ ತುಂತುರು ಸಲಕರಣೆಗಳು ಮತ್ತು ಹನಿನೀರಾವರಿ ಸಲಕರಣೆಗಳು ಹಾಗೂ ಅವುಗಳ ಬಿಡಿಭಾಗಗಳು (ಆಯಿಲ್ ಎಂಜಿನ್‌ಗಳು, ವಿದ್ಯುತ್ ಮೋಟಾರುಗಳು ಹಾಗೂ ಪೈಪುಗಳು ಮತ್ತು ಜೋಡಣೆಗಳನ್ನು ಹೊರತುಪಡಿಸಿ)
(v) ಸಂಸ್ಕರಿಸದ ಕತ್ತಾಳೆ ನಾರು
(vi) ಮೀನಿನ ಮರಿಗಳು, ಮೀನು ಬಲೆಗಳು, ಯಾಂತ್ರೀಕೃತವಲ್ಲದ ನಾಡ ದೋಣಿಗಳು ಮತ್ತು ಪರ್ಸೀನರ್‌ಗಳು ಮತ್ತು ಗಿಲ್‌ನೆಟ್ಟರ್‌ಗಳನ್ನು ಒಳಗೊಂಡಂತೆ ಮೀನುಗಾರಿಕೆಯ ಅವಶ್ಯ ವಸ್ತುಗಳು (ಆದರೆ ಟ್ರಾಲರ್‌ಗಳು ಮತ್ತು ಇತರ ಯಾಂತ್ರೀಕೃತ ದೋಣಿಗಳನ್ನು ಹೊರತುಪಡಿಸಿ)
(vii) ಇಂಧನವಾಗಿ ಬಳಸುವ ಭತ್ತ, ಕಡಲೆಕಾಯಿ ಮತ್ತು ಕಾಫಿ ಬೀಜಗಳ ಹೊಟ್ಟು.
(viii) ಗೋಧಿಯ ತೌಡು.
(ix) ಪೊರಕೆಗಳು
(x) ೧೫೦ ರೂಪಾಯಿಗಳಿಗಿಂತ ಹೆಚ್ಚು ಬೆಲೆಯಿರದ ಕನ್ನಡಕಗಳು (ಲೆನ್ಸ್ ಮತ್ತು ಕಟ್ಟುಗಳನ್ನು ಸೇರಿಸಿ)

೧೩೨. ಮುಂದಿನ ಕೆಲವು ವಹಿವಾಟುಗಳಿಗೆ ತೆರಿಗೆ ವಿನಾಯಿತಿ ನೀಡಲು ನಾನು ಉದ್ದೇಶಿಸಿದ್ದೇನೆ.

(i) ಪ್ರಮಾಣೀಕರಿಸಿದ ಮತ್ತು ರಾಸಾಯನಿಕವಾಗಿ ಸಂಸ್ಕರಿಸಿದ ಬೀಜಗಳ ಉತ್ಪಾದನೆಗಾಗಿ ಖರೀದಿಸಿದ ಬಿತ್ತನೆ ಬೀಜಗಳ ಹಾಗೂ ವಿಷವೆಂದು ನಿಜವಾಗಿಯೂ ಗುರ್ತಿಸಿದ ಬೀಜಗಳ ವಹಿವಾಟು.
(ii) ರಾಜ್ಯದಲ್ಲಿ, ಅಗರಬತ್ತಿ ತಯಾರಿಕೆಯಲ್ಲಿ ಬಳಸಲು ಕಚ್ಚಾಬತ್ತಿ ಮಾರುವ ಅಥವಾ ಖರೀದಿಸುವ ವಹಿವಾಟು.
(iii) ಕೇಂದ್ರ ಸರ್ಕಾರದ ಚಿನ್ನ ಮತ್ತು ಬೆಳ್ಳಿ ಉತ್ತೇಜನ ಮತ್ತು ಭರ್ತಿ (ರಿಪ್ಲೆನಿಶ್‌ಮೆಂಟ್) ಯೋಜನೆಯಡಿಯಲ್ಲಿ, ಕರ್ನಾಟಕದಲ್ಲಿನ ಚಿನ್ನದ ಆಭರಣಗಳ ರಫ್ತುಗಾರರಿಗೆ ಮೆಟಲ್ಸ್ ಮತ್ತು ಮಿನರಲ್ಸ್ ಟ್ರೇಡಿಂಗ್ ಕಾರ್ಪೊರೇಶನ್ ನವರಿಂದ ಚಿನ್ನದ ಮಾರಾಟ.

೧೩೩. ಚಿನ್ನ ಮತ್ತು ಬೆಳ್ಳಿ ವಸ್ತುಗಳ ತಯಾರಕರು ಖರೀದಿ ಮಾಡುವ ಹಳೇ ಚಿನ್ನ ಮತ್ತು ಬೆಳ್ಳಿ ವಸ್ತುಗಳ ಮೇಲೆ ತೆರಬೇಕಾದ ವಹಿವಾಟು ತೆರಿಗೆ ವಿನಾಯಿತಿ ನೀಡಲು ನಾನು ಉದ್ದೇಶಿಸಿದ್ದೇನೆ.

ತೆರಿಗೆ ಇಳಿತ

೧೩೪. ರಾಜ್ಯದಲ್ಲಿ ವಾಣಿಜ್ಯ ಮತ್ತು ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಸಲುವಾಗಿ ಹಲವಾರು ವಸ್ತುಗಳ ಮೇಲಿನ ಮಾರಾಟ ತೆರಿಗೆ ದರಗಳನ್ನು ಇಳಿಸಲು ನಾನು ಉದ್ದೇಶಿಸಿದ್ದೇನೆ. ಸದರಿ ವಸ್ತುಗಳ ಪಟ್ಟಿ ಮತ್ತು ಉದ್ದೇಶಿತ ದರಗಳನ್ನು ಅನುಬಂಧ VI ರಲ್ಲಿ ಕೊಡಲಾಗಿದೆ.

೧೩೫. ನಮ್ಮ ಉತ್ಪಾದಕರು ಅಂತರ್ ರಾಜ್ಯ ವ್ಯಾಪಾರದಲ್ಲಿ ಸ್ಪರ್ಧೆ ನಡೆಸಲು ಅನುವು ಮಾಡಿಕೊಡುವ ಸಲುವಾಗಿ ಕೆಲವು ವಸ್ತುಗಳ ಮೇಲಿನ ಕೇಂದ್ರ ಮಾರಾಟ ತೆರಿಗೆಯನ್ನು ಇಳಿಸಲು ನಾನು ಉದ್ದೇಶಿಸಿದ್ದೇನೆ. ಅಂತಹ ವಸ್ತುಗಳ ಪಟ್ಟಿ ಮತ್ತು ಪ್ರಸ್ತಾವಿತ ತೆರಿಗೆ ದರಗಳನ್ನು ಅನುಬಂಧ VII ರಲ್ಲಿ ಕೊಡಲಾಗಿದೆ.

ಅಧಿಕ ಸಂಪನ್ಮೂಲ ಕ್ರೋಢೀಕರಣ ಕ್ರಮಗಳು

೧೩೬. ಕೆಲವು ವಸ್ತುಗಳ ಮೇಲೆ ತೆರಿಗೆ ವಿಧಿಸಲು ಹಾಗೂ ತೆರಿಗೆ ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ. ಅಂತಹ ವಸ್ತುಗಳ ಪಟ್ಟಿ ಮತ್ತು ಪ್ರಸ್ತಾವಿತ ತೆರಿಗೆ ದರಗಳನ್ನು ಅನುಬಂಧ VIII ರಲ್ಲಿ ಕೊಡಲಾಗಿದೆ.

೧೩೭. ಅನುಬಂಧ IX ರಲ್ಲಿ ಸೂಚಿಸಿರುವಂತೆ ಕರಾರು ಕಾಮಗಾರಿಗಳ ಮೇಲೆ ತೆರಿಗೆ ವಿಧಿಸಲು ಕೂಡ ನಾನು ಉದ್ದೇಶಿಸಿದ್ದೇನೆ.

೧೩೮. ಈ ಮೇಲಿನ ಕ್ರಮಗಳಿಂದ ೨೫೮ ಲಕ್ಷ ರೂಪಾಯಿಗಳ ಹೆಚ್ಚುವರಿ ಆದಾಯವನ್ನು ನಿರೀಕ್ಷಿಸಲಾಗಿದೆ.

೧೩೯. ತೆರಿಗೆ ಆಡಳಿತ ಕಾರ್ಯಭಾರವು ಇನ್ನಷ್ಟು ಪರಿಣಾಮಕಾರಿಯಾಗಿರುವಂತೆ ಮಾಡಲು ಕರ್ನಾಟಕ ಮಾರಾಟ ತೆರಿಗೆ ಕಾಯಿದೆಯ ಕೆಲವು ನಿಯಮಗಳಿಗೆ ತಿದ್ದುಪಡಿ ಮಾಡಲು ನಾನು ಉದ್ದೇಶಿಸಿದ್ದೇನೆ. ಸದನದ ಈ ಅಧಿವೇಶನದಲ್ಲಿ ಮಂಡಿಸಲಿರುವ ತಿದ್ದುಪಡಿ ಮಸೂದೆಯಲ್ಲಿ ಅವು ಇರುತ್ತವೆ.

ವೃತ್ತಿ ತೆರಿಗೆ

೧೪೦. ಮುಂದಿನ ಕೆಲ ವ್ಯಕ್ತಿಗಳಿಗೆ ವೃತ್ತಿ ತಲಗ ವಿನಾಯಿತಿ ನೀಡಲು ನಾನು ಉದ್ದೇಶಿಸಿದ್ದೇನೆ.

(i) ಶಿಕ್ಷಣ ಸಂಸ್ಥೆಗಳು ಮತ್ತು ಟ್ಯುಟೋರಿಯಲ್ ಕಾಲೇಜುಗಳನ್ನು ಸಂಸ್ಥೆಗಳನ್ನು ನಡೆಸುತ್ತಿರುವ ವ್ಯಕ್ತಿಗಳು

(ii) ತಿಂಗಳಿಗೆ ೨,೦೦೦ ರೂಪಾಯಿಗಳಿಗಿಂತ ಹೆಚ್ಚು ಸಂಬಳ ಪಡೆಯದ ಮಹಿಳಾ ನೌಕರರು.

(iii) ಅಂಗವಿಕಲರು.

೧೪೧. ಚಾರ್ಟರ್ಡ್ ಅಕೌಂಟೆಂಟರು ತೆರಬೇಕಾದ ವೃತ್ತಿ ತೆರಿಗೆಯನ್ನು ವರ್ಷಕ್ಕೆ ೨,೨೦೦ ರೂಪಾಯಿಗಳಿಂದ ೧,೫೦೦ ರೂಪಾಯಿಗಳಿಗೆ ಇಳಿಸಲು ನಾನು ಉದ್ದೇಶಿಸಿದ್ದೇನೆ.

೧೪೨. ಕೆಲವು ವ್ಯಕ್ತಿಗಳು ತೆರಬೇಕಾದ ವೃತ್ತಿ ತೆರಿಗೆಯನ್ನು ಹೆಚ್ಚಿಸಲು ನಾನು ಉದ್ದೇಶಿಸಿದ್ದೇನೆ.ಅಂತಹ ವ್ಯಕ್ತಿಗಳ ಪಟ್ಟಿಯನ್ನು ಅನುಬಂಧ x ರಲ್ಲಿ ಕೊಡಲಾಗಿದೆ. ಈ ಕ್ರಮದಿಂದ ೩೦೦ ಲಕ್ಷ ರೂಪಾಯಿಗಳ ಹೆಚ್ಚುವರಿ ಆದಾಯ ಬರುವ ನಿರೀಕ್ಷೆಯಿದೆ.

ಮನೋರಂಜನ ತೆರಿಗೆ

೧೪೩. ಚಿತ್ರಮಂದಿರಗಳ ನಿರ್ವಹಣೆ, ಸಂಬಳ ಸೌಲಭ್ಯಗಳು, ಆಸ್ತಿ ತೆರಿಗೆ, ವಿದ್ಯುತ್ ಶುಲ್ಕ, ಮುಂತಾದವುಗಳು ದಿನೇ ದಿನೇ ಹೆಚ್ಚುತ್ತಿರುವುದರಿಂದಾಗಿ ಖರ್ಚನ್ನು ನಿಭಾಯಿಸಲು ಚಿತ್ರಮಂದಿರಗಳ ಮಾಲೀಕರು ಕಷ್ಟಪಡುತ್ತಿದ್ದಾರೆಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಮನವಿ ಮಾಡಿಕೊಂಡಿದೆ ಹಾಗೂ ಚಿತ್ರಮಂದಿರಗಳ ಮಾಲೀಕರು ಒಂದು ನಿರ್ದಿಷ್ಟ ಮೊತ್ತದ ತೆರಿಗೆ ರಹಿತ ಸೇವಾ ವೆಚ್ಚವನ್ನು ವಸೂಲಿ ಮಾಡಲು ಅವಕಾಶ ನೀಡಬೇಕೆಂದು ಅದು ಸಲಹೆ ಮಾಡಿದೆ. ಆ ಸಲಹೆಯನ್ನು ನಾನು ಪರಿಶೀಲಿಸಿದ್ದೇನೆ. ಚಿತ್ರಮಂದಿರಗಳ ಮಾಲೀಕರು, ಪ್ರಸ್ತುತ ಪ್ರವೇಶ ದರದ ಜೊತೆಗೆ, ಈ ಮುಂದೆ ಹೇಳಿರುವ ದರಗಳಲ್ಲಿ ಸೇವಾ ಶುಲ್ಕವನ್ನು ವಸೂಲಿ ಮಾಡಲು ಅನುಮತಿ ನೀಡಲು ನಾನು ಉದ್ದೇಶಿಸಿದ್ದೇನೆ ಹಾಗೂ ಸದರಿ ಸೇವಾ ಶುಲ್ಕಕ್ಕೆ ಮನೋರಂಜನಾ ತೆರಿಗೆಯಿಂದ ವಿನಾಯಿತಿ ನೀಡಲು ನಾನು ಉದ್ದೇಶಿಸಿದ್ದೇನೆ:

(i) ಹವಾ ನಿಯಂತ್ರಣ ಮತ್ತು ತಂಪು ಹವಾ ವ್ಯವಸ್ಥೆಯಿರುವ ಚಿತ್ರಮಂದಿರಗಳು	ಪ್ರತಿ ಪ್ರವೇಶ ದರದ ಮೇಲೆ ಗರಿಷ್ಠ ೫೦ ಪೈಸೆ
(ii) ಹವಾ ನಿಯಂತ್ರಣ ಮತ್ತು ತಂಪು ಹವಾ ವ್ಯವಸ್ಥೆಯಿರುವ ಹಾಗೂ ಸಂಚಾರಿ ಚಲನ ಚಿತ್ರಮಂದಿರಗಳನ್ನು ಬಿಟ್ಟು ಮಿಕ್ಕ ಚಲನ ಚಿತ್ರ ಮಂದಿರಗಳು	ಪ್ರತಿ ಪ್ರವೇಶದರದ ಮೇಲೆ ಗರಿಷ್ಠ ೨೫ ಪೈಸೆ

೧೪೪. ಪ್ರಸ್ತುತ, ಡಿಶ್ ಆ್ಯಂಟನಾಗಳ ಮತ್ತು ಕೇಬಲ್ ಟಿ.ವಿ. ಜಾಲಗಳ ಮೂಲಕ ಸಾರ್ವಜನಿಕರಿಗೆ ಮನೋರಂಜನ ಸೌಲಭ್ಯ ನೀಡುತ್ತಿರುವವರ ಮೇಲೆ ಮನೋರಂಜನಾ ತೆರಿಗೆ ವಿಧಿಸಿಲ್ಲ. ಅಂಥವರ ಮೇಲೆ ಈ ಮುಂದೆ ಹೇಳಿರುವ ದರಗಳಲ್ಲಿ ಮನೋರಂಜನಾ ತೆರಿಗೆಯನ್ನು ವಿಧಿಸಲು ನಾನು ಉದ್ದೇಶಿಸಿದ್ದೇನೆ.

(i) ಡಿಶ್ ಆ್ಯಂಟೆನಾ ಅಥವಾ ಡಿಶ್ ಆ್ಯಂಟೆನಾ ಮತ್ತು ಕೇಬಲ್ ಟಿ.ವಿ. ಜಾಲಗಳ ಮೂಲಕ ಮನೋರಂಜನಾ ಸೌಲಭ್ಯ ನೀಡುತ್ತಿದ್ದರೆ.	ಪ್ರತಿ ಜೋಡಣೆಗೆ ತಿಂಗಳಿಗೆ ೨೦ ರೂ.ಗಳು
(ii) ಕೇಬಲ್ ಟಿ.ವಿ. ಜಾಲಗಳ ಮೂಲಕ ಮಾತ್ರವೇ. ಮನೋರಂಜನಾ ಸೌಲಭ್ಯ ನೀಡುತ್ತಿದ್ದರೆ.	ಪ್ರತಿ ಜೋಡಣೆಗೆ ತಿಂಗಳಿಗೆ ೧೫ ರೂ.ಗಳು

ಈ ಕ್ರಮದಿಂದ ಸುಮಾರು ೧೫೦ ಲಕ್ಷ ರೂಪಾಯಿಗಳ ಹೆಚ್ಚಿನ ವರಮಾನ ಬರುವ ನಿರೀಕ್ಷೆ ಇದೆ.

೧೪೫. ಮೂಲ ಮತ್ತು ಸೃಜನಾತ್ಮಕ ಕನ್ನಡ ಚಲನಚಿತ್ರಗಳ ತಯಾರಿಕೆಗೆ ಉತ್ತೇಜನ ನೀಡುವ ಸಲುವಾಗಿ, ಬೇರೆ ಭಾಷೆಗಳ ಡಬ್ಬಿಂಗ್ ಚಿತ್ರಗಳೂ ಸೇರಿದಂತೆ, ಬೇರೆ ಭಾಷೆಗಳ ಚಲನ ಚಿತ್ರಗಳ ಕನ್ನಡ ರೀಮೇಕ್ ಚಿತ್ರಗಳಿಗೆ ಹಾಲಿ ಕೊಡುತ್ತಿರುವ ಮನೋರಂಜನಾ ತೆರಿಗೆ ರಿಯಾಯಿತಿಯನ್ನು ಹಿಂತೆಗೆದುಕೊಳ್ಳಲು ನಾನು ಉದ್ದೇಶಿಸಿದ್ದೇನೆ.

ವಿಲಾಸ ತೆರಿಗೆ

೧೪೬. ರಾಜ್ಯದಲ್ಲಿ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಕ್ರಮವಾಗಿ ಪ್ರತಿ ವಿನಾಯಿತಿ ಬಾಡಿಗೆ ಮಿತಿಯನ್ನು ೩೫ ರೂಪಾಯಿಯಿಂದ ೧೦೦ ರೂಪಾಯಿಗಳಿಗೆ ಏರಿಸಲು ನಾನು ಉದ್ದೇಶಿಸಿದ್ದೇನೆ ಮತ್ತು ಈ ಮುಂದೆ ಸೂಚಿಸಿರುವಂತೆ ವಿಲಾಸ ತೆರಿಗೆ ದರಗಳನ್ನು ಪರಿಷ್ಕರಿಸಲು ಸಹ ನಾನು ಉದ್ದೇಶಿಸಿದ್ದೇನೆ.

(i)	ವಸೂಲು ಮಾಡುವ ಲಾಡ್ಜಿಂಗ್ ಶುಲ್ಕವು ದಿನಕ್ಕೆ ೧೦೦ ರೂ. ಗಳಿಗಿಂತ ಕಡಿಮೆ ಇರದಿದ್ದಲ್ಲಿ ಆದರೆ, ೨೦೦ ರೂ. ಗಳಿಗಿಂತ ಕಡಿಮೆಯಿದ್ದಲ್ಲಿ.	ಶೇಕಡಾ ೭.೫
(ii)	ಲಾಡ್ಜಿಂಗ್ ಶುಲ್ಕವು ದಿನಕ್ಕೆ ೨೦೦ ರೂ. ಗಳಿಗಿಂತ ಕಡಿಮೆ ಇರದಿದ್ದಲ್ಲಿ, ಆದರೆ ೪೦೦ ರೂ.ಗಳಿಗಿಂತ ಕಡಿಮೆಯಿದ್ದಲ್ಲಿ	ಶೇಕಡ ೧೨.೫
(iii)	ಲಾಡ್ಜಿಂಗ್ ಶುಲ್ಕವು ೪೦೦ ರೂ.ಗಳಾಗಿದ್ದರೆ ಮತ್ತು ಅದಕ್ಕಿಂತ ಹೆಚ್ಚಿಗೆಯಿದ್ದಲ್ಲಿ.	ಶೇಕಡ ೧೫

ಪ್ರವೇಶ ತೆರಿಗೆ

೧೪೭. ಈ ಮುಂದೆ ಸೂಚಿಸಿರುವ ವಸ್ತುಗಳಿಗೆ ಪ್ರವೇಶ ತೆರಿಗೆ ವಿನಾಯಿತಿ ನೀಡಲು ನಾನು ಉದ್ದೇಶಿಸಿದ್ದೇನೆ:

(i) ಮೋಟಾರು ವಾಹನಗಳ ಡೀಸೆಲ್ ಇಂಜಿನ್‌ಗಳು
(ii) ಕೈಯಿಂದ ಮಾಡಿದ ಸ್ನಾನದ ಸಾಬೂನು
(iii) ಹಿಂದುಳಿದ ಕೈಗಾರಿಕಾ ಪ್ರದೇಶಗಳಲ್ಲಿ ಸ್ಥಾಪಿಸಿರುವ ಹೊಸ ಕೈಗಾರಿಕಾ ಘಟಕಗಳು ಖರೀದಿಸುವ ಕಚ್ಚಾ ವಸ್ತುಗಳು ಮತ್ತು ಮೆಷಿನರಿ ಹಾಗೂ ಅದರ ಬಿಡಿ ಭಾಗಗಳು (ನಿರ್ಧರಿಸಿದ ಅವಧಿಗೆ)

೧೪೮. ಮೇಲೆ ಪ್ರಸ್ತಾವಿಸಿದ ಕ್ರಮಗಳಿಂದಾಗಿ ವಿವಿಧ ತೆರಿಗೆ ಅಧಿನಿಯಮಗಳಿಗೆ ತಿದ್ದುಪಡಿ ಮಾಡುವ ಅವಶ್ಯಕತೆ ಇದೆ. ಸದರಿ ತಿದ್ದುಪಡಿಗಳೇ ಅಲ್ಲದೆ ಸುಧಾರಣಾ ಕ್ರಮವಾಗಿ ತರಲಿರುವ ಇತರೆ ಕೆಲವು ಬದಲಾವಣೆಗಳನ್ನು ಮುಂದೆ ಈ ಸದನದ ಪರಿಶೀಲನೆಗೆ ಮತ್ತು ಒಪ್ಪಿಗೆಗೆ ಮಂಡಿಸಲಾಗುವುದು.

ಅಬಕಾರಿ ಇಲಾಖೆ

೧೪೯. ೧೯೯೨-೯೩ನೆಯ ಸಾಲಿನ ಅಂದಾಜಿನಲ್ಲಿ ಅಬಕಾರಿ ಆದಾಯವು ೫೭೩ ಕೋಟಿ ಎಂದು ಅಂದಾಜು ಮಾಡಲಾಗಿತ್ತು. ಆದರೆ, ಅಬಕಾರಿ ಹರಾಜಿನಲ್ಲಿ ನಿರೀಕ್ಷಿದಷ್ಟು ಕಿಸ್ತು ಹಣ (ರೆಂಟಲ್ಸ್) ಬರದಿರುವ ಹಿನ್ನೆಲೆಯಲ್ಲಿ ಅದನ್ನು ೫೪೦ ಕೋಟಿ ರೂ.ಗಳಿಗೆ ಇಳಿಸಲಾಯಿತು. ೧೯೯೩-೯೪ನೇ ವರ್ಷದಲ್ಲಿ ೭೦೧.೫೪ ಕೋಟಿ ರೂ. ಗಳನ್ನು ಅಬಕಾರಿ ಆದಾಯವಾಗಿ ಸಂಗ್ರಹಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದ್ದು, ಇದು ಪ್ರಸ್ತುತ ೧೯೯೨-೯೩ನೇ ವರ್ಷದ ಅಂದಾಜಿನ ಮೊತ್ತಕ್ಕಿಂತ ಶೇಕಡಾ ೩೦ ರಷ್ಟು ಹೆಚ್ಚು. ಅಬಕಾರಿ ಕಾನೂನು ಮತ್ತು ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವ ಮತ್ತು ಅಬಕಾರಿ ಹರಾಜು ನಡೆಸುವಲ್ಲಿನ ಕಾರ್ಯವಿಧಾನವನ್ನು ಏಕರೂಪಗೊಳಿಸುವ ಮೂಲಕ ಈ ಹೆಚ್ಚುವರಿ ಆದಾಯವನ್ನು ನಿರೀಕ್ಷಿಸಲಾಗಿದೆ.

೧೫೦. ಲೈಸೆನ್ಸ್ ಫಿ ಹೆಚ್ಚಿಸಿರುವುದನ್ನು ಹಾಗೂ ಅದನ್ನು ಪೂರ್ವಾನ್ವಯವಾಗಿ ಜಾರಿಗೊಳಿಸುವುದನ್ನು, ಲೈಸೆನ್ಸ್ ಫೀಯು ಸಮಂಜಸವಾದುದಾಗಿಲ್ಲವೆಂದು ಹಾಗೂ ಸರ್ವೋಚ್ಚ ನ್ಯಾಯಾಲಯವು ಗೊತ್ತುಪಡಿಸಿರುವ ತತ್ವದ ಆಧಾರದ ಮೇಲೆ ಇಲಾಖೆಯು ನೀಡುವ ಸೇವೆಗೆ ಅದು ಪ್ರಮಾಣಬದ್ಧವಾಗಿಲ್ಲವೆಂದು ಪ್ರಶ್ನಿಸಿರುವ ಸುಮಾರು ೬೦೦೦ ರಿಟ್ ಅರ್ಜಿಗಳು ಉಚ್ಚ ನ್ಯಾಯಾಲಯದ ಮುಂದಿವೆ. ಆದ್ದರಿಂದ, ಲೈಸೆನ್ಸ್ ಫೀ ವಿಧಿಸುವ ವಿಧಾನವು ಹೆಚ್ಚು ಕಾರ್ಯಸಾಧ್ಯವಾಗುವಂತೆ ಮಾಡುವ ಹಾಗೂ ಕಾನೂನು ವ್ಯಾಜ್ಯಗಳನ್ನು ತಪ್ಪಿಸುವ ದೃಷ್ಟಿಯಿಂದ ಅನುಬಂಧ ಡಿ೬ ರಲ್ಲಿ ವಿವರಿಸಿರುವಂತೆ ತೆರಿಗೆ ಮತ್ತು ಲೈಸೆನ್ಸ್ ಶುಲ್ಕವನ್ನು ವಿಧಿಸಲು ಪ್ರಸ್ತಾಪಿಸಲಾಗಿದೆ.

೧೫೧. ನ್ಯಾಯಬಾಹಿರ ಚಟುವಟಿಕೆಗಳ ಮೇಲೆ ಕಟ್ಟುನಿಟ್ಟಾಗಿ ನಿಗಾ ಇಡಲಾಗುವುದು ಮತ್ತು ಇಲಾಖೆಯ ಜಾರಿ ವಿಭಾಗಕ್ಕೆ ಅಗತ್ಯವಿರುವ ಸೌಲಭ್ಯಗಳಾದ ವೈರ್‌ಲೆಸ್ ಸಂಪರ್ಕ, ಸಲಕರಣೆಗಳು, ಕಂಪ್ಯೂಟರ್‌ಗಳು, ವಾಹನಗಳು ಮತ್ತು ಇತರ ಸೌಕರ್ಯಗಳನ್ನು ಒದಗಿಸಿ ಅದರ ಚಟುವಟಿಕೆಗಳನ್ನು ಇನ್ನಷ್ಟು ಚುರುಕುಗೊಳಿಸಲಾಗುವುದು ಮತ್ತು ಆ ಮೂಲಕ ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಗಟ್ಟಿ ಸರ್ಕಾರದ ಆದಾಯವು ನಷ್ಟವಾಗುವುದನ್ನು ತಪ್ಪಿಸಲಾಗುವುದು.

೧೫೨. ಭಾರತೀಯ ಮದ್ಯಗಳ ಮೇಲೆ ಡಿಸ್ಟಲರಿ ಮತ್ತು ಸಗಟು ಮಾರಾಟ ಪಾಯಿಂಟ್‌ನಲ್ಲಿ ಪ್ರತ್ಯೇಕವಾಗಿ ಅಬಕಾರಿ ತೆರಿಗೆ ಮತ್ತು ಲೀಟರ್ ಫೀ ಗಳನ್ನು ವಿಧಿಸುವ ಈಗಿನ ಪದ್ಧತಿಯಲ್ಲಿ ಮಾರ್ಪಾಡು ಮಾಡಿ, ಲೀಟರ್ ಫೀಯನ್ನು ಅಬಕಾರಿ ತೆರಿಗೆಯೊಂದಿಗೆ ವಿಲೀನಗೊಳಿಸಲಾಗುವುದು. ಈ ವಿಧಾನವು ಹಾಲಿ ಇರುವ ಅನವಶ್ಯಕ ಕಾರ್ಯವಿಧಾನವನ್ನು ಕಡಿಮೆ ಮಾಡುವುದಲ್ಲದೆ ಒಂದೇ ಪಾಯಿಂಟ್‌ನಲ್ಲಿ ಸಕಾಲದಲ್ಲಿ ಆದಾಯ ಸಂಗ್ರಹವಾಗುವುದನ್ನು ಖಾತ್ರಿಪಡಿಸುತ್ತದೆ.

೧೫೩. ಅಧಿಕ ಸಂಖ್ಯೆಯಲ್ಲಿ ಬಿಡ್ಡುದಾರರು ಅಬ್ಕಾರಿ ಹರಾಜಿನಲ್ಲಿ ಭಾಗವಹಿಸಲು ಅನುಕೂಲ ಮಾಡಿಕೊಡುವ ಉದ್ದೇಶದಿಂದ, ಅಬ್ಕಾರಿ ಗುತ್ತಿಗೆ ನೋಂದಣಿ ಶುಲ್ಕವನ್ನು ೨೫,೦೦೦/- ರೂಪಾಯಿಯಿಂದ ೧,೦೦೦/- ರೂಪಾಯಿಗೆ ಇಳಿಸಲಾಗಿದೆ.

೧೫೪. ಅಬಕಾರಿ ಹರಾಜಿಗೆ ಸಂಬಂಧಿಸಿದಂತೆ ಹೇಳುವುದಾದರೆ ಬೆಂಗಳೂರು ನಗರ ಜಿಲ್ಲೆ ಹೊರತುಪಡಿಸಿ, ರಾಜ್ಯದ ಎಲ್ಲ ಕಡೆ ಮಾದಕಪಾನೀಯಗಳ ಚಿಲ್ಲರೆ ಮಾರಾಟದ ಗುತ್ತಿಗೆ ಹಕ್ಕನ್ನು ತಾಲ್ಲೂಕುವಾರು ಮತ್ತು ಮಂಡಲ್‌ವಾರು ಆಧಾರದ ಮೇಲೆ ನೀಡಲು ತೀರ್ಮಾನಿಸಲಾಗಿದೆ. ಇದರಿಂದಾಗಿ ಅಧಿಕ ಸಂಖ್ಯೆಯಲ್ಲಿ ಬಿಡ್ಡುದಾರರು ಹರಾಜಿನಲ್ಲಿ ಭಾಗವಹಿಸಿ ರಾಜ್ಯಕ್ಕೆ ಅಧಿಕ ಆದಾಯ ಬರುವಂತಾಗುತ್ತದೆ. ೧೯೯೩-೯೪ನೇ ಸಾಲಿನ ಅಬ್ಕಾರಿ ಹರಾಜನ್ನು ಟೆಂಡರ್ ಕಂ ಆಕ್ಷನ್ ಆಧಾರದ ಮೇಲೆ ನಡೆಸಲಾಗುವುದು. ಇದು ಹಿಂದೆ ನಡೆಯುತ್ತಿದ್ದ ಸಾರ್ವಜನಿಕ ಹರಾಜಿಗಿಂತ ಭಿನ್ನವಾಗಿರುತ್ತದೆ.

೧೫೫. ೧೯೯೩-೯೪ನೇ ಅಬಕಾರಿ ವರ್ಷದಿಂದ ಮತ್ತು ಆ ತರುವಾಯ, ಯಶಸ್ವೀ ಬಿಡ್ಡುದಾರರು ಠೇವಣಿ ಹಣದ (ಇಎಮ್‌ಡಿ) ಜೊತೆಗೆ ಕೊಡಬೇಕಾದ ಬ್ಯಾಂಕ್ ಗ್ಯಾರಂಟಿಯನ್ನು ಈಗ ೧೯೯೨-೯೩ನೇ ಸಾಲಿನಲ್ಲಿ ಜಾರಿಯಲ್ಲಿರುವ ೨ ೧/೧೦ ಮಾಸಿಕ ಕಿಸ್ತು ಹಣದ ಬದಲು ೩ ೧/೧೦ ಮಾಸಿಕ ಕಿಸ್ತು ಹಣಕ್ಕೆ ಹೆಚ್ಚಿಸಲಾಗುವುದು. ಹಾಗೆಯೇ, ಈಗ, ತಿಂಗಳ ಕೊನೆಯಲ್ಲಿ ಕೊಡುತ್ತಿರುವ ಮಾಸಿಕ ಕಿಸ್ತು ಹಣವನ್ನು ಆಯಾ ತಿಂಗಳ ೧೦ನೇ ತಾರೀಖಿನ ಒಳಗೇ ಸಂದಾಯ ಮಾಡುವಂತೆ ಮೊದಲಿನ ಪದ್ಧತಿಯನ್ನೇ ಜಾರಿಗೆ ತರಲಾಗುವುದು. ಈ ಕ್ರಮಗಳು ಸಾಕಷ್ಟು ಭದ್ರತೆ ಮತ್ತು ಸಮಯಕ್ಕೆ ಸರಿಯಾಗಿ ಗುತ್ತಿಗೆದಾರರಿಂದ ಕಿಸ್ತು ಹಣ ಸಂದಾಯವಾಗುವುದನ್ನು ಸುನಿಶ್ಚಿತಗೊಳಿಸುತ್ತವೆ.

೧೫೬. ಗುಲ್ಬರ್ಗ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಸೇಂದಿ ಮಾರಾಟವನ್ನು ನಿಷೇಧಿಸಲಾಗುವುದು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಸೇಂದಿ ಮಾರಾಟಕ್ಕೆ ಅನುಮತಿ ನೀಡಲಾಗುವುದು.

ಸ್ಟಾಂಪುಗಳು ಮತ್ತು ನೋಂದಣಿ

೧೫೭. ಬಜೆಟ್ ಅಂದಾಜಿನಂತೆಯೇ ೧೯೯೨-೯೩ ನೇ ಸಾಲಿಗೆ ಪರಿಷ್ಕೃತ ಅಂದಾಜು ೨೭೫ ಕೋಟಿ ರೂಪಾಯಿಗಳಾಗುವುದೆಂದು ನಿರೀಕ್ಷಿಸಲಾಗಿದೆ. ೧೯೯೩-೯೪ರಲ್ಲಿ ೩೦೦ ಕೋಟಿ ರೂಪಾಯಿ ಆದಾಯ ಬರುವ ನಿರೀಕ್ಷೆಯಿದೆ. ಮೌಲ್ಯ ನಿರ್ಣಯ ಮಾಡಲು ಸರ್ಕಾರವು ಪ್ರತಿಯೊಂದು ತಾಲ್ಲೂಕಿನಲ್ಲಿ ಮೌಲ್ಯ ನಿರ್ಣಯ ಸಮಿತಿಗಳನ್ನೂ ರಚಿಸಿದೆ. ಈ ಕ್ರಮದಿಂದಾಗಿ ನೋಂದಣಿ ಕಾರ್ಯ ವಿಧಾನದಲ್ಲಿ ಸುಧಾರಣೆಯಾಗುವುದಲ್ಲದೆ ಆದಾಯ ಕೂಡಾ ಹೆಚ್ಚಾಗುವುದೆಂದು ನಿರೀಕ್ಷಿಸಲಾಗಿದೆ.

ಮೋಟಾರು ವಾಹನ ತೆರಿಗೆ.

೧೫೮. ಮೋಟಾರು ವಾಹನ ತೆರಿಗೆ ವ್ಯವಸ್ಥೆಯನ್ನು ಅನುಬಂಧ xii ರಲ್ಲಿ ಹೇಳಿರುವಂತೆ ಹೆಚ್ಚು ಸಮಂಜಸಗೊಳಿಸಲು ನಾನು ಉದ್ದೇಶಿಸಿದ್ದೇನೆ. ೧೯೫೭ರ ಕರ್ನಾಟಕ ಮೋಟಾರು ವಾಹನ ತೆರಿಗೆ ಅಧಿನಿಯಮ ಹಾಗೂ ನಿಯಮಗಳಿಗೆ ಅವಶ್ಯಕ ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ. ಈ ಕ್ರಮಗಳಿಂದ ೨.೦೩ ಕೋಟಿ ರೂಪಾಯಿ ಹೆಚ್ಚುವರಿ ಆದಾಯವನ್ನು ನಿರೀಕ್ಷಿಸಲಾಗಿದೆ.

೧೫೯. ಸಾರ್ವಜನಿಕರಿಗೆ ಇನ್ನು ಉತ್ತಮ ಪ್ರಯಾಣ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಕಾರ್ಯಾಚರಣೆಗೆ ಬಾಧಕವಾಗದಂತೆ ಖಾಸಗಿವಲಯದಲ್ಲಿನ ಮಾಲೀಕರುಗಳಿಗೆ ಹೇಗೆ ಉತ್ತೇಜನ ನೀಡಬಹುದೆಂಬುದನ್ನು ಸರ್ಕಾರವು ತೀವ್ರವಾಗಿ ಆಲೋಚಿಸುತ್ತದೆ.

ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವುದು.

೧೬೦. ಕೆಲವು ನಿಯಮಗಳು ಹಾಗೂ ಷರತ್ತುಗಳಿಗೊಳಪಟ್ಟು ನಗರ ಪ್ರದೇಶದಲ್ಲಿರುವ ಕೆಲವು ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸಲು ಉದ್ದೇಶಿಸಲಾಗಿದೆ.
ಆ ನಿಯಮಗಳನ್ನು ಸಧ್ಯದಲ್ಲಿಯೇ ಪ್ರಕಟಿಸಲಾಗುವುದು. ಈ ಕ್ರಮದಿಂದ ೧೯೯೩-೯೪ ರಲ್ಲಿ ೨೦ ಕೋಟಿ ರೂ. ಗಳ ಆದಾಯ ದೊರೆಯುವುದೆಂದು ನಿರೀಕ್ಷಿಸಲಾಗಿದೆ.

ಪರಿಷ್ಕೃತ ಅಂದಾಜುಗಳು ೧೯೯೨ - ೯೩

೧೬೧. ೫೬೭೨.೯೧ ಕೋಟಿ ರೂ.ಗಳ ಬಜೆಟ್ ಅಂದಾಜುಗಳಿಗೆ ಪ್ರತಿಯಾಗಿ ಈ ವರ್ಷ ೫೯೫೩.೨೨ ಕೋಟಿ ರೂ.ಗಳ ಆದಾಯ ನಿರೀಕ್ಷಿಸಲಾಗಿದೆ. ಕೇಂದ್ರ ತೆರಿಗೆಗಳಲ್ಲಿ ರಾಜ್ಯದ ಪಾಲು ೮೩೯.೨೪ ಕೋಟಿ ರೂ.ಗಳೆಂದು ಈ ಮೊದಲು ಅಂದಾಜು ಮಾಡಲಾಗಿತ್ತು. ಈಗ ಇದು ೬೭.೪೧ ಕೋಟಿ ರೂ.ಗಳಷ್ಟು ಹೆಚ್ಚಾಗಲಿದೆ. ಅಬಕಾರಿ ಬಾಬಿನಿಂದ ೫೪೫.೦೦ ಕೋಟಿ ರೂ.ಗಳ ಆದಾಯ ಬಂದಿದ್ದರೆ, ವಾಣಿಜ್ಯ ತೆರಿಗೆಗಳ ಬಾಬಿನಿಂದ ೨,೩೦೦.೦೦ ಕೋಟಿ ರೂ.ಗಳ ಆದಾಯವನ್ನು ನಿರೀಕ್ಷಿಸಲಾಗಿದೆ. ಪರಿಷ್ಕೃತ ರಾಜಸ್ವ ವೆಚ್ಚವು ೫೮೪೮.೩೮ ಕೋಟಿ ರೂ.ಗಳಾಗಿದೆ. ರಾಜಸ್ವ ಲೆಕ್ಕದಲ್ಲಿ ೧೦೪.೮೪ ಕೋಟಿ ರೂ.ಗಳ ಹೆಚ್ಚುವರಿಯನ್ನು ನಿರೀಕ್ಷಿಸಲಾಗಿದ್ದು, ಬಂಡವಾಳ ಲೆಕ್ಕದಲ್ಲಿ ೧೧೦.೪೪ ಕೋಟಿ ರೂ.ಗಳ ಕೊರತೆಯುಂಟಾಗುವುದು. ೧೯೯೨-೯೩ ರಲ್ಲಿ ಬಜೆಟ್ ಅಂದಾಜುಗಳು ೮೧.೭೬ ಕೋಟಿ ರೂ.ಗಳಾಗಿದ್ದು, ೧೯೯೨-೯೩ನೇ ವರ್ಷದ ಪರಿಷ್ಕೃತ ಅಂದಾಜುಗಳ ಪ್ರಕಾರ ಒಟ್ಟಾರೆ ಕೊರತೆ ೪೨.೮೦ ಕೋಟಿ ರೂ.ಗಳು.

ಬಜೆಟ್ ಅಂದಾಜುಗಳು ೧೯೯೩-೯೪

೧೬೨. ೧೯೯೩-೯೪ರಲ್ಲಿ ಆದಾಯ ೭೯೮೩.೬೦ ಕೋಟಿ ರೂ. ಗಳಿಗೇರುತ್ತದೆಂದು ನಿರೀಕ್ಷಿಸಲಾಗಿದ್ದು, ಇದರಲ್ಲಿ ವಾಣಿಜ್ಯ ತೆರಿಗೆ ಬಾಬಿನಿಂದ ೨೮೬೬.೦೦ ಕೋಟಿ ರೂ.ಗಳ ಆದಾಯ ಹಾಗೂ ಕೇಂದ್ರ ತೆರಿಗೆಗಳಲ್ಲಿ ರಾಜ್ಯದ ಪಾಲು ೧೦೩೩.೯೩ ಕೋಟಿ ರೂ.ಗಳಷ್ಟು ಸೇರಿದೆ. ಯೋಜನಾ ಆಯೋಗವು ೧೯೯೩-೯೪ನೇ ವರ್ಷಕ್ಕೆ ಸಂಬಂಧಿಸಿದ ಮಾರುಕಟ್ಟೆ ಸಾಲಗಳನ್ನು ೧೯೯೨-೯೩ರ ಮಟ್ಟದಲ್ಲೆ ಸ್ಥಿರಗೊಳಿಸಿತ್ತು. ರಾಜಸ್ವ ಲೆಕ್ಕದಲ್ಲಿ ೩೯೫.೧೧ ಕೋಟಿ ರೂ.ಗಳ ಹೆಚ್ಚುವರಿಯನ್ನು ನಿರೀಕ್ಷಿಸಲಾಗಿದೆ. ಬಂಡವಾಳ ಲೆಕ್ಕದಲ್ಲಿ ೪೯೨.೦೮ ಕೋಟಿ ರೂ.ಗಳ ಕೊರತೆಯಾಗುವುದೆಂದು ಅಂದಾಜು ಮಾಡಲಾಗಿದ್ದು, ಒಟ್ಟಾರೆ ಬಜೆಟ್ ಕೊರತೆ ೧೩೯.೭೭ ಕೋಟಿ ರೂ. ಗಳಷ್ಟಾಗುತ್ತದೆ, ಹೆಚ್ಚುವರಿ ಸಂಪನ್ಮೂಲಗಳನ್ನು ಸಂಗ್ರಹಿಸುವ ಮೂಲಕ (ಅನುಬಂಧ - XIII) ೪೩.೬೧ ಕೋಟಿ ರೂ.ಗಳಷ್ಟನ್ನು ಕೊರತೆಯನ್ನು ತುಂಬಿಕೊಳ್ಳಲು ನಿರೀಕ್ಷಿಸಿದ್ದು ಒಟ್ಟಾರೆ ಕೇವಲ ೯೬.೧೬ ಕೋಟಿ ರೂ.ಗಳಷ್ಟು ಕೊರತೆ ಉಳಿಯುತ್ತದೆ. ಹೆಚ್ಚು ದಕ್ಷತೆಯಿಂದ ತೆರಿಗೆ ಸಂಗ್ರಹ ಮಾಡುವ ಮೂಲಕ ಮತ್ತು ಯೋಜನೇತರ ವೆಚ್ಚದಲ್ಲಿ ಕಟ್ಟುನಿಟ್ಟಿನ ನಿಯಂತ್ರಣವನ್ನು ಹೇರುವ ಮೂಲಕ ಈ ಅಂತರ ಕಡಿಮೆಯಾಗುವುದೆಂದು ನಿರೀಕ್ಷಿಸಲಾಗಿದೆ.

೧೬೩. ನಾನು ಈಗ ೧೯೯೩-೯೪ನೇ ವರ್ಷದ ಆಯವ್ಯಯ ಅಂದಾಜುಗಳನ್ನು ಸದನದ ಪರಿಶೀಲನೆಗಾಗಿ ಮತ್ತು ಅನುಮೋದನೆಗಾಗಿ ಮಂಡಿಸುತ್ತೇನೆ.

ಬಜೆಟ್ ವಿಹಂಗಮ
(ಕೋಟಿ ರೂಪಾಯಿಗಳಲ್ಲಿ)

ಕ್ರ. ಸಂ	ಬಾಬ್ತು	ಬಜೆಟ್ ಅಂದಾಜು ೧೯೯೨-೯೩	ಪರಿಷ್ಕೃತ ಅಂದಾಜು ೧೯೯೨-೯೩	ಬಜೆಟ್ ಅಂದಾಜು ೧೯೯೩-೯೪
	ಪ್ರಾರಂಭದ ಶಿಲ್ಕು	(-)೫೮.೮೫	(-)೩೭.೨೧	(-)೪೨.೮೦
	ಎ.ರಾಜಸ್ವ ಲೆಕ್ಕ			
I	ಜಮೆ:			
	ರಾಜ್ಯತೆರಿಗೆ	೩೪೭೮.೧೧	೩೪೮೩.೪೦	೪೨೬೮.೨೭
	ಕೇಂದ್ರ ತೆರಿಗೆಯಲ್ಲಿಪಾಲು	೮೩೯.೩೪	೯೦೬.೬೫	೧೦೩೩.೯೩
	ಕೇಂದ್ರ ಸರ್ಕಾರದ ಅನುದಾನಗಳು	೬೩೭.೯೬	೭೪೪.೭೫	೭೮೧.೫೭
	ತೆರಿಗೆಯೇತರ ರಾಜಸ್ವ	೭೧೭.೫೦	೮೧೮.೪೨	೮೯೯.೮೩
	ಒಟ್ಟು-ಎ.I	೫೬೭೨.೯೧	೫೯೫೩.೨೨	೬೯೮೩.೬೦
II.	ವೆಚ್ಚ:			
	ಸಾಮಾಜಿಕ ಸೇವೆ	೨೨೧೮.೯೫	೨೨೪೯.೯೪	೨೫೭೭.೧೭
	ಆರ್ಥಿಕ ಸೇವೆ	೧೬೯೮.೧೬	೧೭೬೬.೦೨	೧೯೭೮.೫೦
	ಸಾಮಾನ್ಯ ಸೇವೆ	೧೬೩೫.೩೯	೧೭೦೧.೮೬	೧೮೮೩.೫೨
	ಸಹಾಯಾನುದಾನ ಮತ್ತು ಅಂಶದಾನ	೧೨೫.೪೭	೧೩೦.೫೪	೧೪೯.೩೦
	ಒಟ್ಟು-ಎ.II	೫೬೭೭.೯೭	೫೮೪೮.೩೬	೬೫೮೮.೪೯
ಎ.	ರಾಜಸ್ವ ಲೆಕ್ಕ ಹೆಚ್ಚುವರಿ (+)/ಕೊರತೆ (-)	(-)೫.೦೬	೧೦೪.೮೪	೩೯೫.೧೧

ನೋಟ ಕೋಟಿ ರೂಪಾಯಿಗಳಲ್ಲಿ

ಕ್ರ ಸಂ.	ಬಾಬ್ತು	ಬಜೆಟ್ ಅಂದಾಜು ೧೯೯೨-೯೩	ಪರಿಷ್ಕೃತ ಅಂದಾಜು ೧೯೯೨-೯೩	ಬಜೆಟ್ ಅಂದಾಜು ೧೯೯೩-೯೪
	ಬಿ. ಬಂಡವಾಳ ಲೆಕ್ಕ			
I.	ಜಮೆ:			
	ಭಾರತ ಸರ್ಕಾರದಿಂದ ಸಾಲ	೮೧೬.೭೭	೭೪೬.೧೩	೯೫೧.೨೯
	ಬಹಿರಂಗ ಮಾರುಕಟ್ಟೆ ಸಾಲ ಇತ್ಯಾದಿ	೧೫೬.೧೨	೧೬೫.೧೪	೧೫೬.೦೮
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಂದ ಸಾಲ	೨೯.೪೫	೨೯.೪೫	೩೨.೩೮
	ಸಾಲಗಳು ಮತ್ತು ಮುಂಗಡಗಳಿಂದ ವಸೂಲಿ	೯೧.೧೨	೯೮.೨೬	೧೧೧.೯೮
	ಸಾರ್ವಜನಿಕ ಲೆಕ್ಕ (ನಿವ್ವಳ) ಇತ್ಯಾದಿ	೧೮೫.೩೨	೨೯೮.೫೪	೪೦೨.೩೭
	ಒಟ್ಟು -ಬಿ.I	೧೨೭೯.೭೮	೧೩೨೯.೫೨	೧೬೫೪.೧೦
II.	ಬಟವಾಡೆ:			
	ಬಂಡವಾಳ ವೆಚ್ಚ (ನಿವ್ವಳ)	೭೬೬.೪೪	೭೫೭.೮೧	೧೧೨೫.೪೬
	ಕೇಂದ್ರ ಸಾಲಗಳ ಮರುಸಂದಾಯ	೧೯೭.೨೫	೧೮೦.೭೨	೧೯೪.೭೮
	ಎಲ್‌ಐಸಿ, ಆರ್‌ಬಿಐ, ಜಿಐಸಿ ಮತ್ತು ಎನ್‌ಸಿಡಿಸಿ ಇವುಗಳಿಗೆ ಸಾಲಗಳ ಮರುಸಂದಾಯ	೧೧.೨೨	೧೩.೦೫	೧೪.೧೮
	ಸಾಲಗಳ ಮತ್ತು ಮುಂಗಡಗಳ ಬಟವಾಡೆ	೫೬೭.೫೫	೪೮೮.೩೯	೮೧೧.೭೬
	ಒಟ್ಟು-ಬಿ.II	೧೫೪೨.೪೬	೧೪೩೯.೯೭	೨೧೪೬.೧೮
	ಬಿ. ಬಂಡವಾಳ ಲೆಕ್ಕ ಹೆಚ್ಚಳ (+)/ಕೊರತೆ (-)	(-)೨೬೨.೬೮	(-)೧೧೦.೪೫	(-)೪೯೨.೦೮
	ಸಿ. ವರ್ಷದ ಒಟ್ಟು ಹೆಚ್ಚಳ/ಕೊರತೆ	(-)೨೬೭.೭೪	(-)೫.೫೯	(-)೯೬.೯೭
	ಡಿ. ಮುಕ್ತಾಯದ ಶಿಲ್ಕು	(-)೩೨೬.೬೦	(-)೪೨.೮೦	(-)೧೩೯.೭೭
	ಎಆರ್‌ಎಮ್.	೨೪೪.೮೪	೦.೦೦*	೪೩.೬೧
	ಒಟ್ಟು ಹೆಚ್ಚುವರಿ/ಕೊರತೆ	(-)೮೧.೭೬	(-)೪೨.೮೦	(-)೯೬.೧೬

* ಪರಿಷ್ಕೃತ ಅಂಕಿಗಳಲ್ಲಿ ಹೆಚ್ಚುವರಿ ಸಂಪನ್ಮೂಲ ಸೇರಿದೆ.

ಸಂಪನ್ಮೂಲ – ರೂಪಾಯಿಯ ಎಷ್ಟು ಭಾಗ ಯಾವುದರಿಂದ



ವೆಚ್ಚ (ಯೋಜನೆ ಮತ್ತು ಯೋಜನೇತರ)
– ರೂಪಾಯಿಯಲ್ಲಿ ಯಾವುದಕ್ಕೆ ಎಷ್ಟೆಷ್ಟು




ಸಂಪನ್ಮೂಲಗಳು – ರಾಜ್ಯ ತೆರಿಗೆ
ಮೋಟಾರುವಾಹನ ತೆರಿಗೆ 6.35%
ಇತರೆ 3.03%
ಸ್ಟಾಂಪುಗಳು ಮತ್ತು ನೋಂದಣಿ ಶುಲ್ಕ 7.03%
ಅಬಕಾರಿ 16.44%
ವಾಣಿಜ್ಯ ತೆರಿಗೆಗಳು 67.15%

ವೆಚ್ಚ (ಯೋಜನೆ)


ಇತರೆ
21.81%
ವಿದ್ಯುಚ್ಛಕ್ತಿ
23.14%
ಕೃಷಿ
7.04%
ಕೈಗಾರಿಕೆ
7.14%
ನೀರಾವರಿ
19.83%
ಶಿಕ್ಷಣ
8.35%
ವಸತಿ, ನೀರು ಸರಬರಾಜು ಮತ್ತು
ನಗರಾಭಿವೃದ್ಧಿ
12.69%

ಅನುಬಂಧ-I

೧೯೯೩-೯೪ ಸಾಲಿಗೆ ವಿಬಾಗವಾರು ರಾಜ್ಯ ಯೋಜನಾ ಹಂಚಿಕೆ
(೨೨ನೇ ಪ್ಯಾರಾ ನೋಡಿ)

ವಿಭಾಗ	ರೂ.ಗಳಲ್ಲಿ (ಕೋಟಿ ರೂಗಳಲ್ಲಿ)	ಒಟ್ಟು ಮೊತ್ತದಲ್ಲಿ ಶೇಕಡಾ ಪ್ರಮಾಣ
ಎ.ಆರ್ಥಿಕ ಸೇವೆಗಳು		
ಕೃಷಿ ಮತ್ತು ಸಂಬಂಧಪಟ್ಟಸೇವೆ	೨೧೩.೦೩	೭.೦೪
ಗ್ರಾಮೀಣ ಅಭಿವೃದ್ಧಿ	೧೧೩.೨೩	೩.೭೪
ವಿಶೇಷ ಪ್ರದೇಶ ಯೋಜನೆ(ಹೈದರಾಬಾದ್-ಕರ್ನಾಟಕ ಮತ್ತುಗಡಿ ಪ್ರದೇಶ ಅಭಿವೃದ್ಧಿ)	೧೧೬.೨೨	೩.೮೪
ನೀರಾವರಿ ಮತ್ತು ಪ್ರವಾಹ ನಿಯಂತ್ರಣ	೬೦೦.೦೦	೧೯.೮೩
ಶಕ್ತಿ ಮೂಲಗಳು	೬೯೯.೮೦	೨೩.೧೪
ಕೈಗಾರಿಕೆ ಮತ್ತು ಖನಿಜಗಳು	೨೧೬.೧೯	೭.೧೪
ಸಾರಿಗೆ	೧೧೨.೨೮	೩.೭೧
ವಿಜ್ಞಾನ ತಂತ್ರಜ್ಞಾನ ಮತ್ತುಪರಿಸರ	೫.೦೦	೦.೧೭
ಸಾಮಾನ್ಯ ಆರ್ಥಿಕ ಸೇವೆಗಳು	೮.೦೮	೦.೨೬
ಬಿ.ಸಮಾಜ ಸೇವೆಗಳು		
ಶಿಕ್ಷಣ, ಕ್ರೀಡೆಗಳು, ಕಲೆ ಮತ್ತು ಸಂಸ್ಕೃತಿ	೨೫೨.೬೧	೮.೩೫
ಆರೋಗ್ಯ	೧೧೨.೪೨	೩.೭೨
ನೀರು ಸರಬರಾಜು, ವಸತಿ ಮತ್ತು ನಗರಾಭಿವೃದ್ಧಿ	೩೮೩.೬೭	೧೨.೬೯
ವಾರ್ತಾ ಮತ್ತು ಪ್ರಚಾರ	೩.೧೮	೦.೧೧
ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳು ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ	೭೯.೫೩	೨.೬೩
ಸಮಾಜ ಕಲ್ಯಾಣ ಮತ್ತು ಪೌಷ್ಠಿಕ ಆಹಾರ	೪೪.೫೫	೧.೪೭
ಕಾರ್ಮಿಕ ಮತ್ತು ಕಾರ್ಮಿಕ ಕಲ್ಯಾಣ	೧೪.೩೨	೦.೪೭
ಸಿ. ಸಾಮಾನ್ಯ ಸೇವೆಗಳು	೫೦.೮೯	೧.೬೯
ಒಟ್ಟು	೩೦೨೫.೦೦	೧೦೦.೦೦

ಅನುಬಂಧ-II

ನಿರ್ದೇಶಾರ್ಥಕ ಯೋಜನೆ

(೨೫ ನೇ ಪ್ಯಾರಾ ನೋಡಿ)

	೧೯೯೩-೯೪	೧೯೯೪-೯೫	೧೯೯೫-೯೬	೧೯೯೬-೯೭	೧೯೯೭-೯೮	ಒಟ್ಟು
					(ಕೋಟಿ.ರೂಗಳಲ್ಲಿ)	
ಬಂಡವಾಳ ಹೂಡಿಕೆ	೨೩೦೦	೩೦೦೦	೩೮೦೦	೪೮೦೦	೬೧೦೦	೨೦೦೦೦
ಸರ್ಕಾರ/ಸರ್ಕಾರಿ ಏಜೆನ್ಸಿಗಳು (೧೦%)	೨೩೦	೩೦೦	೩೮೦	೪೮೦	೬೧೦	೨೦೦೦
ಹಣಕಾಸು ಸಂಸ್ಥೆಗಳು ಮತ್ತು ಬ್ಯಾಂಕುಗಳು (೬೫%)	೧೪೯೫	೧೯೫೦	೨೪೭೦	೩೧೨೦	೩೯೬೫	೧೩೦೦೦
ಖಾಸಗಿ ವಲಯ (ಪ್ರವರ್ತಕರು) (೨೫%)	೫೭೫	೭೫೦	೯೫೦	೧೨೦೦	೧೫೨೫	೫೦೦೦

ಅನುಬಂಧ-III

(ಪ್ಯಾರಾ ೧೨೧ ನೋಡಿ)

ಇದುವರೆವಿಗೂ ಬಹುಹಂತ ಮಾರಾಟ ತೆರಿಗೆಗೊಳಪಟ್ಟಿದ್ದು ಈಗ ಏಕ ಹಂತ ಮಾರಾಟ ತೆರಿಗೆಗೆ ಒಳಪಡಲಿರುವ ವಸ್ತುಗಳಲ್ಲಿ ಮಾರಾಟ ತೆರಿಗೆ ದರ ಇಳಿಸಲು ಉದ್ದೇಶಿಸಿರುವ ವಸ್ತುಗಳು

ಕ್ರಮ ಸಂಖ್ಯೆ	ವಸ್ತುವಿನ ಹೆಸರು	ಈಗಿರುವ ತೆರಿಗೆ ದರ (ಶೇಕಡ)	ಉದ್ದೇಶಿತ ತೆರಿಗೆದರ (ಶೇಕಡ)
೧	೨	೩	೪
೧.	ಗೋಣಿ ಚೀಲಗಳು, ಗೋಣಿ ತಾಟುಗಳು (ಬಟಾರಗಳು ಸೇರಿ) ಮತ್ತು ಸೆಣಬಿನ ಬಟ್ಟೆ	೩	೪
೨.	ಚಿನ್ನ ಮತ್ತು ಬೆಳ್ಳಿಯ ವಸ್ತುಗಳು (ಅಮೂಲ್ಯ ಹರಳುಗಳಿಂದ ಕೂಡಿದ ಅಥವಾ ಕೂಡಿರದ)	೨	೨
೩.	ಬಿದಿರಿನ ಕಡ್ಡಿಗಳು (೩ಂಸೆ.ಮಿ.ಕ್ಕಿಂತ ಹೆಚ್ಚು ಉದ್ದವಿರದ್ದು)	೪	೪
೪.	ಶಾವಿಗೆ	೪	೪
೫.	ಬಾಟಲಿಗಳಲ್ಲಿ ತುಂಬಿದ ಸುಗಂಧಿತ(ಫ್ಲೇವರ್ಡ್) ಹಾಲು ಮತ್ತು ಮಿಲ್ಕೋವಿನ್ ಸಸಾರಜನಕ ಹೆಚ್ಚಿರುವ ಕಡಲೆ ಕಾಯಿ ಹಾಲು)	೪	೪
೬.	ಸತು, ಸೀಸ ಮತ್ತು ಕ್ಯಾಡ್‌ಮಿಯಮ್	೩	೩
೭.	ಗೋಡಂಬಿ ಸಿಪ್ಪೆಯ ಎಣ್ಣೆ	೨	೨
೮.	ಮರಗೆಣಸು, ಜೋಳ ಮತ್ತು ಮುಸುಕಿನ ಜೋಳ ಹಾಗೂ ಅವುಗಳ ಉತ್ಪನ್ನಗಳಿಂದ ತಯಾರಿಸಿದ ಲಿಕ್ವಿಡ್ ಗ್ಲುಕೋಸ್, ಡೆಕ್ಸ್‌ಟ್ರೋಸ್, ಡೆಕ್ಸ್‌ಟ್ರೀನ್, ಮುಸುಕಿನ ಜೋಳದ ಗಂಜಿ (ಪಿಷ್ಟು, ಗ್ಲೂಟೆನ್, ಗ್ರಿಟ್‌ಗಳು, ಮುಸುಕಿನ ಜೋಳದ ಹೊಟ್ಟು, ಎಣ್ಣೆ ಹಿಂಡಿ, ಮುಸುಕಿನ ಜೋಳದ ಸ್ಟೀಪ್ ಲಿಕ್ಕರ್	೧.೫	೩
೯.	ವಿದ್ಯುತ್ ಸಾಮಾನುಗಳ ಉತ್ಪಾದನೆಗೆ ಉಪಯೋಗಿಸಲು ರಾಜ್ಯದಲ್ಲಿರುವ ವಿದ್ಯುತ್ ಕೈಗಾರಿಕಗಳಿಗೆ ಮಾರಾಟ ಮಾಡಿದ ಕತ್ತರಿಸಿದ ಲೋಹದ ಹಾಳೆಗಳು ಮತ್ತು ಅಚ್ಚುಗಳು	೩	೪

ಅನುಬಂಧ-IV

(ಪ್ಯಾರಾ ೧೨೩ ನೋಡಿ)

ಮಾರಾಟ ತೆರಿಗೆ ದರದಲ್ಲಿ ಮಾರ್ಪಾಟು ಮಾಡಲು ಉದ್ದೇಶಿಸಿರುವ ವಸ್ತುಗಳು

ಕ್ರಮ ಸಂಖ್ಯೆ	ವಸ್ತುವಿನ ಹೆಸರು	ಈಗಿರುವ ತೆರಿಗೆ ದರ (ಶೇಕಡ)	ಪ್ರಸ್ತಾವಿತ ತೆರಿಗೆ ದರ (ಶೇಕಡ)
೧.	೨	೩	೪
೧.	ಬ್ಯಾಟರಿಗಳು ಮತ್ತು ಅವುಗಳ ಭಾಗಗಳು (ಡ್ರೈಸೆಲ್ ಮತ್ತು ಡ್ರೈಸೆಲ್ ಬ್ಯಾಟರಿಗಳನ್ನು ಹೊರತುಪಡಿಸಿ)	೨೦	೧೫
೨.	ಕಾಸ್ಟಿಕ್ ಸೋಡಾ	೧೦	೬
೩.	ಪಟಾಕಿಗಳು	೧೫	೧೦
೪.	ಎಲ್ಲಾ ತರಹದ ಪೀಠೋಪಕರಣಗಳು (ಉಕ್ಕಿನ ಬೀರುಗಳು, ಖಜಾನೆಗಳು ಮತ್ತು ಸಂದೂಕುಗಳು, ಬಿದಿರು ಮತ್ತು ಬೆತ್ತದ ಪೀಠೋಪಕರಣಗಳು ಹಾಗೂ ಪೂರ್ತಿಯಾಗಿ ಕಬ್ಬಿಣದಿಂದಲೇ ಮಾಡಿದ ಖುರ್ಚಿಗಳು, ಮೇಜುಗಳು ಮತ್ತು ಮಂಚಗಳನ್ನು ಹೊರತುಪಡಿಸಿ)	೧೫/೧೩	೧೨
೫.	ಒಳ ಉಡುಪುಗಳು (ಹತ್ತಿ ಮತ್ತು ಉಣ್ಣೆಯ ಒಳ ಉಡುಪುಗಳನ್ನು ಬಿಟ್ಟು)	೮	೩
೬.	ವೈಬ್ರೇಟರಿ ಕಾಂಪ್ಯಾಕ್ಟ್‌ರ್‌ಗಳು (ಅರ್ತ್ ಮೂವಿಂಗ್ ಮೆಶಿನರಿ) ಮತ್ತು ಪೇವರ್‌ಗಳು	೧೩	೬
೭.	ಮೋಟಾರ್ ವಾಹನಗಳ ಬಿಡಿ ಭಾಗಗಳು ಮತ್ತು ಸಾಧನ ಸಾಮಗ್ರಿಗಳು (ರಬ್ಬರ್ ಮತ್ತು ಇತರೆ ಟೈರುಗಳು, ಟ್ಯೂಬುಗಳು ಮತ್ತು ಫ್ಲಾಪ್‌ಗಳು, ಬ್ಯಾಟರಿಗಳು,ಡೀಸೆಲ್ ಎಂಜಿನ್ ಮತ್ತು ಅದರ ಭಾಗಗಳನ್ನು ಹೊರತು ಪಡಿಸಿ).	೧೩	೧೦
೮.	ಬಣ್ಣಗಳು, ವರ್ಣಗಳು, ವಾರ್ನಿಷ್‌ಗಳು, ವರ್ಣ ದ್ರವ್ಯಗಳು, ಪಾಲಿಷ್‌ಗಳು, ನೀಲಿ, ಗಾಜುಲೇಪ, ನಯಗಾರೆ (ಪಟ್ಟಿ), ಬೇಲ್ ಎಣ್ಣೆ, ಎಲ್ಲಾ ತರಹದ ಟರ್ಪೆಂಟೈನ್, ಪ್ರೈಮರ್‌ಗಳು ಮತ್ತು ಥಿನ್ನರ್‌ಗಳು	೧೫	೧೨
೯.	ಕಾಗದಗಳು (ಎಲ್ಲಾ ಬಗೆಯವು), ಪಲ್ಪ್ ಬೋರ್ಡುಗಳು ಆರ್ಟ ಬೋರ್ಡಗಳು ಡೂಪ್ಲೆ ಬೋರ್ಡುಗಳು, ಟ್ರಿಪ್ಲೆ ಬೋರ್ಡ್‌ಗಳು, ಕಾರ್ಡ್ ಬೋರ್ಡುಗಳು, ಕಾರ್ರುಗೇಟೆಡ್ ಬೋರ್ಡಗಳು ಮತ್ತು ಅಂತಹವೇ ವಸ್ತುಗಳು	೮	೪

೧	೨	೩	೪
೧೦.	ಪಾಲಿಥಿನ್, ಪಾಲಿವಿನ್ಯೆಲ್ ಕ್ಲೋರೈಡ್, ಪಾಲಿಪ್ರೊಪೆಲೀನ್, ಪಾಲಿಯಿಸ್ಟ್ರೀನ್ ಮತ್ತು ಅಂತಹದೇ ವಸ್ತುಗಳನ್ನೊಳಗೊಂಡಂತೆ ಎಲ್ಲಾ ತರಹದ ಮತ್ತು ಎಲ್ಲಾ ರೂಪಗಳ ಪ್ಲಾಸ್ಟಿಕ್‌ನಿಂದ ತಯಾರಿಸಿದ ವಸ್ತುಗಳು ಮತ್ತು ಪ್ಲಾಸ್ಟಿಕ್ ಹಾಳೆಗಳು	೧೦	೬
೧೧.	ಶೈತ್ಯಾಗಾರ ಸ್ಥಾವರಗಳು ಮತ್ತು ಸಾಧನಗಳು ಹಾಗೂ ಅವುಗಳ ಬಿಡಿಭಾಗಗಳು	೧೮	೧೨
೧೨.	ತಂಪು, ಹವಾಯಂತ್ರಗಳು, ಹವಾ ನಿಯಂತ್ರಣ ಸ್ಥಾವರಗಳು ಮತ್ತು ಹವಾನಿಯಂತ್ರಕಗಳು ಹಾಗೂ ಅವುಗಳ ಬಿಡಿ ಭಾಗಗಳು	೧೫	೧೨
೧೩.	ಸ್ಲಾಟೆಡ್ ಆ್ಯಂಗಲ್‌ಗಳು ಮತ್ತು ಜೋಡಣೆಗೆ ಸಿದ್ಧವಾದ ಸ್ಟೀಲ್ ರ್‍ಯಾಕ್‌ಗಳ ಭಾಗಗಳು	೧೩	೧೨
೧೪.	ಶಹಬಾದ್ ಕಲ್ಲುಗಳು, ಹಾಸುಗಲ್ಲುಗಳು ಮತ್ತು ಬಿಲ್ಲೆಗಳು ಹಾಗೂ ನುಣುಪು ಮಾಡಿರದ ಕಡಪಾ ಕಲ್ಲುಗಳು, ಹಾಸುಗಲ್ಲುಗಳು ಮತ್ತು, ಬಿಲ್ಲೆಗಳು	೧೦/೬	೫
೧೫.	ಬ್ರಾಂಡ್ ಇಲ್ಲದ ಚಹಾ ಪುಡಿ	೧೩	೮
೧೬.	ರಸಾಯನಿಕ ವಸ್ತುಗಳು (ಎಲ್ಲಾ ತರಹದ)	೧೦/೭	೪
೧೭.	ಗೃಹ ಉಪಯೋಗಿ ವಿದ್ಯುತ್ ಮಿಕ್ಸರ್‌ಗಳು ಮತ್ತು ಗ್ರೈಂಡರ್‌ಗಳು	೧೨	೧೦
೧೮.	ಭಾರಿ ಸರಕು ವಾಹನಗಳು	೧೦	೬
೧೯.	ಕಂಟೇನರ್ ಸ್ಟ್ಯಾಕಿಂಗ್ ಸಾಧನಗಳು, ಫೋರ್ಕ್ ಲಿಫ್ಟ್‌ಟ್ರಕ್ಕುಗಳು ಮತ್ತು ಸಂಚಾರಿ ಕ್ರೇನ್‌ಗಳು	೧೩	೬

ಅನುಬಂಧ-V

(೧೨೮ನೇ ಪ್ಯಾರಾ ನೋಡಿ)

ಒಂದೇ ನಮೂದಿನ ವ್ಯಾಪ್ತಿಗೆ ತರಲು ಮತ್ತು ಒಂದೇ ಮಾರಾಟ ತೆರಿಗೆಗೆ ಉದ್ದೇಶಿಸಿರುವ ವಸ್ತುಗಳು

ಕ್ರಮ ಸಂಖ್ಯೆ	ವಸ್ತುವಿನ ಹೆಸರು	ಈಗಿರುವ ತೆರಿಗೆ ದರ (ಶೇಕಡ)	ಉದ್ದೇಶಿತ ತೆರಿಗೆ ದರ (ಶೇಕಡ)
೧	೨	೩	೪
೧.	ಇಂಜಿನ್ ಮತ್ತು ಅದರ ಬಿಡಿ ಭಾಗಗಳನ್ನು ಸೇರಿದಂತೆ ಟ್ರಾಕ್ಟರ್ ಮತ್ತು ಪವರ್ ಟಿಲ್ಲರ್‌ಗಳ ಭಾಗಗಳು ಮತ್ತು ಸಾಧನ ಸಾಮಗ್ರಿಗಳು	೪/೧೦	೪
೨.	ಆಡಿಯೋ ಮತ್ತು ವಿಡಿಯೋ ಕ್ಯಾಸೆಟ್ ಪ್ಲೇಯರ್ ಮತ್ತು ರೆಕಾರ್ಡ್‌ರ್‌ಗಳ ಹೆಡ್ ಕ್ಲೀನರ್‌ಗಳು ಮತ್ತು ಎಲೆಕ್ಟ್ರಾನಿಕ್ ಸಾಮಾನುಗಳಲ್ಲಿ ಉಪಯೋಗಿಸುವ ಕೀಲೆಣ್ಣೆ	೬/೧೫	೬
೩.	ತಂಪು ಹವಾಯಂತ್ರಗಳ, ಹವಾನಿಯಂತ್ರಣ ಸ್ಥಾವರಗಳ, ಹವಾ ನಿಯಂತ್ರಕಗಳ, ಶೈತ್ಯಾಗಾರ ಸ್ಥಾವರಗಳು ಮತ್ತು ಸಾಧನಗಳ ಬಿಡಿ ಭಾಗಗಳು ಮತ್ತು ಸಾಧನ ಸಾಮಗ್ರಿಗಳು	೧೫/೧೮	೧೨
೪.	ಹೊಲಿಗೆ ವಸ್ತುಗಳಾದ ಸೂಜಿಗಳು, ಕತ್ತರಿಗಳು, ಕೊಂಡಿಗಳು, ಗುಂಡಿಗಳು, ಮತ್ತು ಜಿಪ್‌ಗಳು	೬/೧೦/೩	೮
೫.	ಎಲ್ಲಾ ತರಹದ ಒಳ ಉಡುಪುಗಳು (ಉಣ್ಣೆಒಳ ಉಡುಪುಗಳನ್ನು ಬಿಟ್ಟು)	೩/೮	೩
೬.	ಟ್ರೋಫಿಗಳು, ಪ್ರಶಸ್ತಿಪದಕಗಳು ಮತ್ತು ಪ್ರಶಸ್ತಿ ಫಲಕಗಳೂ ಸೇರಿದಂತೆ, ಆದರೆ, ಧರಿಸುವ ಉಡುಪುಗಳನ್ನುಬಿಟ್ಟು ಮಿಕ್ಕೆಲ್ಲಾ ಕ್ರೀಡಾ ಸಾಮಗ್ರಿಗಳು	೩/೬/೧೦	೩
೭.	ಎಲ್ಲಾ ತರಹದಪೀಠೋಪಕರಣಗಳು (ಉಕ್ಕಿನ ಬೀರುಗಳು, ಖಜಾನೆಗಳು ಮತ್ತು ಸಂದೂಕುಗಳು, ಬೆತ್ತ ಮತ್ತು ಬಿದಿರಿನ ಪೀಠೋಪಕರಣಗಳು ಹಾಗೂ ಪೂರ್ತಿಯಾಗಿ ಕಬ್ಬಿಣ ಮತ್ತು ಉಕ್ಕಿನಿಂದ ಮಾಡಿದ ಖುರ್ಚಿಗಳು, ಮೇಜುಗಳು ಮತ್ತು ಮಂಚಗಳನ್ನು ಹೊರತುಪಡಿಸಿ)	೧೩/೧೫	೧೨
೮.	ಎಲ್ಲಾ ತರಹದ ಗೊಂಬೆಗಳು/ಆಟದ ಸಾಮಾನುಗಳು	೬/೧೦/೧೩	೮
೯.	ಪಿಂಗಾಣಿ ಮಡಿಕೆ ಕುಡಿಕೆಗಳು (ಕ್ರಾಕರಿ), ಚೂರಿ ಕತ್ತರಿಗಳು (ಕಟ್ಲರಿ) ಮತ್ತು ಊಟದ ಗಾಜಿನ ಪಾತ್ರೆಗಳು ಮತ್ತು ಗೃಹ ಉಪಯೋಗಿ ಗಾಜಿನ ವಸ್ತುಗಳು	೧೦/೧೩	೧೦

೧	೨	೩	೪
